

# ರಂಗನ್ನೋ ಮಲೆ ಮಂಗನ್ನೋ


ತುಳು ಮೂಲ

ಯಜ್ಞಾವತಿ ಕೇಶವ ಕಂಗೆನ್

ಕನ್ನಡ ಅನುವಾದ

ಮುಹಮ್ಮದ್ ಕುಳಾಯಿ



# ರಂಗನೋ ಮಲೆ ಮಂಗನೋ!

ಮುಹಮ್ಮದ್ ಕುಳಾಯಿ

ಲೋಹಿಯಾ ಪ್ರಕಾಶನ
ಬಳ್ಳಾರಿ

# ರಂಗನೋ ಮಲೆ ಮಂಗನೋ!

ಕಾದಂಬರಿ

ತುಳುಮೂಲ
ಯಜ್ಞಾವತಿ ಕೇಶವ ಕಂಗೆನ್

ಕನ್ನಡ ಅನುವಾದ
ಮುಹಮ್ಮದ್ ಕುಳಾಯಿ

ಲೋಹಿಯಾ ಪ್ರಕಾಶನ
ಬಳ್ಳಾರಿ



**RANGANO MALE MANGANO! :**
A Novel in Tulu by Yajnavathi Keshava Kangen :
Translated by :
Muhammed Kulai, Kukkady Emporium, Bakampody Post, Mangalore
Dakshina Kannada-575 101, Ph : 08251-2409364

Published by
**LOHIYA PRAKASHANA**
'Kshitija' Kappagallu Road
Gandhi Nagar, Bellary - 583 103
Tel : 08392-257412

ISBN : 81-87731-61-3

FIRST IMPRESSION - 2005

COPY RIGHT : MUHAMMED KULAI

PAGES : X + 56

PRICE : **30/-**

COVER PAGE : MOHAN SONA

Printed at :
**VISHWAS PRINTS**
Bangalore-18

# ಸೋದರ ಭಾಷೆಯಲ್ಲಿ ತುಳು ಸಂಸ್ಕೃತಿಯ ಅನಾವರಣ

ನವರಾತ್ರಿಯ ದಿನಗಳಲ್ಲಿ ಹಾಲು ಮಾರುವಾಕೆಯ ವೇಷ ಹಾಕಿ ಹೆಸರು ಗಳಿಸಿದ್ದನ್ನೇ ರಂಗ ನಾಟಕ ಕಂಪೆನಿಗೆ ಸೇರಲು ಒಂದು ಶಿಫಾರಸು ಅಂದುಕೊಂಡಿದ್ದ. ಕಂಪೆನಿ ನಾಟಕದ ನಾರ್ಣಪ್ಪಯ್ಯನಿಗೆ ತನ್ನ ಫೊಟೋ ತೋರಿಸುತ್ತ ತಾನೂ ಸೇರಿಕೊಳ್ಳುವ ಹಂಬಲ ವ್ಯಕ್ತಪಡಿಸಿದ. ಕಂಪೆನಿಯಲ್ಲಿ ಇದ್ದವರೆಲ್ಲ ಇಷ್ಟರಲ್ಲೇ ನಾರ್ಣಪ್ಪಯ್ಯನ ಆರ್ಥಿಕ ಮುಗ್ಗಟ್ಟನ್ನು ತಿಳಿದುಕೊಂಡು ಒಬ್ಬೊಬ್ಬರೇ ಬಿಟ್ಟು ಹೋಗುತ್ತಿದ್ದರು. ಈಗ ನೋಡಿದರೆ ನಾರ್ಣಪ್ಪಯ್ಯ, ಅವನ ಮಗ ಮತ್ತು ಈ ಹೊಸಬ ಸೇರಿ ಒಟ್ಟಿನಲ್ಲಿ ಮೂರೇ ಮಂದಿಯ ಕಂಪೆನಿಯದು.

ಒಂದು ದಿನ ಟೆಲಿಗ್ರಾಮ್ ಬಂದ ಕೂಡಲೇ ಅಲೆಮಾರಿ ರಂಗ ಹೀಗಾದರೂ ಹೋಗಿ ಒಳ್ಳೆಯ ದಾರಿಗೆ ಬರುವುದಿದ್ದರೆ ಬರಲಿ ಎಂದುಕೊಂಡು ತಾಯಿ ಗಂಗೆ ಮಗನನ್ನು ಕಾಸರಗೋಡಿಗೆ ಕಳುಹಿಸಿಕೊಟ್ಟಳು. ಪೋಲಿ ಕೂಟದಲ್ಲಿ ಸೇರಿಕೊಂಡು ಇಸ್ಪೀಟ್ ಆಟ ಆಡುತ್ತಿದ್ದ ಕೋಳಿ ಮಾಲಿಂಗನ ಮಗ ರಂಗನನ್ನು ಹೇಗಾದರೂ ಒಳ್ಳೆಯ ದಾರಿಯಲ್ಲಿ ಹಾಕಬೇಕೆಂದು ಆಕೆಗೆ ಇತ್ತು. ರಂಗನೂ ದೂರದ ದುಬಾಯಿಗೆ ಹೊರಡುವ ತಯಾರಿಯಲ್ಲಿ ರೈಲು ಹತ್ತಿ ಹೋಗಿದ್ದ.

ಹೋದ ಕೂಡಲೇ ಶಾಕುಂತಲ ನಾಟಕದಲ್ಲಿ ಕಣ್ವ ಋಷಿಯ ವೇಷ ರಂಗನಿಗೆ ಪಾಸಾಯಿತು. ಆಯಿತು ಎಂದರೆ ತಂದೆ ಮಗನನ್ನು ಹೊರತುಪಡಿಸಿದರೆ ಅಲ್ಲಿದ್ದುದು ರಂಗನೊಬ್ಬನೇ. ಹಾಗಾಗಿ ಮರು ದೃಶ್ಯದಲ್ಲೇ ಶಕುಂತಳೆಯ ಸಖಿಯ ವೇಷದಲ್ಲಿ ರಂಗನೇ ಕಾಣಿಸಿಕೊಳ್ಳಬೇಕಾಯಿತು. ಋಷಿಯ ವೇಷದ ಗ್ವಾಂಪಸ್ ಅಂಗಿ ಹಾಗೂ ಕಿರೀಟ ಬದಲಿಸಿ ಹೆಣ್ಣಿನ ರೂಪದಲ್ಲಿ ರಂಗನ ಪ್ರವೇಶವಾಗಿದೆ ಯಾದರೂ ಋಷಿ ವೇಷಕ್ಕಾಗಿ ಕಟ್ಟಿಕೊಂಡಿದ್ದ ಮೀಸೆ ಹಾಗೆಯೇ ಉಳಿದಿತ್ತು.

ನಾರ್ಣಪ್ಪಯ್ಯನ ಕಂಪೆನಿ ನಾಟಕದ ಈ ತರದ ಅಚಾತುರ್ಯಗಳು ಪ್ರೇಕ್ಷಕ ವರ್ಗಕ್ಕೆ ಹೊಸತಾಗಿರಲಿಲ್ಲ. ಆದರೆ ಈ ಬಾರಿಯಂತೂ ಅವರಿಂದ ಸಹಿಸಿಕೊಳ್ಳಲಾಗಲಿಲ್ಲ. ಎಲ್ಲರೂ ಬೆಂಚು ಕುರ್ಚಿಗಳಿಗೆ ಡಬಡಬ ಬಡಿದರೇ ಬಡಿದರು. ಕಲ್ಲೂ ಎಸೆದರು. ಇದನ್ನು ಗಮನಿಸಿದ ತಂದೆ, ಮಗ, ರಂಗನನ್ನು ಅಲ್ಲೇ ಬಿಟ್ಟು ಪಲಾಯನ ಮಾಡಿದರು. ಹೀಗಿದ್ದರೂ ರಂಗನಿಗೆ ನಾಟಕದ ಪಾರ್ಟು ಮಾಡುವ ಅಮಲಿನಲ್ಲಿ ಎದೆ, ಮುಸುಡುಗಳಿಗೆ ನಾಲ್ಕೈದು ಕಲ್ಲು ಬಿದ್ದಾಗಲೇ ಅಮಲು ಇಳಿದದ್ದು. ಇನ್ನು ಇಲ್ಲಿ ಉಳಿದರೆ ಕತೆ ಕೈಲಾಸ ಎಂದುಕೊಂಡು ಪರದೆಯ ಹಿಂದೆ ಸರಿದು ಅಲ್ಲಿಂದಲೇ ಒಂದೇ ನೆಗೆತ ರೈಲುನಿಲ್ದಾಣಕ್ಕೆ ಓಡಿದ. ಅಷ್ಟರಲ್ಲೇ ಹೊರಡಲು ತಯಾರಾಗಿದ್ದ ರೈಲು ಹತ್ತಿ ಕುಳಿತ. ಎಲ್ಲರೂ ತನ್ನನ್ನೇ ನೋಡಿ ನಗುವುದಕ್ಕೆ ತೊಡಗಿದಾಗ ರಂಗನಿಗೆ ತಾನು ಸಂನ್ಯಾಸಿ ವೇಷದಲ್ಲೇ ಇದ್ದೇನೆ ಎನ್ನುವ ಜ್ಞಾನೋದಯವಾದುದು. ಏನು ಮಾಡುವುದೆಂದು ಹಾಗೆಯೇ ಊರು ಸೇರಿದ. ಗ್ರಹಚಾರವೆಂದರೆ ಮನೆಗೆ ಹೋದರೆ ಬಾಗಿಲಿಗೆ ಬೀಗ. ಅಲ್ಲಿ ಕಾದು ಕುಳಿತರೂ ಮಲಾಮತ್ತು. ಕೋಡಿಯ ಮಂಟಪದ ಬಳಿ ಬಂದ. ಬಂದವನೇ ಅಲ್ಲಿನ ಒಂದು ಕಂಬದ ಬುಡದಲ್ಲಿ ಕುಳಿತ. ಹೀಗಿರಲು, ಹೋಗುತ್ತ ಬರುತ್ತ ಇದ್ದ ಜನರೆಲ್ಲ ಈತನೋರ್ವ ಮಹಾಸ್ವಾಮಿ ಎಂದುಕೊಂಡರು. ಸ್ವಾಮಿಯನ್ನು ಹಾಗೆಯೇ ಬಿಟ್ಟು ಹೋಗಕೂಡದೆಂದು ಕಾಣಿಕೆ ದುಡ್ಡು ಹಾಕಿ ಹೋಗಲು ಶುರು ಮಾಡಿದರು. ಕೆಲವೇ ದಿನಗಳಲ್ಲಿ ರಂಗನ ಕಾಲಬುಡದಲ್ಲಿ ದುಡ್ಡಿನ ರಾಶಿ ಬೆಳೆಯಿತು. ಇದನ್ನು ಬಿಟ್ಟು ರಂಗನಿಗೆ ಅತ್ತಿತ್ತ ಮಿಸುಕಾಡುವುದಕ್ಕೂ ಆಗಲಿಲ್ಲ. ಹಾಗಾಗಿ ರಂಗ ಮಹಾಸ್ವಾಮಿಯೇ

ಆಗಿಹೋದ. ಜನರೇ ಹಾಗೆ ಮಾಡಿದರೆಂದು ಹೇಳಬೇಕು.

ಒಮ್ಮೆ ಆತನ ಹೆಂಡತಿ ರತ್ನನೇ ಸ್ವಾಮಿಯ ಬಳಿ ಬಂದಳು. ಆಗಲೇ ಅವಳಿಗೂ ಆತ ತನ್ನ ಗಂಡನೆಂಬುದು ತಿಳಿದುದು. ರಂಗನಿಗೂ ಇದರಿಂದ ಸಮಾಧಾನವಾಯಿತು. ತನಗಾದ ಧರ್ಮಸಂಕಟವನ್ನು ತಿಳಿಸಿ, ಉಣ್ಣಲು, ತಿನ್ನಲು, ಉಡಲು, ಹೊದೆಯಲು ತಂದುಕೊಡಲು ತಿಳಿಸಿದ. ಮರುದಿನ ಆಕೆ ಅದೇ ಅಟ್ಟಣೆಯಲ್ಲಿ ಬಂದಳು. ಮಾರನೆಯ ದಿನ ಹೇಗೋ ಅಲ್ಲಿಂದ ಜಾಗ ಖಾಲಿ ಮಾಡಿ ಸೋಮೇಶ್ವರ ಕಡಲಲ್ಲಿ ಮುಳುಗಿ ಸಂನ್ಯಾಸಿಯ ಪಾಪಲೇಪ ಕಳೆದುಕೊಂಡು ಒಂದು ಮಧ್ಯಾಹ್ನದ ಹೊತ್ತು ಸೂಟ್‌ಕೇಸ್‌ಧಾರಿಯಾಗಿ ದುಬಾಯಿಯಿಂದ ಬಂದ ಹಾಗೆ ಮನೆ ಸೇರಿದ.

ಇದು 'ರಂಗನೋ ಮಲೆ ಮಂಗನೋ?' ಕಾದಂಬರಿಯ ಹೂರಣ. ಲೇಖಕಿ ಯಜ್ಞಾವತಿ ಕೇಶವ ಕಂಗೆನ್ ಅವರ ಭಾಷೆಯೇ ಒಂದು ರಂಗಿನದು. ತನ್ನ ಊರಿನ ಸುತ್ತಮುತ್ತ ಆಗುವ ಹೋಗುವ ನೋಡುವ ಕೇಳುವ ನಡೆಯುವ ಸಂಗತಿಗಳೇ ಈ ಕೃತಿಗೆ ಕಾರಣ. ಅವೆಲ್ಲ ಊರಿನ ಜನ ನಂಬಿಕೊಂಡು ನಡೆದುಕೊಂಡು ಬರುತ್ತಿರುವ ಗೊಡ್ಡು ಸಂಪ್ರದಾಯಗಳ ವಾಸ್ತವ ವಿಚಾರಗಳನ್ನು ಕೆದಕಿ ಹಾಕುವ ಕೆಲಸ. ಒಂದಿಷ್ಟು ವೈಚಾರಿಕವಾಗಿ ವೈಜ್ಞಾನಿಕವಾಗಿ ಆಲೋಚನೆ ಮಾಡಲು ಎಡೆ ಮಾಡಿಕೊಡುವ ಕೆಲಸ. ಆದರೆ ಅದನ್ನೆಲ್ಲ ಅಷ್ಟು ಕಟುವಾಗಿ ಕರಾರಾಗಿ ಹೇಳುತ್ತ ಹೋಗದೆ ವಿನೋದದ ವಿಡಂಬನೆಯ ಜಾಡು ಹಿಡಿದು ನಿರೂಪಿಸುವ ಜಾಣ್ಮೆ ಯಜ್ಞಾವತಿಯವರದು. ಒಂದಷ್ಟು ಸಾಮಾಜಿಕ ಕಳಕಳಿಯ, ಚಿಂತನೆಯ, ಸುಧಾರಣೆಯ ದಾರಿ ಹಿಡಿದು ಸಾಗಿ ಬಂದ ಅವರ ಕುಟುಂಬದ ತಲೆಮಾರಿನ ಬಳುವಳಿಯೂ ಹೌದು.

ಧರ್ಮ, ದೇವರು, ಅಮ್ನೂರು, ಸ್ವಾಮಿ, ಸಂನ್ಯಾಸಿಯಂತಹ ಹೆಸರಲ್ಲಿ ಜನರನ್ನು ಮಂಗಟಿಸಿ, ಮರುಳು ಮಾಡಿ, ಭಯ ಹುಟ್ಟಿಸಿ ಹೇಗೆ ನಿರಂತರ ಶೋಷಣೆ ಮಾಡಲಾಗುತ್ತಿದೆ ಎನ್ನುವುದನ್ನು ತುಂಬ ರೋಚಕವಾಗಿ, ಕಲಾತ್ಮಕವಾಗಿ ಈ ಕಾದಂಬರಿಯಲ್ಲಿ ಕಟ್ಟಿಕೊಡುವ ಪ್ರಯತ್ನವನ್ನು ಯಜ್ಞಾವತಿ ಮಾಡಿದ್ದಾರೆ. ಇವರು ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಸುಧಾರಣೆ ಮೊದಲಾದ ಕ್ಷೇತ್ರಗಳಲ್ಲಿ ಹೆಸರು ಮಾಡಿರುವ ಕರಾವಳಿ ನಾಡಿನ ತಿಂಗಳಾಯ ಕುಟುಂಬ ಸ್ಫೂರ್ತಿ ಪ್ರೇರಣೆಯಲ್ಲಿ ತುಳು ಮತ್ತು ಕನ್ನಡ ಭಾಷೆಗಳಲ್ಲಿ ಉತ್ತಮ ಲೇಖಕಿಯಾಗಿ ಮೂಡಿ ಬಂದವರು. ತುಳುಭಾಷೆಯ ಸೊಗಡು ಶೈಲಿ ಸ್ವಂತಿಕೆ ಇವರ ಈ ಕೃತಿಯಲ್ಲಿ ಮೇಳವಿಸಿರುವುದಕ್ಕೆ ಸಾಕಷ್ಟು ಸಾಕ್ಷಿಗಳು ಇಲ್ಲಿ ಸಿಗುತ್ತವೆ.

ಇದೇ ಮಣ್ಣಿನ ಸೊಗಡನ್ನು ಉಳಿಸಿಕೊಂಡು ಅತ್ಯಂತ ಸಮರ್ಪಕವಾಗಿ, ಸಮರ್ಥವಾಗಿ ಅಚ್ಚುಕಟ್ಟಾಗಿ ಈ ತಲೆಮಾರಿನ ವೈಚಾರಿಕ ಚಿಂತನೆಯ ಲೇಖಕ ಶ್ರೀ ಮುಹಮ್ಮದ್ ಕುಳಾಯಿಯವರು ಇದನ್ನು ಕನ್ನಡ ಭಾಷೆಗೆ ಭಟ್ಟಿ ಇಳಿಸಿದ್ದಾರೆ. ತುಳುವಿನಂತಹ ಪ್ರಾದೇಶಿಕ ಭಾಷೆಯಲ್ಲಿರುವ ಇಂತಹ ಕೃತಿಯೊಂದು ಸೋದರ ಭಾಷೆಯೊಂದಕ್ಕೆ ಅನುವಾದಗೊಂಡಾಗ ಕರ್ನಾಟಕ ಸಂಸ್ಕೃತಿಯ ಪರಂಪರೆಯಲ್ಲಿ ತುಳು ಸಂಸ್ಕೃತಿ ಅನಾವರಣಗೊಳ್ಳಲು ಸಾಧ್ಯವಾಗುತ್ತದೆ. ಅದಕ್ಕೆ ಅವಕಾಶ ಒದಗಿಸಿಕೊಟ್ಟಿರುವ ಗೆಳೆಯ ಶ್ರೀ ಮುಹಮ್ಮದ್ ಕುಳಾಯಿಯವರನ್ನೂ, ಈ ಕೃತಿಯನ್ನು ಕಾಳಜಿಯಿಂದ ಪ್ರಕಟಿಸುತ್ತಿರುವ ಲೋಹಿಯಾ ಪ್ರಕಾಶನದ ಶ್ರೀ ಸಿ. ಚನ್ನಬಸವಣ್ಣ ಅವರನ್ನೂ ಹಾರ್ದಿಕವಾಗಿ ಅಭಿನಂದಿಸುತ್ತಿದ್ದೇನೆ.

**ಡಾ. ವಾಮನ ನಂದಾವರ**

ಅಧ್ಯಕ್ಷರು

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

# ಲೇಖಕರ ಮಾತು

ಮಂಗಳೂರಿನ ತುಳು ಸಾಹಿತ್ಯ ಅಕಾಡೆಮಿ ಕಛೇರಿಗೆ ಹೋಗಿದ್ದಾಗ ನನ್ನ ಆತ್ಮೀಯ ಗೆಳೆಯರೂ, ಅಕಾಡೆಮಿ ಅಧ್ಯಕ್ಷರೂ ಆದ ಡಾ. ವಾಮನ ನಂದಾವರ ಅವರು ಐದು ತುಳು ಕೃತಿಗಳನ್ನು ನನಗೆ ಕೊಡುತ್ತಾ ಇವು ಕಳೆದ ವರ್ಷದಲ್ಲಿ ಬಂದ ಉತ್ತಮ ಕೃತಿಗಳು. ಇವನ್ನು ಓದಿ ಎಂದರು. ನಾನು ಆ ತನಕ ತುಳು ಕೃತಿಗಳನ್ನು ಓದಿದ್ದೇ ಇಲ್ಲ ಎನ್ನಬಹುದು. ಆದರೆ ಈ ಐದು ಪುಸ್ತಕಗಳೂ ನನ್ನನ್ನು ಓದಿಸಿಕೊಂಡು ಹೋದುವು. ಒಂದೇ ವಾರದಲ್ಲಿ ಈ ಎಲ್ಲಾ ಪುಸ್ತಕಗಳನ್ನೂ ನಾನು ಓದಿ ಮುಗಿಸಿದೆ. ಇವುಗಳಲ್ಲಿ ಯಜ್ಞಾವತಿ ಕೇಶವ ಕಂಗೆನ್‌ರವರ 'ರಂಗೆನಾ ಮಲೆ ಮಂಗೆನಾ' ಕಾದಂಬರಿ ನನಗೆ ಬಹಳ ಇಷ್ಟವಾಯಿತು. ಸಾಹಿತ್ಯ, ಕಥಾ ವಸ್ತು, ಭಾಷಾಶೈಲಿ, ಹಾಸ್ಯ, ವೈಚಾರಿಕತೆ, ತುಳುನಾಡಿನ ಸಂಸ್ಕೃತಿ, ಸಂಪ್ರದಾಯ, ಪ್ರಾದೇಶಿಕ ಸೊಗಡು ಎಲ್ಲವೂ ಆ ಕೃತಿಯಲ್ಲಿತ್ತು. ಮತ್ತೊಮ್ಮೆ ನಾನು ಡಾ. ನಂದಾವರ ಅವರನ್ನು ಭೇಟಿಯಾದಾಗ ಈ ಪುಸ್ತಕದ ಬಗ್ಗೆ ನನ್ನ ಅಭಿಪ್ರಾಯ ಹೇಳಿ, ಇದನ್ನು ನಾನು ಕನ್ನಡಕ್ಕೆ ಅನುವಾದಿಸಲೇ ಎಂದು ಕೇಳಿದೆ. ಕೂಡಲೇ ಅವರು ಅನುಮತಿ ನೀಡಿದರು ಮಾತ್ರವಲ್ಲ ಯಜ್ಞಾವತಿ ಕೇಶವ ಕಂಗೆನ್‌ರವರಿಂದ ಒಪ್ಪಿಗೆ ಪಡೆದುಕೊಂಡರು. ಪ್ರಕಟಿಸಲು ವ್ಯವಸ್ಥೆ ಮಾಡುವುದಾಗಿಯೂ ಭರವಸೆ ನೀಡಿದರು. ಆಮೇಲೆ ನಾನು ಈ ಕೃತಿಯನ್ನು ಅನುವಾದಿಸಲು ಪ್ರಯತ್ನಿಸಿದೆ.

ಅನುವಾದಿತ ಹಸ್ತಪ್ರತಿ ಸುಮಾರು ಎಂಟು ಒಂಭತ್ತು ತಿಂಗಳು ಕಾಲ ಒಳಗೆಯೇ ಇತ್ತು. ಈ ಮಧ್ಯೆ ಎರಡು ಮೂರು ಸಲ ಡಾ. ನಂದಾವರ ಅವರನ್ನು ಭೇಟಿಯಾಗಿದ್ದೆ. ಅವರು ಬಹಳಷ್ಟು ಕೆಲಸದ ಒತ್ತಡದಲ್ಲಿರುವುದನ್ನು ಗಮನಿಸಿದ್ದೆ. ಆದರೂ ಸೂಕ್ಷ್ಮವಾಗಿ ನನ್ನ ಪುಸ್ತಕ ಪ್ರಕಟಣೆಯ ಬಗ್ಗೆ ನೆನಪಿಸಿದ್ದೆ.

ಕಳೆದ ಡಿಸೆಂಬರ್‌ನಲ್ಲಿ ಮೂಡಬಿದಿರೆಯಲ್ಲಿ ನಡೆದ 'ಆಳ್ವಾಸ್ ನುಡಿಸಿರಿ' ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪದ ದಿನ. ಬೆಳಗ್ಗೆಯೇ

ಡಾ. ನಂದಾವರ ಫೋನ್ ಮಾಡಿದ್ದರು. 'ನಾನು ಮೂಡಬಿದಿರೆ ಸಮ್ಮೇಳನಕ್ಕೆ ಹೋಗ್ತಾ ಇದ್ದೇನೆ. ನೀವೂ ಬನ್ನಿ. ಅಲ್ಲಿ ಲೋಹಿಯಾ ಪ್ರಕಾಶನದ ಅಧ್ಯಕ್ಷ ಶ್ರೀ ಚನ್ನಬಸವಣ್ಣ ಬಂದಿದ್ದಾರೆ. ಅವರಲ್ಲಿ ನಿಮ್ಮ ಪುಸ್ತಕದ ಪ್ರಕಟಣೆಯ ಬಗ್ಗೆ ಮಾತಾಡೋಣ. ಕಾರು ತಗೊಂಡು ಬರ್ತೇನೆ. ರೆಡಿಯಾಗಿರಿ' ಎಂದರು.

ಶ್ರೀ ಚನ್ನಬಸವಣ್ಣನವರನ್ನು ಭೇಟಿಯಾಗಿ ಹಸ್ತಪ್ರತಿಯನ್ನು ನೀಡಿ ಪ್ರಕಟಿಸುವಂತೆ ಕೇಳಿಕೊಂಡೆವು. 'ಈಗಾಗಲೇ ಹಲವಾರು ಹಸ್ತಪ್ರತಿಗಳು ಪ್ರಕಟಣೆಗಾಗಿ ಬಂದಿವೆ. ದ.ಕ. ಜಿಲ್ಲೆಯಿಂದಲೇ ಬಹಳಷ್ಟು ಲೇಖಕರು ಕಳಿಸಿದ್ದಾರೆ. ಎಲ್ಲವನ್ನೂ ಪ್ರಕಟಿಸಲು ಸಾಧ್ಯವಾಗುತ್ತಿಲ್ಲ. ಹಸ್ತಪ್ರತಿ ಇರಲಿ ನೋಡೋಣ. ಇದನ್ನು ಓದಿ ನನ್ನ ಅಭಿಪ್ರಾಯ ತಿಳಿಸುತ್ತೇನೆ' ಎಂದು ತಮ್ಮ ಅಸಹಾಯಕತೆ, ಮಿತಿಯನ್ನು ತಿಳಿಸಿದರು.

ಇದಾಗಿ ವಾರ ಕಳೆದಿರಬಹುದು. ಒಂದು ಬೆಳಿಗ್ಗೆ ಬಳ್ಳಾರಿಯಿಂದ ಫೋನ್. ಶ್ರೀ ಚನ್ನಬಸವಣ್ಣನವರು ಮಾತಾಡುತ್ತಿದ್ದರು! 'ನಿಮ್ಮ ಹಸ್ತಪ್ರತಿ ಓದಿದೆ. ಒಂದೇ ಸಿಟ್ಟಿಂಗ್‌ನಲ್ಲಿ ಇಡೀ ಪುಸ್ತಕ ಓದಿಸಿಕೊಂಡು ಹೋಯಿತು. ಬಹಳ ಮೆಚ್ಚುಗೆಯಾಯಿತು. ನಮ್ಮ ಪ್ರಕಾಶನದಿಂದ ಇದನ್ನು ಪ್ರಕಟಿಸುತ್ತೇವೆ. ಡಾ. ವಾಮನ ನಂದಾವರರೊಂದಿಗೆ ಮಾತನಾಡಿ ಮುನ್ನುಡಿ, ಬೆನ್ನುಡಿ ಬರೆಯುವಂತೆ ವಿನಂತಿಸುತ್ತೇನೆ. ನಿಮ್ಮ ಎರಡು ಮಾತುಗಳನ್ನು ಕೂಡಲೇ ಕಳುಹಿಸಿ ಕೊಡಿ'. ನನಗೆ ಆಶ್ಚರ್ಯವಾಗಿತ್ತು.

ರಾಷ್ಟ್ರಮಟ್ಟದಲ್ಲಿ ಜನಪ್ರಿಯವಾಗಿರುವ ಕರ್ನಾಟಕದ ಪ್ರಸಿದ್ಧ ಪ್ರಕಾಶಕರಿಂದ ತುಳುವಿನಿಂದ ಅನುವಾದಗೊಂಡ ಕೃತಿಯೊಂದು ಪ್ರಕಟಣೆಗೊಳ್ಳುತ್ತಿರುವುದು ತುಳು ಸಾಹಿತ್ಯಕ್ಕೆ ರಾಜ್ಯಮಟ್ಟದಲ್ಲಿ ಸಿಗುತ್ತಿರುವ ಮನ್ನಣೆ ಎಂದೇ ನನ್ನ ಅನಿಸಿಕೆ.

ಡಾ. ವಾಮನ ನಂದಾವರ, ಶ್ರೀ ಚನ್ನಬಸವಣ್ಣ ಇವರ ಪ್ರೋತ್ಸಾಹ, ಸಹಕಾರದಿಂದಾಗಿಯೇ ಈ ಪುಸ್ತಕ ಇಂದು ನಿಮ್ಮ ಕೈಯಲ್ಲಿದೆ. ಹಾಗೆಯೇ ಗೆಳೆಯ ಡಾ. ವೇಣುಗೋಪಾಲ ರಾವ್ ಸುರತ್ಕಲ್, ಲೇಖಕಿ ಬಿ.ಎಂ. ರೋಹಿಣಿ, ಮುಖಪುಟ ರಚಿಸಿಕೊಟ್ಟ ಮೋಹನ ಸೋನಾ, ಅಕ್ಷರ ವಿನ್ಯಾಸಗೊಳಿಸಿದ ಆಕೃತಿ ಕಂಪ್ಯೂಟರ್ಸ್, ಮಂಗಳೂರು ಇವರೆಲ್ಲರನ್ನೂ ಇಲ್ಲಿ ನಾನು ನೆನಪಿಸುತ್ತೇನೆ.

15-01-2005

**ಮುಹಮ್ಮದ್ ಕುಳಾಯಿ**
ಕುಕ್ಕಾಡಿ ಎಂಪೋರಿಯಂ
ಅಂಚೆ : ಬೈಕಂಪಾಡಿ
ಮಂಗಳೂರು - 575 011

# ಪ್ರಕಾಶಕರ ಮಾತು

ಕಳೆದ ಡಿಸೆಂಬರ್‌ನಲ್ಲಿ ಮೂಡುಬಿದರೆಯಲ್ಲಿ ಜರುಗಿದ ಆಳ್ವಾಸ್ ನುಡಿಸಿರಿ - ೨೦೦೪ರಲ್ಲಿ ಪ್ರಕಾಶನಕ್ಕೆ ನೀಡಿದ ಪ್ರಶಸ್ತಿಯನ್ನು ಸ್ವೀಕರಿಸಲು ಹೋದಾಗ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರೂ, ಆತ್ಮೀಯರೂ ಆದ ಡಾ. ವಾಮನ ನಂದಾವರ ಮೂಲಕ ಶ್ರೀ ಮುಹಮ್ಮದ್ ಕುಳಾಯಿಯವರ ಪರಿಚಯವಾಯಿತು.

ಹತ್ತು ಹಲವು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಮುಹಮ್ಮದ್ ಕುಳಾಯಿಯವರು ತುಳುವಿನಿಂದ ಅನುವಾದಿಸಿದ ಈ ಕಾದಂಬರಿಯನ್ನು ಪ್ರಕಟಿಸಲು ಹರ್ಷವೆನಿಸಿದೆ. ಈ ಕೃತಿಯ ವೈಶಿಷ್ಟ್ಯವೆಂದರೆ, ವಿನೋದ, ವಿಡಂಬನೆ, ರಂಜನೀಯವಾಗಿದ್ದರೂ ಕಲಾತ್ಮಕವಾಗಿ ಮೂಡಿಬಂದಿದೆ. ನಮ್ಮದೇ ಆದ ಸೋದರಭಾಷೆಯಿಂದ ಅನುವಾದಿಸಿದ್ದರೂ, ಸ್ವಂತ ಕೃತಿಯಂತೆಯೇ ಭಾಸವಾಗುತ್ತದೆ.

ಶ್ರೀ ಮುಹಮ್ಮದ್ ಕುಳಾಯಿಯವರನ್ನು ಪರಿಚಯಿಸಿದ್ದೇ ಅಲ್ಲದೆ, ಸೂಕ್ತ ಮುನ್ನುಡಿ, ಬೆನ್ನುಡಿ ಬರೆದುಕೊಟ್ಟು, ಈ ಅನುವಾದ ಕೃತಿ ಹೊರಬರಲು ಕಾರಣಕರ್ತರಾದ ಡಾ. ವಾಮನ ನಂದಾವರ ಅವರಿಗೆ, ಪ್ರಕಟಿಸಲು ಅನುವು ಮಾಡಿಕೊಟ್ಟ ಕುಳಾಯಿಯವರಿಗೆ, ಅರ್ಥಪೂರ್ಣ ಮುಖಪುಟ ವಿನ್ಯಾಸ ಮಾಡಿಕೊಟ್ಟ ನಾಡಿನ ಶ್ರೇಷ್ಠ ಕಲಾವಿದರಲ್ಲೊಬ್ಬರಾದ ಶ್ರೀ ಮೋಹನ ಸೋನಾ ಅವರಿಗೆ, ಅಚ್ಚುಕಟ್ಟಾಗಿ ಅಕ್ಷರ ಜೋಡಿಸಿಕೊಟ್ಟ ಆಕೃತಿ ಕಂಪ್ಯೂಟರ್ಸ್‌ನ ಕಲ್ಲೂರು ನಾಗೇಶ್ ಅವರಿಗೆ, ಎಂದಿನಂತೆ ಸುಂದರವಾಗಿ ಮುದ್ರಿಸಿಕೊಟ್ಟ ವಿಶ್ವಾಸ್ ಪ್ರಿಂಟ್ಸ್‌ನವರಿಗೆ ಕೃತಜ್ಞರಾಗಿದ್ದೇವೆ.

**ಸಿ. ಚನ್ನಬಸವಣ್ಣ**
ಪ್ರಕಾಶನದ ಪರವಾಗಿ

ನವರಾತ್ರಿ ಹಬ್ಬ ಬಂತು ಎಂದರೆ ಸಾಕು ವೇಷ ಹಾಕುವವರ ಕಾಲ ಶುರುವಾಯಿತು ಎಂದೇ ಲೆಕ್ಕ. ಅದಕ್ಕಿಂತಲೂ ಏನೂ ಅಂದರೆ, ದೊಡ್ಡ ವೇಷದವರಿಗಿಂತಲೂ ಚಿಕ್ಕ, ಚಿಲ್ಲರೆ ವೇಷದ ಕಿರಿಕಿರಿಯೇ ಜಾಸ್ತಿ ಎಂದು ಹೇಳಬಹುದು. ಇದ್ದಿಲನ್ನು, ಬಣ್ಣ ಬಣ್ಣದ ಚಾಕ್‌ನ ಕಡ್ಡಿಯನ್ನು ಗುದ್ದಿ ಹುಡಿ ಮಾಡಿ ಮುಖ, ಮೈ, ಕೈಗೆಲ್ಲ ಮೆತ್ತಿಕೊಂಡು ಸಿದ್ದಿ, ಚಟಿನಿ, ರೊಟ್ಟಿ ವೇಷಾಂತ ಹೇಳಿ ದಿನಕ್ಕೊಂದು ಹೆಸರು ಹೇಳಿಕೊಂಡು ಮನೆ ಮನೆಗೆ ಬಂದು ತೊಂದರೆ ಕೊಡುವುದೇ ಇವರಿಗೊಂದು ಹವ್ಯಾಸ. ಇಂತಹವರಿಗೆ ದಿನಾ ಕಾಸು ಕೊಡುವಾಗ ಪಿರಿಪಿರಿ ಎಂದು ನರಳುವ ಅಭ್ಯಾಸ ಹಲವರಿಗೆ! ಹಾಗೆ ಹೇಳಿದರೆ ನೋಣಯ್ಯಣ್ಣನ ಶಾರ್ದೂಲ, ಮುತ್ತಪ್ಪಣ್ಣನ ಹುಲಿವೇಷ, ಕಿಟ್ಟಪ್ಪಣ್ಣನ ಸಿರಿವೇಷದಂತಹ ಹೆಸರಾಂತ ಆಟದವರನ್ನು ಕರೆದು ಮರ್ಯಾದೆ ಕೊಟ್ಟು ಆಟ ಆಡಿಸಿ ನೆರೆದವರ ಮುಂದೆ ಗತ್ತು ತೋರಿಸಿ ಮರ್ಜಿ ಮಾಡುವವರೂ ಇಲ್ಲಾಂತಲ್ಲ!

ಅಂದು ನವರಾತ್ರಿಯ ಕೊನೆಯ ದಿನ. ಮಹಾನವಮಿ. ಅವರಿವರೆಂದಲ್ಲ, ಎಲ್ಲರಿಗೂ ವೇಷ ಹಾಕಿ ನಾಲ್ಕು ಕಾಸು ಹಿಡಿಯುವ ಆಸೆ. ಸೀರೆ, ರವಕೆ ಉಟ್ಟು, ಹಿತ್ತಾಳೆಯ ಚೊಂಬನ್ನು ಕೈಯಲ್ಲಿ ಹಿಡಿದು ಒಪ್ಪ, ವಯ್ಯಾರದಲ್ಲಿ ನಡೆಯುತ್ತಾ ಬಂದ ಒಬ್ಬ ಹಾಲಿನ ವೇಷದವ. ಅವನು ಉಟ್ಟ ಸೀರೆಯನ್ನು ಕಣ್ಣು ಬಾಯಿ ಬಿಟ್ಟು ನೋಡುತ್ತಿದ್ದಳು ಗಂಗಕ್ಕನ ಸೊಸೆ ರತ್ನ! ಅರೇ ಇಂದು ಬೆಳಿಗ್ಗೆ ನಾನು ಒಗೆದು ಬಿಸಿಲಿಗೆ ಒಣಗಲು ಹಾಕಿದ ಬಟ್ಟೆಗಳು ಗಳಿಗೆಯೊಳಗೆ ಮಾಯವಾದಂತೆ ಆಗಿತ್ತಲ್ಲಾ? ಹಾಗಾದರೆ ಅದು ಹೇಗೆ ನನ್ನ ಸೀರೆ ರವಕೆಗಳು ಈಗ ಇವನ ಮೈಮೇಲೆ ಬಂತು? ಎಂಬುದೇ ಅವಳ ಆಶ್ಚರ್ಯಕ್ಕೆ ಕಾರಣವಾಗಿತ್ತು. ರತ್ನಳ ಮುಖವನ್ನೇ ನೋಡುತ್ತಿದ್ದ ಹಾಲಿನ ವೇಷದವ ನಗು ನಗುತ್ತಾ ಅವಳ ಹತ್ತಿರ ಬಂದ.

''ನನಗೊಮ್ಮೆ ಹಾಲಿನ ದುಡ್ಡು ಕೊಟ್ಟು ಬಿಡಮ್ಮಾ. ಮತ್ತೆ ಹೊತ್ತಾಗಿ ಬಿಟ್ಟರೆ ನನ್ನ ಗಂಡನ ಬಾಯಿಯಿಂದ ಬೈಗುಳ ಕೇಳಬೇಕಾದೀತು'' ಎಂದು ವೈಯ್ಯಾರದಲ್ಲಿ ಹೇಳಿ ರತ್ನಳ ಜಡೆ ಹಿಡಿದು ಎಳೆದುಬಿಟ್ಟ. ವೇಷ ನೋಡಲೆಂದು ಅಲ್ಲಿ ಗುಂಪು ಕೂಡಿದವರೆಲ್ಲರೂ ಒಟ್ಟಾಗಿ ''ಹೋ...'' ಎಂದು ನಕ್ಕು ಬಿಡಬೇಕಾ? ನಾಚಿಕೆಯ ಜೊತೆಗೆ ಗುರುತು ಇಲ್ಲದವನ ಹುಚ್ಚು ಬುದ್ಧಿಗೆ ಅವಳಿಗೆ ಕೋಪ ಬಂತು. ಹೂಂಕರಿಸುತ್ತಿದ್ದ ಮೂಗಿನೊಟ್ಟಿಗೆ ಕಣ್ಣನ್ನೂ ಅಗಲಿಸಿ ನೋಡಿದಳು ರತ್ನ. ''ಏಯ್... ನೀನೊಮ್ಮೆ ಇಲ್ಲಿಂದ ನಡೆಯುತ್ತಿಯಾ ಇಲ್ಲವಾ? ಇವನ ದರ್ಬಾರು ನೋಡಿದರೆ ಏನೋ ಅಂತ ಗ್ರಹಿಸಬೇಕು. ಬಂದದ್ದು ದೊಡ್ಡ... ಹತ್ತು ಪೈಸೆ ಬೇಡಲು ಆದರೂ ಎಷ್ಟೊಂದು ಅಹಂಕಾರ

ನಿನಗೆ? ನಡಿ... ನಡಿ!'' ಎಂದು ಹೇಳುವಾಗ ಅಲ್ಲಿ ಸೇರಿದವರ ಮಧ್ಯೆ ಮತ್ತೊಮ್ಮೆ ನಗುವಿನ ಅಲೆ ಎದ್ದಿತು.

''ಏ... ರತ್ನಕ್ಕ ಒದ್ದೆ ಬೈರಾಸು! ಏನಕ್ಕಾ ನೀನು ರಂಗಣ್ಣನನ್ನೇ ಬಯ್ಯುತ್ತಿಯಲ್ಲಾ? ನಿನಗೆ ಅಷ್ಟೂ ಗೊತ್ತಾಗಲಿಲ್ಲವಾ ಹಾಲಿನ ವೇಷ ಹಾಕಿದವನು ಯಾರೂಂತ?'' ನೆರೆಮನೆಯ ಹುಡುಗ ನಕ್ಕು ಹೇಳಿದಾಗ ರತ್ನ ಕಣ್ಣಿನ ಜೊತೆ ಬಾಯಿಯನ್ನೂ ತೆರೆದು ನೋಡಿದಳು. ರಂಗ ಮಡದಿಯ ಬೆಕ್ಕಸವನ್ನು ನೋಡಿ ತಮಾಷೆಯ ನಗು ನಕ್ಕ. ಅವಳಿಗೆ ತುದಿಕಣ್ಣು ಹೊಡೆದಾಗ ಮತ್ತೆ ಒಂದು ಗಳಿಗೆಯೂ ಅಲ್ಲಿ ನಿಲ್ಲಲಾಗದ ರತ್ನ ನಾಚಿ ನೀರಾಗಿ ಒಳಗೆ ಓಡಿದಳು. ಈ ಪ್ರಸಂಗ ಅಲ್ಲಿದ್ದ ಎಲ್ಲರಿಗೂ ಬಾರೀ ಖುಶಿಯಾಯಿತು.

ಹೆತ್ತ ತಾಯಿ ಅಲ್ಲದೆ ಕೈ ಹಿಡಿದ ಮಡದಿಗೂ ಗುರುತು ಹಿಡಿಯಲಾಗದ ತನ್ನ ವೇಷವನ್ನು ಅಳಿಸುವುದಕ್ಕೆ ಮುನ್ನ ಒಂದು ಪೋಟೋ ತೆಗೆಸಬೇಕೆಂದು ಮನಸ್ಸಾಯಿತು ರಂಗನಿಗೆ. ಚೌರಿಯ ಕೂದಲಿನಲ್ಲಿ ಹೆಣೆದ ಎರಡು ಜಡೆಯನ್ನು ಎದುರು ಭುಜದ ಮೇಲೆ ಹಾಕಿಕೊಂಡು, ಕಣ್ಣಿಗೆ ಕಪ್ಪು ಕನ್ನಡಕ ಇಟ್ಟುಕೊಂಡು, ಕೈಯಲ್ಲಿ ಖಾಲಿ ತಂಬಿಗೆ ಹಿಡಿದುಕೊಂಡೇ ಫೋಟೋ ತೆಗೆಯಲು ಪೋಸ್ ಕೊಟ್ಟ. ''ಅರರೆ ಇದೆಂತದು ಮಾರಾಯಾ! ಥೇಟ್ ಹೆಣ್ಣಿನಂತೆಯೇ ಕಾಣುತ್ತಿದ್ದಿಯಲ್ಲಾ ನೀನು? ಎಷ್ಟು ಚಂದದ ಮೈಕಟ್ಟಪ್ಪಾ ನಿನ್ನದು? ಇದರಿಂದಾಗಿ ಹೆಣ್ಣಿನ ಪಾರ್ಟು ಮಾಡಲು ನೀನು ಲಾಯಕ್ಕು ಇದ್ದಿಯಪ್ಪಾ?'' ಫೋಟೋ ನೋಡಿದ ಗೆಳೆಯರ ಹೊಗಳಿಕೆ ಕೇಳಿದ ರಂಗ ಕಡೆಯುವ ಕಲ್ಲಿನಲ್ಲಿ ಕಡೆದು ಉಬ್ಬಲು ಇಟ್ಟ ಉದ್ದಿನಂತೆ ಉಬ್ಬಿದ. ಮೊದಲೇ ಅವನು ಆಟ, ನಾಟಕದ ಖಯಾಲಿ ಇದ್ದವ. ಆಗಾಗ ಅದರ ಪದ, ಸಂವಾದವನ್ನು ಇಷ್ಟಪಟ್ಟವರೆದುರು ಹೇಳಿ ನಟಿಸಿ ಅವರನ್ನು ಖುಶಿಪಡಿಸಿ ನಗಿಸುತ್ತಿದ್ದ. ಇಂದು ಅವರು ಹೊಗಳಿದ್ದನ್ನು ಕೇಳಿದ ಮೇಲೆ ಅವನನ್ನು ನಾಟಕಕ್ಕೆ ಸೇರಲು ಪ್ರೇರೇಪಿಸಿದಂತೆ ಆಯಿತಲ್ಲದೆ ಪ್ರೋತ್ಸಾಹವೂ ಸಿಕ್ಕಿದಂತಾಯಿತು. ಹಾಗೆಯೇ ಅವನ ಮನಸಲ್ಲೂ ಆಸೆ, ಆಸಕ್ತಿ ಚಿಗುರತೊಡಗಿತು.

ನೇಮ, ಜಾತ್ರೆಯಂತಹ ಉತ್ಸವಕ್ಕೆಂದೇ ಹುಟ್ಟಿದ ನಾಟಕದ ಕಂಪೆನಿಯೊಂದು ಮಂಗಳಾದೇವಿ ದೇವಸ್ಥಾನದ ಬಳಿ ಬಿದಿರು ತಟ್ಟಿಯ ಚಪ್ಪರ ಹಾಕಿ ಬೀಡು ಬಿಟ್ಟಿತ್ತು. ಇದು ರಂಗನ ಆಸೆ, ಆತುರಕ್ಕೆ ತಕ್ಕಂತೆ ಅನುಕೂಲವೇ ಆಯಿತು ಎಂದು ಹೇಳಬಹುದು. ಮತ್ತೆ ತಡ ಮಾಡದೆ ಆತ ಹೆಣ್ಣು ವೇಷದ ತನ್ನ ಚಿತ್ರದೊಂದಿಗೆ ಬಂದು ನಾಟಕ ಕಂಪನಿಯ ಯಜಮಾನನನ್ನು ಭೇಟಿಯಾದ ''ನಾಟಕದಲ್ಲಿ ಪಾರ್ಟು ಮಾಡಲು ನನಗೊಂದು ಅವಕಾಶ ಕೊಡಿ'' ಎಂದು ಕೇಳಿಕೊಂಡ. ''ಅಯ್ಯಯ್ಯೋ ದೇವರೇ ತನ್ನ ಕಂಪನಿಯಲ್ಲಿದ್ದವರಿಗೇ ಸಂಬಳ ಕೊಡಲಿಕ್ಕೆ ನಾನಿಷ್ಟು ಕಷ್ಟಪಡುತ್ತಿದ್ದೇನಲ್ಲಾ ಅದರ ಮಧ್ಯೆ ಇದೊಂದು ದೆವ್ವ ಎಲ್ಲಿಂದ ಬಂತಪ್ಪಾ'' ಎಂದು ಕೋಪದಲ್ಲಿ ಕುದಿಯುತ್ತಾ ಮನಸಿನಲ್ಲಿಯೇ ಬೈದ ನಾಟಕ ಕಂಪೆನಿಯ ಮಾಲಕ.

''ಹೋಗು ಮಾರಾಯ ಒಮ್ಮೆ ಇಲ್ಲಿಂದ, ನೀನೊಮ್ಮೆ ಹೋಗು ನೋಡುವಾ? ಇಲ್ಲಿ ಯಾವುದೂ ನಿನಗಾಗುವಂತಹ ಕೆಲಸ ಗಿಲಸ ಖಾಲಿ ಇಲ್ಲ'' ಎಂದು ಬಾಯಲ್ಲಿ ಹೇಳುತ್ತಿದ್ದಂತೆಯೇ ಕೈಯಲ್ಲಿದ್ದ ರಂಗನ ಫೋಟೋವನ್ನು ಆಚೆಗೆ ಎಸೆದು ಬಿಟ್ಟ.

''ಸದ್ಯಕ್ಕೆ ಸಂಬಳ ಗಿಂಬಳ ಏನೂ ಕೊಡದಿದ್ದರೂ ಚಿಂತಿಲ್ಲ ಸ್ವಾಮೀ. ಒಂದು ಊಟ, ಕಾಫಿ ಕೊಟ್ಟರೆ ಸಾಕು. ಕಲಾ ಮಾತೆಯ ಸೇವೆ ಮಾಡಿಕೊಂಡು ಇದ್ದಷ್ಟು ಕಾಲ ನಿಮ್ಮ ಜೊತೆಗೇ

ಇರುತ್ತೇನೆ. ದಯವಿಟ್ಟು ನನಗೊಂದು ಚೂರು ವಿದ್ಯೆ ಕೊಡಿ ಸ್ವಾಮಿ.'' ಎಂದು ತನ್ನ ಇಚ್ಛೆಯನ್ನು ತಿಳಿಸಿ ಕೈಜೋಡಿಸಿ ಬೇಡಿದ. ಆ ಕ್ಷಣವೇ ನಾಟಕದ ನಾರ್ಣಪ್ಪಯ್ಯನ ಮನಸ್ಸು ಸಂತೋಷದಿಂದ ಕುಣಿಯಿತು. ಯಾವತ್ತಿನಿಂದಲೂ ಸಾಲದಲ್ಲೇ ಮುಳುಗಿದ್ದ ಅವನು ಇವನಂತಹ ಪುಕ್ಕಟೆ ಸಿಗುವ ಕಲಾವಿದರಿಗೇ ಮೊದಲು ಜಾಗ ಕೊಡುತ್ತಿದ್ದ. ಆದರೂ ತನ್ನ ಅಶಕ್ತತೆಯನ್ನು ಸ್ವಲ್ಪವೂ ತೋರ್ಪಡಿಸದೆ ''ಎಲ್ಲಿ, ಎಲ್ಲಿದೆ ನೋಡುವಾ ನಿನ್ನ ಫೋಟೋ ಇಲ್ಲಿ ಕೊಡು'' ಎಂದು ರಂಗನ ಕೈಯಲ್ಲಿದ್ದುದನ್ನು ತೆಗೆದುಕೊಂಡ. ಆಮೇಲೆ ಅದನ್ನು ತಿರುಗಿಸಿ, ಮರುಗಿಸಿ, ದೂರ ಹತ್ತಿರ ಹಿಡಿದು ಬಾರೀ ಪರೀಕ್ಷೆ ಮಾಡುವವನಂತೆ ನಟಿಸಿದ. ಗಂಭೀರವಾಗಿದ್ದ ತನ್ನ ಮೋರೆಯನ್ನು ಸಡಿಲ ಮಾಡಿಕೊಂಡು...

''ದುಡ್ಡು ಕಾಸಿಗಿಂತಲೂ ಕಲಾಮಾತೆಯ ಸೇವೆಗೆ ಬೆಲೆಕೊಡುವ ನಿನ್ನಂತಹ ಕಲಾವಿದರಿಗೆ ನಾನು ಮರ್ಯಾದೆ ಕೊಡಲಿಲ್ಲ ಎಂದಾದರೆ ಕಲಾಮಾತೆಗೆ ನನ್ನ ಮೇಲೆ ಕೋಪ ಬರಲಿಕ್ಕಿಲ್ಲವಾ? ಸ...ರಿ, ನಿನ್ನ ವಿಳಾಸವನ್ನು ಕೊಟ್ಟು ಹೋಗು. ಮತ್ತೆ ಎಲ್ಲ ವಿಷಯವನ್ನೂ ಮುಂದಕ್ಕೆ ತಿಳಿಸುವೆ ಆಗಬಹುದಲ್ಲಾ'' ಇಷ್ಟು ಹೇಳಿ ರಂಗನಿಗಾಗಿಯೇ ಒಂದು ಸೀಟನ್ನು ತನ್ನ ಮನಸ್ಸಿನಲ್ಲಿ ಖಾಯಂ ಮಾಡಿಕೊಂಡ ನಾರ್ಣಪ್ಪಯ್ಯ.

ಹತ್ತು ದಿನದ ನವರಾತ್ರಿ ಜಾತ್ರೆ ಮುಗಿದ ಕೂಡಲೇ ಕಾಸರಗೋಡಿನಲ್ಲಿ ಬೀಡು ಬಿಟ್ಟಿತು ನಾಟಕ ಕಂಪನಿ. ಅಷ್ಟಾಗುವಾಗ -

''ನಮಗೆ ನೀವು ಕೊಡುವ ಸಂಬಳ ಯಾವುದಕ್ಕೂ ಸಾಲದು'' ಎನ್ನುವ ಅಸಮಾಧಾನದಲ್ಲಿ ಒಬ್ಬೊಬ್ಬರೇ ಕಲಾವಿದರು ಕಂಪನಿ ಬಿಟ್ಟು ಹೋಗಿದ್ದರು. ಆಮೇಲೆ ಅಲ್ಲಿ ಉಳಿದಿದ್ದವರೆಂದರೆ ನಾರ್ಣಪ್ಪಯ್ಯನ ಅಳಿಯ ಮಹಾಬಲ ಮತ್ತು ಅವನ ಇಬ್ಬರು ಗಂಡು ಮಕ್ಕಳು ಮಾತ್ರ. ಹಾಗಾಗಿ ನಾಟಕ ಆಡುವುದನ್ನೇ ನಿಲ್ಲಿಸಿ ಬಿಡುವಾ ಎಂದರೆ ಹೊಟ್ಟೆಗೆ ಒಂದು ಹಿಡಿಯಷ್ಟೂ ಅನ್ನ ಸಿಗಲಿಕ್ಕಿಲ್ಲ. ಕಟ್ಟಿಕೊಳ್ಳುವಾ ಎಂದರೆ ಬೇಕಿದ್ದಷ್ಟು ಜನರಿಲ್ಲ. ಇಂತಹ ಸಂಕಟದಲ್ಲಿ ಬಿದ್ದು ತಲೆ ಬಿಸಿ ಮಾಡುತ್ತಿದ್ದ ನಾರ್ಣಪ್ಪಯ್ಯನಿಗೆ ರಂಗನ ನೆನಪು ಬಂದದ್ದೇನೂ ದೊಡ್ಡ ಸಂಗತಿಯಲ್ಲ.

ಟೆಲಿಗ್ರಾಂ ಬಂದಾಗ ಎಂದಿನಂತೆಯೇ ರಂಗ ಊರ ಮುಂದಿದ್ದ ಪಾಳು ಮಂಟಪದ ಒಳಗೆ ಇಸ್ಪೀಟ್ ಆಡುವುದರಲ್ಲಿ ಮಗ್ನನಾಗಿದ್ದ. ಶಾಂಭಟ್ರ ಮಗ ಶಿವಣ್ಣ, ಗೂಡಂಗಡಿಯ ಮುದರನ ತಮ್ಮ ವಿಠಲ, ಗುಡ್ಡೆ ಮನೆಯ ಸುಂದರ ಮುಂತಾದ ಮೂರು ಮುಕ್ಕಾಲಿನಷ್ಟೂ ಸಂಪಾದನೆ ಮಾಡದ, ಕೆಲಸ ಕಲಿಯಬೇಕಾಗಿದ್ದ ಯುವಕರೇ ರಂಗನ ಇಸ್ಪೀಟ್ ಆಟದ ಗೆಳೆಯರಾಗಿದ್ದರು. ಇವರ ಪೈಕಿ ಎರಡು ವರ್ಷ ಹೈಸ್ಕೂಲಿನ ಮೆಟ್ಟಿಲು ತುಳಿದವನೆಂದರೆ ಶಿವಣ್ಣ ಒಬ್ಬನೇ.

ಪೇದೆಯಿಂದಲೇ ಟೆಲಿಗ್ರಾಂ ಓದಿಸಿ ವಿಷಯ ತಿಳಿದುಕೊಂಡ ತಾಯಿ ಮಗನಿಗೆ ಸುದ್ದಿ ತಿಳಿಸಲು ಓಡಿಕೊಂಡೇ ಬಂದಳು. ವಿದ್ಯೆಯ ಮಹತ್ವವನ್ನೇ ತಿಳಿಯದ ಗಂಗಕ್ಕನ ಒಬ್ಬನೇ ಒಬ್ಬ ಮಗ ಮೂರನೇ ಕ್ಲಾಸಿನಲ್ಲಿರುವಾಗ -

''ಇಂದಿನಿಂದ ನಾನು ಯಾವತ್ತಿದ್ದರೂ ಶಾಲೆಗೆ ಹೋಗುವುದೇ ಇಲ್ಲ. ಮಗ್ಗಿ ಹೇಳಲು ಕಲಿತುಕೊಂಡು ಬರದಿದ್ದರೆ ನಾಗರ ಬೆತ್ತದಲ್ಲಿ ಬೆನ್ನು ಪುಡಿ ಮಾಡುತ್ತೇನೆ ಎಂದಿದ್ದಾರೆ ಟೀಚರ್. ಆದುದರಿಂದ ನನಗೆ ಇನ್ನು ಶಾಲೆ ಬೇಡವೇ ಬೇಡ'' ಎಂದು ತೊದಲು ಭಾಷೆಯಲ್ಲಿ ಹೇಳಿದ್ದ. ಅವನ ತಾಯಿ ಆಗ ಅವನಿಗೆ ಬುದ್ಧಿ ಹೇಳದೆ -

''ನಿನ್ನ ಟೀಚರ್ ಕೈಯಲ್ಲಿ ಪೆಟ್ಟು ತಿನ್ನಲಿಕ್ಕಾ ನಾನಿಷ್ಟು ಕಷ್ಟಪಟ್ಟು ದುಡಿದು ನಿನಗೆ ಶಾಲೆ

ಕಲಿಸುವುದು? ಅವಳ ಶಾಲೆ ಗೀಲೆ ಎಲ್ಲಾ ಅವಳ ಎದೆಯ ಮೇಲೆ ಇಟ್ಟುಕೊಳ್ಳಲಿ. ನೀನಿನ್ನು ಶಾಲೆಗೆ ಹೋಗುವುದೂ ಬೇಡ, ಪೆಟ್ಟು ತಿನ್ನುವುದೂ ಬೇಡ'' ಎಂದು ಮುದ್ದಿನಿಂದ ಹೇಳಿದ್ದಳು ತಾಯಿ. ಎಳೆಯ ವಯಸ್ಸು ಕಳೆದು ರಂಗನಿಗೆ ಮೀಸೆ ಚಿಗುರಿ ಬಂತು. ಆದರೂ ತನ್ನ ಮಗ ವಿದ್ಯೆ ಆಗಲಿ, ದುಡಿಯುವ ಕೆಲಸ ಆಗಲಿ ಇಲ್ಲದೆ ಅಲೆಮಾರಿ ಕುದುರೆಯಂತೆ ಅಲ್ಲಿ ಇಲ್ಲಿ ಅಲೆಯುತ್ತಾ ಇರುವುದನ್ನು ಕಂಡು ಗಂಗಕ್ಕನಿಗೆ ತನ್ನಿಂದಾದ ತಪ್ಪು ಏನೂಂತ ತಿಳಿದು ಬಂತು. ಅದನ್ನು ನೆನದಷ್ಟೂ ಪಶ್ಚಾತ್ತಾಪ ಅವಳನ್ನು ಅರೆಜೀವ ಮಾಡಿತು. ಕೈಕಾಲು ಕಟ್ಟಿ ಗಂಗಕ್ಕಳನ್ನು ಗುಂಡಿಗೆ ಹಾಕಿದಂತಾಯಿತು. ಆ ಮೇಲೆ ಮಗನ ಗೆಳೆಯರನ್ನು ಕಂಡ ಕಂಡಲ್ಲಿ ''ನಿನ್ನನ್ನೀಗ ಹಲಸಿನ ಹಣ್ಣಿನಂತೆ ಸಿಗಿದು ತಿನ್ನುತ್ತೇನೆ'' ಎಂದು ಮನಸ್ಸಿನಲ್ಲಿಯೇ ಹೇಳಿಕೊಂಡು ಕೆಂಡಕಾರುವಂತಹ ಕಣ್ಣುಗಳಲ್ಲಿ ಅವರನ್ನು ನೋಡುತ್ತಿದ್ದಳು.

''ಅಪ್ಪಾ... ರಂಗಣ್ಣಾ, ನಿನ್ನ ಪ್ರಾಯದ ಹುಡುಗರು ಓದು, ಬರಹ ಕಲಿತು, ಹಾಗೆಯೇ ದುಡಿದು ಕೈತುಂಬಾ ತರುತ್ತಿದ್ದಾರಲ್ಲ ಮಗಾ? ಆದರೆ ನಿನಗೆ ಮಾತ್ರ ಏನಿದೆ ಹೇಳು? ಒಂದು ರುಯಿಯಷ್ಟೂ ಸಂಪಾದನೆ ಇಲ್ಲವಲ್ಲಪ್ಪಾ? ಆಗಲಿ ಹೋಗಿದ್ದು ಹೋಯಿತು. ಇನ್ನಾದರೂ ನೀನು ರಾತ್ರಿ ಶಾಲೆಗೆ ಸೇರಿ ವಿದ್ಯೆ ಬುದ್ಧಿ ಕಲಿತುಕೋ ಮಗಾ ಆಯಿತಾ?'' ಎಂದು ಅಷ್ಟೊಂದು ಸಾರಿ ಹೇಳಿದಳು.

''ಇಸ್ಸಪ್ಪ... ನೀನೊಂದು ಎಂತ ಹೇಳುತ್ತಿಯಾ? ಈ ನಿನ್ನ ಸಾಲೆ ಗೀಲೆ ಎಲ್ಲಾ ಯಾರಿಗೆ ಬೇಕು? ಎಂತೂ ನಿನಗೆ ಬೇಕೆ ಎಂದಾದರೆ ನಿನಗೇ ಹೋಗಬಹುದಲ್ಲಾ, ಯಾರು ಬೇಡ ಹೇಳ್ತಾರೆ?''

''ಆಂ... ಆಂ... ಹಾಗಲ್ಲ ಮಗಾ, ಶಾಲೆ ಕಲಿಯುವುದಾಗಲೀ, ಖರ್ಚಿಗೆ ಬೇಕಾದಷ್ಟು ಕಾಸಾದರೂ ದುಡಿಯದವರಿಗೆ ಈ ಕಾಲದಲ್ಲಿ ಯಾರು ಹೆಣ್ಣು ಕೊಡ್ತಾರೆ ಹೇಳು ನೋಡುವಾ? ಹಾಗಾದರೆ ನಿನಗೆ ಮದುವೆ ಆಗುವುದು ಹೇಗೆ?''

''ಇದು ಒಳ್ಳೆಯ ತಮಾಷೆಯ ಮಾತಾಯಿತಲ್ಲ ನಿನ್ನದು? ಹೌದಾ ಅಮ್ಮಾ ನಿನಗೇನು ಹುಚ್ಚಾ? ಅಲ್ಲಾ ಬ್ರಾಂತಾ? ನನ್ನ ಅಪ್ಪ ಶಾಲೆ ಕಲಿತು ದುಡಿದು ತಂದೇ ನಿನ್ನನ್ನು ಮದುವೆ ಆದದ್ದಾ? ಅದೆಲ್ಲ ಏನೂ ಇರದಿದ್ದರೂ ನಿನ್ನಪ್ಪ ನನ್ನಪ್ಪನಿಗೆ ಹೆಣ್ಣು ಕೊಡಲಿಲ್ಲವಾ?'' ತನ್ನ ಮಾತನ್ನೇ ಮಗ ತನಗೇ ಹಿಂದೆ ತಿರುಗಿಸಿ ಮುಟ್ಟಿಸುವಾಗ ತಾಯಿಯ ಬಾಯಿ ಕಟ್ಟಿಯೇ ಹೋದ ಹಾಗಾಯಿತು. ನಿಜವಾಗಿದ್ದ ವಿಷಯವನ್ನೇ ರಂಗ ನಕ್ಕು ಹೇಳಿದ್ದರೂ ಅವಳ ಒಡಲಲ್ಲಿ ನೋವಿನ ಬೆಂಕಿ ಉರಿಯಿತು.

ಮಡದಿಯ ಕಾಲಗುಣದಿಂದಾದರೂ ಮಗ ಹಾದಿಗೆ ಬರಬಹುದು ಎನ್ನುವ ಆಸೆಯಲ್ಲಿ ತನ್ನ ಕುಟುಂಬದ ಹೆಣ್ಣನ್ನೇ ಮಗನಿಗೆ ಮದುವೆ ಮಾಡಿ ಮನೆ ತುಂಬಿಸಿಕೊಂಡಿದ್ದಳು. ಆದರೆ ಏನು ''ಓಟೆಯೊಳಗೆ ಹಾಕಿದ ನಾಯಿಯ ಬಾಲದ ಹಾಗೆ ರಂಗ ದಿನಾ ಇಸ್ಪೀಟು ಆಡುವುದರಲ್ಲೇ ರಂಗಾಗುತ್ತಿದ್ದ.

''ರಂಗಾ... ಓ... ರಂಗಣ್ಣಾ ಬಾರೋ ಒಮ್ಮೆ ಇಲ್ಲಿಗೆ. ಇಗೋ ಟೆಲಿಗ್ರಾಂ ತಕೋ ಬಾ...'' ಅಷ್ಟು ದೂರದಿಂದಲೇ ಮಗನನ್ನು ಕರೆಯುತ್ತಾ ಬಂದಳು ಗಂಗಕ್ಕ. ತಾಯಿಯ ಬೊಬ್ಬೆ ಕೇಳಿದ ರಂಗ ಒಮ್ಮೆಲೇ ಬೆಚ್ಚಿ ಬಿದ್ದ. ಆಡುತ್ತಿದ್ದ ಆಟ ನಿಲ್ಲಿಸಿ, ಕೈಯಲ್ಲಿದ್ದ ಇಸ್ಪೀಟನ್ನು ಅಲ್ಲಿಯೇ ಎಸೆದು ದಡಬಡಾಂತ ಎದ್ದು ನಿಂತ. ಗಂಗಕ್ಕನ ಬಹಳ ಮುದ್ದಿನ ಮಗ ಆದರೂ ಅವನು ಅವಳ ಗಂಟಲ ಕಿರುಚಾಟಕ್ಕೆ ಅಷ್ಟೇ ಹೆದರುತ್ತಿದ್ದ. ಆದರೂ ಈಗ ಟೆಲಿಗ್ರಾಂನ ಸುದ್ದಿ ಕೇಳಿ ನಿಂತಲ್ಲೆ ಕುಣಿಯಲು ತೊಡಗಿದ. ''ಇಂದು ಸಂಜೆ ಐದು ಗಂಟೆಯ ಗಾಡಿಗೆ ನೀನು ಕಾಸರಗೋಡಿಗೆ ಹೊರಟು ಬಿಡಪ್ಪಾ.

ಶುಕ್ರವಾರವಾದ್ದರಿಂದ ಇಂದು ದಿನವೂ ಬಹಳ ಒಳ್ಳೆಯದಿದೆ'' ಎಂದು ಮಗನನ್ನು ಹೊರಡಲು ಅವಸರ ಮಾಡಿದಳು ಗಂಗಕ್ಕ. ತನ್ನ ಗೆಳೆಯರ ಕೂಟದಲ್ಲೇ ಇದ್ದ ರಂಗ ಆದಷ್ಟು ಬೇಗ ಅವರಿಂದ ಒಮ್ಮೆ ದೂರ ಇರಲಿ ಎನ್ನುವುದೇ ಅವಳ ಮನಸಿನಲ್ಲಿದ್ದ ಆಸೆಗಳಲ್ಲಿ ಒಂದಾಗಿತ್ತು.

''ಛೇ, ಛೇ, ಈವತ್ತು ಒಂದು ದಿನವಾದರೂ ಅವನು ಇಲ್ಲೇ ಇದ್ದು ನಾಳೆ ಮುಂಜಾನೆಯ ರೈಲಿನಲ್ಲಿ ಹೊರಟರೆ ಆಗಲಿಕ್ಕಿಲ್ಲವಾ ಗಂಗಕ್ಕಾ?'' ಸುಂದರ ಹೇಳಿದಾಗ, ಅವನ ಮೈಮೇಲೆ ಕುದಿಯುವ ನೀರನ್ನು ಚೆಲ್ಲುವಷ್ಟು ಗರ್ವ ಬಂತು ಅವಳಿಗೆ.

''ಯಾಕೆ? ಯಾಕಾಗಿ ಬೆಳಗಿನ ರೈಲನ್ನು ಕಾಯಬೇಕು ಅವನು? ಅಂತಹ ರಾಜಕಾರ್ಯ ಏನಿದೆ ಅವನಿಗೆ ಇಲ್ಲಿ'' ಸೊಂಟದ ಮೇಲೆ ತನ್ನ ಎರಡು ಕೈಗಳನ್ನೂ ಇಟ್ಟುಕೊಂಡು ಏದುಸಿರು ಬಿಡುತ್ತಾ ಕೇಳಿದಳು. ಅವಳು ಹೂಂಕರಿಸುವುದನ್ನು ನೋಡಿ ನಾಲಗೆ ಹೊರಳದೇ ಇದ್ದುದರಿಂದ ಸುಂದರನೂ ಬಾಯಿಗೆ ಬೀಗ ಹಾಕಿದವನಂತೆ ಮಾತನಾಡದೆ ನಿಂತ. ಶಿವಣ್ಣ ಹೇಳಿದ

''ಹಾಗೆ ಏನೂ ಅಲ್ಲ ಗಂಗಕ್ಕ, ಇಂದು ರಾತ್ರಿ ಮಾರಿಗುಡಿಯಲ್ಲಿ ತಾಳಮದ್ದಲೆ...''

''ಏನೂ...? ಮದ್ದಲೆಯಾ ಗಿದ್ದಲೆಯಾ? ಯಾವುದಕ್ಕೂ ಮೊದಲು ಒಮ್ಮೆ ಅವನ ಹೊಟ್ಟೆಗೂ ಬಟ್ಟೆಗೂ ಒಂದು ನೆಲೆ ಆಗಲಿ, ಆಮೇಲೆ ಎಲ್ಲ ಉಳಿದ ಕೆಲಸ'' ಇರುವ ಒಬ್ಬ ಮಗನೂ ಅವನ ತಂದೆ ಹಿಡಿದ ಹಾದಿಯಲ್ಲೇ ನಡೆಯದಿರಲಪ್ಪಾ ಎಂದು ದಿನಾ ದೇವರಲ್ಲಿ ಅವಳು ಸೆರಗು ಹಿಡಿದು ಬೇಡಿಕೊಳ್ಳುತ್ತಿದ್ದಾಳೆ.

ಬೀದಿ ಬಸವನಂತೆ ಅಲ್ಲಿ ಇಲ್ಲಿ ತಿರುಗುತ್ತಿದ್ದ ಗಂಗನ ಗಂಡ ಮಹಾಲಿಂಗನಿಗೆ ಕೋಳಿ ಅಂಕದ್ದೊಂದು ಹುಚ್ಚು. ಯಾವಾಗ ನೋಡಿದರೂ ಕೈಯ್ಯಲ್ಲೊಂದು ಅಂಕದ ಕೋಳಿಯನ್ನು ಹಿಡಿದುಕೊಂಡು ಅಂಕ ಇರುವಲ್ಲಿ ಹಾಜರಾಗುತ್ತಿದ್ದ. ಹಾಗಾಗಿ ಅವನನ್ನು ಊರಿನವರು ಎಲ್ಲರೂ 'ಕೋಳಿ ಮಾಲಿಂಗ' ಎಂದೇ ಅಡ್ಡ ಹೆಸರಿಟ್ಟು ಕರೆಯುತ್ತಿದ್ದರು. 'ಅಂಕದ ಕೋಳಿಗೆ ಬಾಳುಕತ್ತಿ ಕಟ್ಟುವುದರಲ್ಲೂ ಮಾಲಿಂಗಣ್ಣ ಬಹಳ ನಿಪುಣ' ಎಂದು ಎಲ್ಲರ ಬಾಯಲ್ಲೂ ಹೊಗಳಿಸಿಕೊಳ್ಳುತ್ತಿದ್ದ. ಎತ್ತರಕ್ಕೆ ತಕ್ಕ ದಪ್ಪ ಇದ್ದರೂ ದುಡಿಯಲು ಮೈ ಬಗ್ಗದ ಇವನನ್ನು 'ದೊಡ್ಡ ಕೋಣ' 'ಕದಿರೆಯ ತಟ್ಟಿರಾಯ' 'ಕಾರಿಂಜೆಯ ಕಲ್ಲುದಡ್ಡ' ಎಂದು ಅವನ ಹಿಂದೆ ಜನರು ತಮಾಷೆ ಮಾಡಿ ನಗುತ್ತಿದ್ದರು. ಗೆದ್ದ ಕೋಳಿಯೇ ಮಾಲಿಂಗನ ಅಪರೂಪದ ಸಂಪಾದನೆ ಆಗಿತ್ತು.

''ನನಗಂತೂ ಮಂಗಳೂರಿನ ಹೆಣ್ಣು ಬೇಡವೇ ಬೇಡ'' ಎಂದು ದಿಮಾಕು ತೋರಿಸುತ್ತಿದ್ದ ಮಾಲಿಂಗನೂ ಕಡೆಗೆ ತೆಳ್ಳಗೆ, ಬೆಳ್ಳಗಿದ್ದ ಗಂಗನನ್ನು ನೋಡಿ ಹುಚ್ಚು ಕಟ್ಟಿದ್ದ. ಮದುವೆಯಾದ ಹೊಸತರಲ್ಲಿ ಒಮ್ಮೆ ಮಗಳನ್ನೂ ಅಳಿಯನನ್ನೂ ಊರ ನೇಮಕ್ಕೆ ಕರೆಯಲು ಎಂದು ನಾಲ್ಕು ದಿನ ಮೊದಲೇ ಬಂದಿದ್ದ ಗಂಗನ ತಂದೆ ಸಂಕಪ್ಪ. ಅಂಗಳದಲ್ಲಿ ತರಗೆಲೆಯನ್ನು ಗುಡಿಸಿ ರಾಶಿ ಮಾಡುತ್ತಿದ್ದ ಮಗಳಿಗೆ ತೋಡಿನ ಮೇಲಿದ್ದ ಕಾಲುಸೇತುವೆ ದಾಟಿಕೊಂಡು ಬರುತ್ತಿದ್ದ ತಂದೆಯನ್ನು ಕಂಡು ಬಾರೀ ಖುಶಿಯಾಯಿತು. ಕೈಯಲ್ಲಿದ್ದ ಪೊರಕೆಯನ್ನು ಅತ್ತ ಎಸೆದವಳೇ ತೆಂಗಿನ ಕಟ್ಟೆಯತ್ತ ಓಡಿ ಹೋದಳು. ಅಲ್ಲಿ ಹಂಡೆಯಲ್ಲಿ ತುಂಬಿಸಿಟ್ಟಿದ್ದ ನೀರನ್ನು ತಂಬಿಗೆಯಲ್ಲಿ ತೆಗೆದು ''ಕೈ-ಕಾಲು ತೊಳೆಯಿರಿ ಅಪ್ಪಾ'' ಎಂದು ಸಂಕಪ್ಪನಿಗೆ ಕೊಟ್ಟಳು. ಅವನು ಮುಖ, ಕೈತೊಳೆದು ಬೈರಾಸ್‌ನಿಂದ ಒರೆಸಿಕೊಳ್ಳುತ್ತಾ ಬರುವಾಗ, ತಂದೆಗೆ ಕುಳಿತುಕೊಳ್ಳಲು ಹೇಳಿ ಬೇಗ ಹೋಗಿ ಕೋಣೆಯಲ್ಲಿದ್ದ ಚಾಪೆ ತಂದು ಚಾವಡಿಯಲ್ಲಿ ಬಿಡಿಸಿದಳು. ಅದರೊಟ್ಟಿಗೆ ತಾಂಬೂಲದ ಹರಿವಾಣವನ್ನೂ ಮತ್ತೊಂದು ಉಗುಳು ದಾನಿಯನ್ನೂ

ತಂದು ಮುಂದೆ ಇಟ್ಟಳು. ಬಾಯಿ ತುಂಬಾ ಹಾಕಿಕೊಂಡ ವೀಳ್ಯವನ್ನು ಜಗಿಯುತ್ತಾ ಗಳಿಗೆಗೊಮ್ಮೆ ಉಗುಳುದಾನಿಗೆ ಉಗುಳುತ್ತಿದ್ದ ಸಂಕಪ್ಪ ಹೇಳಿದ -

''ಹೌದಾ ಮಗಾ, ನಾಡಿದು ಮಂಗಳವಾರ ಜುಮಾದಿ ಸಾನದ ಕೊಡಿ ಏರಿಸುತ್ತಾರೆ ಎಂದುಂಟು. ಆದುದರಿಂದ ನೀವಿಬ್ಬರೂ ಮೊದಲ ದಿನವೇ ಬಂದು ಮೂರು ದಿನದ ನೇಮವನ್ನೂ ನೋಡಬೇಕು ಗೊತ್ತಾಯಿತಾ? ನಿನ್ನ ತಾಯಿಯೂ ಹಾಗೆ ಹೇಳಿದ್ದಾಳೆ ಮಗಾ. ಅವಳ ಮನಸನ್ನು ನೋಯಿಸಬೇಡಿ ತಿಳಿಯಿತಾ? ಇಬ್ಬರೂ ಮರೆಯದೆ ಬರಬೇಕು ಆಯಿತಾ? ಬಾರದೆ ಇರಬೇಡಿ ಏನು?'' ಮಾವನ ಒತ್ತಾಯದ ಮಾತು ಕೇಳಿದ ಮೇಲೆ ಈ ಹೊಸ ಮದುಮಗನ ಗತ್ತಾದರೂ ಏರದೆ ಇರುತ್ತಾ?

''ಛೇ... ಅದು ಹೇಗಾಗುತ್ತೆ? ಹೌದಾ ಮಾವಣ್ಣ, ನೇಮ ನೋಡಲು ಬೇಕಾಗಿ ಅಷ್ಟು ದಿನವೂ ಹೆಂಡತಿ ಮನೆಯಲ್ಲಿ ಕುಳಿತುಕೊಳ್ಳಬೇಕು ಎಂದರೆ ನನಗಾದರೂ ಎಲ್ಲಿದೆ ಸಮಯ? ಹಾಗೇನಾದರೂ ಬರಲೇ ಬೇಕು ಎಂದಾದರೆ ನಿಮ್ಮ ಮಗಳು ಬರುವಳು. ಅವಳನ್ನು ಕರೆದುಕೊಂಡು ಹೋಗುವುದಕ್ಕೆ ನನ್ನಿಂದೇನೂ ಅಡ್ಡಿ ಇಲ್ಲ. ನಾನು ಬರಲ್ಲ ಎಂದು ನಿಮಗೆ ಬೇಜಾರು ಆಗುವುದಾದರೆ ದೊಡ್ಡ ಬಂಡಿಯ ದಿನ ಬಂದರೆ ಸಾಕಲ್ಲವಾ?'' ಎಂದು ಬೆಣ್ಣೆಯಿಂದ ಕೂದಲು ಎಳೆದು ತೆಗೆದಂತೆ ಬಾರೀ ಚಂದದಲ್ಲಿ ತನ್ನ ದೊಡ್ಡಸ್ತಿಕೆ ತೋರಿಸಿದ ಮಾಲಿಂಗ. ''ಹಾಗಾದರೆ ಅದೂ ಆಗಬಹುದು. ನಿನಗೆ ಸಮಯವೇ ಇಲ್ಲ ಎಂದು ತಿಳಿದ ಮೇಲೂ ನಾನು ಒತ್ತಾಯ ಮಾಡುವುದು ಸರಿಯಲ್ಲ ಅಲ್ಲವಾ?'' ಎಂದು ಸಂಕಪ್ಪ ಹೇಳಿದ. ಗಂಗ ಅಡಿಗೆ ಮಾಡಿ ತಂದೆಯನ್ನೂ ಗಂಡನನ್ನೂ ಊಟಕ್ಕೆ ಕರೆದಳು. ಸೌತೆಕಾಯಿ ಸಾರು, ಸುವರ್ಣಗೆಡ್ಡೆಯ ಗೊಜ್ಜು. ಅದರೊಟ್ಟಿಗೆ ಸಿರ್ಕದಲ್ಲಿ ಹಾಕಿದ ಬಾಳೆಯ ಬೊಂಬೆ ಮತ್ತು ದಾರೆ ಪುಳಿಯ ನೀರು ಉಪ್ಪಿನಕಾಯಿ ಇತ್ತು. ಊಟವಾದ ಮೇಲೆ ಇಬ್ಬರೂ ಸಕ್ಕರೆ ಹಾಕಿದ್ದ ತೆಂಗಿನಕಾಯಿಯ ಹಾಲಿಗೆ ಇಡ್ಲಿಯನ್ನು ಅದ್ದಿ ತಿಂದು ಎದ್ದರು.

ಸೊಂಟದಲ್ಲಿದ್ದ ನಶ್ಯದ ಕುಪ್ಪಿಯನ್ನು ತೆಗೆದು ಮೂಗಿಗೆ ನಶ್ಯ ಏರಿಸಿದ ಸಂಕಪ್ಪ ಹುಲ್ಲಿನ ಚಾಪೆಯಲ್ಲಿ ಅಡ್ಡ ಬಿದ್ದುಕೊಂಡ. ಒಂದು ಕೋಳಿ ನಿದ್ದೆ ಆಗಿ ಏಳುವಾಗ ಗಂಗಳ ಒತ್ತರೆ ಸತ್ತರೆ ಎಲ್ಲಾ ಮುಗಿದಿತ್ತು. ''ನಾವು ಇನ್ನು ಬರ್ತ್ತೇವೆ'' ಎಂದು ಮಾಲಿಂಗನಿಗೆ ಹೇಳಿ ಇಬ್ಬರೂ ಹೊರಟರು.

ದೊಡ್ಡ ಬಂಡಿಯ ದಿನ ಹೊತ್ತು ಸಂಜೆಯಾಗುತ್ತಾ ಬರುವಾಗ ಮಾಲಿಂಗ ಶೃಂಗಾರ ಮಾಡಿಕೊಳ್ಳಲು ತೊಡಗಿದ. ಬಾವಿ ಕಟ್ಟೆಗೆ ಹೋಗಿ ಎರಡು ಕೊಡ ನೀರು ಸೇದಿ ಸ್ನಾನದ ಶಾಸ್ತ್ರ ಮುಗಿಸಿ ಬಿಟ್ಟ. ಮಡದಿ ಒಗೆದು ಒಣಗಿಸಿ ಮಡಿಸಿಟ್ಟ ಕಡು ಹಸಿರು ಬಣ್ಣದ ಲುಂಗಿಯನ್ನು ಸೊಂಟಕ್ಕೆ ಬಿಗಿದುಕೊಂಡು ಅದರ ಮೇಲೆ ಹಳದಿ ಬಣ್ಣದ ಗೆರೆಗೆರೆ ಇದ್ದ ಜುಬ್ಬ ಹಾಕಿಕೊಂಡ. ಹೆಗಲಿನ ಮೇಲೊಂದು ಬಿಳಿ ತೋರ್ತನ್ನೂ ಹಾಕಿಕೊಂಡ. ಮೊಳದಷ್ಟು ಉದ್ದಕ್ಕೆ ಬೆಳೆಸಿದ ತಲೆಗೂದಲನ್ನು ಬಾಚಿ ಬುಡಕ್ಕೊಂದು ಗಂಟು ಹಾಕಿದ. ಕಿವಿಯಲ್ಲಿ ನೇತಾಡುತ್ತಿದ್ದ ಕೆಂಪು ಕಲ್ಲಿನ ವಂಟಿಯನೊಮ್ಮೆ ಎರಡು ಕೈಯಲ್ಲೂ ಮುಟ್ಟಿ ನೋಡಿಕೊಂಡ. ''ಆಯಿತಲ್ಲಾ, ಇನ್ನು ಏನೂ ಬಾಕಿ ಉಳಿದಿಲ್ಲ'' ಎಂದು ತಿಳಿದುಕೊಂಡು ಬಾಯಿಗೊಂದು ಬೀಡಿ ಇಟ್ಟು, ಬೆಂಕಿ ಕಡ್ಡಿ ಗೀರಿ ಬೀಡಿಗೆ ಬೆಂಕಿ ಹಚ್ಚಿ ಬೀದಿಗೆ ಇಳಿದು ಬಿಟ್ಟ.

ಅಂದು ಕಡೇ ದಿನದ ಜಾತ್ರೆಯಾದುದರಿಂದ ಹೂ, ಪಿಂಗಾರ ಮತ್ತು ಬಣ್ಣ ಬಣ್ಣದ ಬಟ್ಟೆ, ಕಾಗದದ ಬಾವುಟದಲ್ಲಿ ಸಿಂಗರಿಸಿ ಬಂಡಿ ಸಾನದ ಅಂಗಳದೊಳಗೆ ನಿಂತಿತ್ತು. ಎದುರಿನ ಗದ್ದೆಯಲ್ಲಿ ಸಾಲಾಸಾಲಿನಲ್ಲಿ ಸಂತೆಯ ಸಾಮಾನೆಲ್ಲ ತುಂಬಿತ್ತು. ಬ್ಯಾಂಡ್, ಜೈನುಂಡೆ, ಗರ್ನಲ್‌ಗಳ ಅಬ್ಬರದ

ಜೊತೆ ಸುಕುನುಂಡೆ, ಚಕ್ಕುಲಿ, ತಂಬ್ಗೆಗುಲ್ಲಾ, ಕಡ್ಲೆಮಿಠಾಯಿ ಮಾರುವವರ ಗಲಾಟೆ ಕೇಳುತ್ತಿತ್ತು. ಈ ಬದಿಯಲ್ಲಿ ತೆಂಗಿನ ಎಣ್ಣೆಯಲ್ಲಿ ಕಾಯಿಸುತ್ತಿದ್ದ ಹಪ್ಪಳ, ಕಾರಕಡ್ಡಿ, ನೈಯಪ್ಪದ ಸುವಾಸನೆ ಮೂಗಿಗೆ ಹೊಡೆಯುತ್ತಿತ್ತು. ಸೀದಾ ಆ ಕಡೆ ಹೋದ ಮಾಲಿಂಗ ಎಲ್ಲಾ ತಿನಿಸನ್ನು ಒಮ್ಮೆ ಕಣ್ಣು ಬಿಟ್ಟು ನೋಡಿದ. ಆಮೇಲೆ ಪ್ರೀತಿಯ ಮಡದಿಗಾಗಿ ಎರಡು ಕಟ್ಟು ಬಿಸಿ ಬಿಸಿ ಪೋಡಿ ಕಟ್ಟಿಸಿಕೊಂಡು ದುಡ್ಡು ಕೊಟ್ಟ. ಇಡೀ ಗದ್ದೆಯಲ್ಲಿ ತುಂಬಿದ್ದ ಜನರ ಮಧ್ಯೆ ನುಗ್ಗಿ ನುಸುಳಿಕೊಂಡು ಹೋಗುತ್ತಿದ್ದ ಅವನಿಗೆ ಸಂತೆಯ ಸೋಡವನ್ನು ನೋಡಿದ ಕೂಡಲೆ ಗಂಟಲಿನ ಪಸೆ ಆರಿ ಬಾಯಾರಿಕೆ ಆಗಲು ಶುರುವಾಯಿತು. ಹೆಜ್ಜೆ ಎತ್ತಿ ಮುಂದೆ ಇಡುವ ಎಂದರೆ ನಿಂತಲ್ಲಿಂದ ಕಾಲು ಮುಂದೆ ಚಲಿಸಲಿಲ್ಲ. ಜುಬ್ಬದ ಆ ಕಿಸೆ, ಈ ಕಿಸೆ ಹುಡುಕಿ ಸಿಕ್ಕಿದ ಪುಡಿ ಕಾಸನ್ನು ಹಿಡಿದು ಸೋಡದಂಗಡಿಯ ಬಳಿ ನಡೆದ. ಬೀಡಾ ಬೀಡಿಯೊಟ್ಟಿಗೆ ಸೋಡಾವನ್ನೂ ಮಾರುವವ 'ಕುಂ...ಯ್‌ಯ್' 'ಅಂತ ಒಡೆದು ಕೊಟ್ಟ ಕೆಂಪು ಬಣ್ಣದ ನೀರಿದ್ದ ಕುಪ್ಪಿಯನ್ನು ಬಾಯಿಗೆ ಇಟ್ಟಿದ್ದನಷ್ಟೆ, ಅಷ್ಟು ಹೊತ್ತಿಗೆ ಅಂಕದ ಕೋಳಿಯನ್ನು ಕಂಕುಳಲ್ಲಿಟ್ಟುಕೊಂಡು 'ಬಲ್ಪೆತಿಮಾರ್' ಗದ್ದೆಗೆ ಇಳಿದುಕೊಂಡು ಬರುವ ಪೂವಪ್ಪ ಕಣ್ಣಿಗೆ ಬೀಳಬೇಕಾ? ಬಾಯಲ್ಲಿದ್ದ ಸೋಡದ ನೀರನ್ನು ನುಂಗುವಷ್ಟೂ ಸಮಯವಿಲ್ಲದ ಕೋಳಿ ಮಾಲಿಂಗ ಅಂಗಡಿಯವನಿಗೆ ಕಾಸು ಕೊಡುವುದನ್ನೂ ಮರೆತು ಸೋಡದ ಕುಪ್ಪಿಯೊಂದಿಗೆ ಓಡಿಕೊಂಡೇ ಹೋದ ಪೂವಪ್ಪನ ಕೈಯಲ್ಲಿದ್ದ ಹುಂಜನ ಬಳಿ. ದುಡ್ಡಿನ ಜೊತೆ ಕುಪ್ಪಿಯೂ ಕೈತಪ್ಪಿ ಹೋಗುವುದನ್ನು ಕಣ್ಣಾರೆ ನೋಡುತ್ತಿದ್ದ ಅಂಗಡಿಯವ ಕಂಗಾಲಾಗದೆ ಇದ್ದಾನಾ? ಎಳನೀರು ಕೆತ್ತುತ್ತಿದ್ದ ತನ್ನ ಕೆಲಸದ ಹುಡುಗನನ್ನು ಕರೆದು ''ಇಗೊಳಾ ಸೀತಾರಾಮ, ನಾನೀಗ ಬರ್ತೀನಿ ಅಂಗಡಿ ನೋಡಿಕೊ'' ಎಂದು ಹೇಳಿದವನೇ ಕಾಲು ದಂಟುವಂತೆ ಇದ್ದ ಲುಂಗಿಯನ್ನು ಎರಡು ಕೈಯಿಂದಲೂ ಮೇಲೆ ಎತ್ತಿಕೊಂಡು -

''ಓ... ಅಣ್ಣಾ... ಓ... ಅಣ್ಣಾ... ಇದು ಎಂತ ವ್ಯಾಪಾರ ನಿಮ್ಮದು?'' ಎಂದು ಕೂಗಿಕೊಂಡೇ ಮಾಲಿಂಗನ ಹಿಂದೆ ಏದುಸಿರು ಬಿಡುತ್ತಾ ಓಡಿ ಬಂದ. ಕುಪ್ಪಿಯ ಜೊತೆ ದುಡ್ಡನ್ನೂ ವಸೂಲು ಮಾಡಿ ''ಓಪ್ಪಾ, ಸಂಜೆಯ ಬೋಣಿಗೆ ಒಳ್ಳೆಯ ಗಿರಾಕಿ ಸಿಕ್ಕಿತು ನನಗೆ'' ಎಂದು ಪಿರಿ ಪಿರಿ ಮಾಡುತ್ತಾ ಹಿಂತಿರುಗಿದ.

''ಅರರೇ ಮಾಲಿಂಗಣ್ಣ! ಏನು ಬಹಳ ಅಪರೂಪ ಆಗಿದ್ದಿ, ನೋಡಲಿಕ್ಕೆ ಇಲ್ಲ, ಹೌದಾ... ಏನು ಮಾರಾಯ ನಿನ್ನ ಸಂಗತಿ? ಅಂದ ಹಾಗೆ ನೀನೇನು ಇಲ್ಲಿ? ಓ... ತಿಳಿಯಿತು, ತಿಳಿಯಿತು. ಅತ್ತೆ ಮನೆ ಜೌತಣಕ್ಕೆ ಬಂದವನು ಅಲ್ಲವಾ ನೀನು? ಆಗಲಿಯಪ್ಪಾ ಆಗಲಿ. ಇದೋ ದೇವರ ಗಂಧ ಪ್ರಸಾದ'' ಮಾಲಿಂಗನನ್ನು ಭೇಟಿಯಾದ ಸಂತೋಷದಲ್ಲಿ ಹೇಳಿದ ಪೂವಪ್ಪ. ಅವನು ಕೊಟ್ಟ ಪ್ರಸಾದವನ್ನು ಜಾಗಟೆ ಬಾರಿಸಿಕೊಂಡು ಬರುವ ದಾಸಪ್ಪನಂತೆ ಹಣೆಗೆ ಉದ್ದಕ್ಕೆ ನಾಮ ಎಳೆದುಕೊಂಡ. ಅದರ ಜೊತೆ ಇದ್ದ ಹೂವಿನ ಎಸಳನ್ನು ಕಿವಿಯ ಹಿಂದಕ್ಕೆ ಸಿಕ್ಕಿಸಿ ಮಾಲಿಂಗ ಹೇಳಿದ, ಈ ಕೋಲ, ನೇಮದ ಜೊತೆ ಬ್ಯಾಂಡ್, ವಾದ್ಯ, ಬೆಡಿ, ಗರ್ನಲ್ ಏನೇ ಇರಲಿ ಆದರೆ ಕೋಳಿ ಅಂಕ ಒಂದಿಲ್ಲ ಎಂದಾದರೆ ಅದನ್ನೊಂದು ಜಾತ್ರೆ ಎಂದು ಯಾರಾದರೂ ಹೇಳುತ್ತಾರಾ? ಇದಕ್ಕೆ ನೀನು ಏನು ಹೇಳುತ್ತಿ ಹೇಳು ನೋಡುವಾ.....?''

''ಛೇ...! ಮತ್ತೆ? ಹೌದಪ್ಪಾ, ಕೋಳಿ ಅಂಕ ಇದ್ದರೆ ಊರಿನ ಜಾತ್ರೆಗೊಂದು ಚಂದವೇ ಬೇರೆ ಅಲ್ಲವಾ?'' ಮಾತನಾಡುತ್ತಿದ್ದಂತೆಯೆ ಕೈಯಲ್ಲಿದ್ದ ಪೋಡಿಯ ಕಟ್ಟನ್ನು ಜುಬ್ಬದ ಕಿಸೆಗೆ ಇಳಿಸಿದ ಮಾಲಿಂಗ, ಇಷ್ಟಗಾರನ ಜೊತೆ ಇದ್ದ ಹುಂಜವನ್ನು ತನ್ನ ಕೈಗೆ ತೆಗೆದುಕೊಂಡ. ಪೂವಪ್ಪ

ತಾನು ಸುತ್ತಿದ್ದ ಲುಂಗಿಯ ಬಲತುದಿಯನ್ನು ಬದಿಗೆ ಸರಿಸಿ ಒಳ ಚಡ್ಡಿಯ ಕಿಸೆಯಲ್ಲಿದ್ದ ಎಲೆ ಅಡಿಕೆಯ ಕಟ್ಟನ್ನು ಹೊರಗೆ ತೆಗೆದ. ಇಬ್ಬರೂ ಕೆರೆದ ಅಡಿಕೆಯ ತುಂಡನ್ನು ಬಾಯಿಗೆ ಎಸೆದು ವೀಳ್ಯದೆಲೆಯ ತೊಟ್ಟು ತುಂಡರಿಸಿ ಸುಣ್ಣ ಹಚ್ಚಿದರು.

ಕಾಲಿಗೆ ಹುರಿಹಗ್ಗ ಬಿಗಿದಿದ್ದ ಹುಂಜಗಳ ಸೈನ್ಯ ಯುದ್ಧಕ್ಕೆ ಹೊರಟಂತೆ ರಣರಂಗದಲ್ಲಿ ಅತ್ತಿತ್ತ ತಿರುಗುತ್ತಿತ್ತು, ಸೊಕ್ಕಿನ ಕೋಳಿಗಳು ಗತ್ತಿನಲ್ಲಿ ತಲೆ ಎತ್ತಿ ಆ ಕಡೆಗೊಮ್ಮೆ ಈ ಕಡೆಗೊಮ್ಮೆ ನೋಡುವಾಗ ನಿಂತಲ್ಲೇ ಮಾಲಿಂಗನ ಮೈ ನವಿರೇಳುತ್ತಿತ್ತು. ಈ ಅಂಕದ ಕೋಳಿಯ ಮೇಲಿನ ಪ್ರೀತಿಗೆ ಮರುಳಾದ ಅವನು ಅತ್ತೆ, ಮಾವ, ಮಡದಿ, ನೇಮ, ಊಟ, ತಿಂಡಿ ಇದೆಲ್ಲವನ್ನೂ ಮರೆತು ಬಿಟ್ಟ. ಉಟ್ಟಿದ್ದ ಲುಂಗಿಯನ್ನು ಮಡಿಸಿ ಕಾಲಗಂಟಿನ ಮೇಲೆ ಎಳೆದು ಕಟ್ಟಿಕೊಂಡ. ಹೆಗಲಲ್ಲಿದ್ದ ತೋರ್ತನ್ನು ಮುಂಡಾಸಿನಂತೆ ತಲೆಗೆ ಸುತ್ತಿಕೊಂಡ. ಈ ಏರ್ಪಾಡೆಲ್ಲಾ ಮುಗಿದ ಮೇಲೆ ಇಬ್ಬರೂ ಉತ್ಸಾಹದಲ್ಲಿ ಅಂಕದ ಕಟ್ಟೆಗೆ ಇಳಿದರು.

ಸೂರ್ಯ ಮುಳುಗಿ ಕತ್ತಲೆಯಾದರೂ ಕೋಳಿ ಅಂಕದ ಹುಚ್ಚರಿಗೆ ಇನ್ನೂ ಜೂಜು ಕಟ್ಟಿ ಆಡುವ ಆಸೆ. ಸರಿ, ಅಲ್ಲಿ - ಇಲ್ಲಿಂದ ಗ್ಯಾಸ್ ಲೈಟೂ ಬಂತು. ಈಗ ಅಂಕದ ಕಣಕ್ಕೆ ಇನ್ನಷ್ಟು ರಂಗೇರಿತು. ತನ್ನ ಹುಂಜ ಕೆಮ್ಮೈರೆ ಗೆದ್ದಿತು ಎಂದು ಸಂತೋಷದಿಂದಿದ್ದ ಪೂವಪ್ಪನಿಗೆ ಮಾಲಿಂಗನಿಗೊಂದಷ್ಟು ಗಮ್ಮತ್ತು ಮಾಡುವ ಎಂದು ಮನಸಾಯಿತು.

''ಛೇ... ಬೇಡಪ್ಪಾ..., ಅದೆಲ್ಲ ಏನೂ ಬೇಡ...'' ಬಾಯಲ್ಲಿ ಹೇಳುತ್ತಿದ್ದಂತೆಯೇ ಮಾಲಿಂಗ ಪೂವಪ್ಪನೊಟ್ಟಿಗೆ ಶರಾಬು ಅಂಗಡಿಗೆ ಹೋಗಿ 'ಡಿಂಗ್' ಆದ. ಆಮೇಲೆ ಅವರು ಒಬ್ಬರನೊಬ್ಬರು ಬಿಟ್ಟುಕೊಟ್ಟು ಅವರವರ ಹಾದಿ ಹಿಡಿದು ನಡೆದರು. ಸರೀ ಕುಡಿದು ತಲೆಗೆ ಏರಿದ್ದ ಅಮಲಿನೊಟ್ಟಿಗೆ ತೂರಾಡಿಕೊಂಡು ಗದ್ದೆಯ ಕಟ್ಟಹುಣಿಯಲ್ಲಿ ಬರುತ್ತಿದ್ದ ಮಾಲಿಂಗ ನಾಲ್ಕೇ ನಾಲ್ಕು ಹೆಜ್ಜೆ ನಡೆದನೋ ಇಲ್ಲವೋ ಆಗಲೆ ಕಾಲಿನ ಆಯ ತಪ್ಪಿ 'ಡದಕ್ಕ'ಂತ ಬಿದ್ದು ಬಿಟ್ಟ. ಗದ್ದೆಯಲ್ಲಿ ಬಿದ್ದಲ್ಲಿಂದ ಎದ್ದು ನಿಲ್ಲಲೂ ಶಕ್ತಿ ಇಲ್ಲದ ಅವ ಹೊರಳಿಕೊಂಡು, ನರಳಿಕೊಂಡು, ಯಾವ ಯಾವ ಕಾಲದ ಪ್ರಸಂಗವನ್ನು ಓರುತ್ತಾ ಕೋರುತ್ತಾ ಅಲ್ಲಿಯೆ ನಿದ್ದೆಯಲ್ಲಿ ಕಿರುಚತೊಡಗಿದ.

ಕೋರ್‍ರೊಟ್ಟಿ, ನೀರ್ದೋಸೆ, ಸೇವಿಗೆ ಎಲ್ಲ ಮಾಡಿಟ್ಟು ಎರಡು ಸೀಸೆ ಶೇಂದಿಯನ್ನು ತಂದಿಟ್ಟು ಅವನ ಅತ್ತೆ ಮಾವ ಕಾದದ್ದೆ ಬಂತು. ಪ್ರೀತಿಯ ಒಬ್ಬಳೆ ಮಗಳ ಗಂಡ ಎಂಬ ಅಭಿಮಾನವೂ ಮಾಲಿಂಗನ ಮೇಲಿತ್ತು ಅವರಿಗೆ.

ಗಂಡನ ಹೆಗಲಿಗೆ ಹೆಗಲು ತಾಗಿಸಿಕೊಂಡೆ ತಾನು ಸಾನದ ಜಾತ್ರೆಯಲ್ಲಿ ತಿರುಗಬೇಕು. ನಮ್ಮ ಜೋಡಿಯನ್ನು ನೋಡಿ ಮತ್ಸರ ಪಡುವ ತನ್ನ ಗೆಳತಿಯರ ಮುಖ ನೋಡಿ ಸಂತೋಷಪಡಬೇಕು. ಎಂದೆಲ್ಲಾ ಹಗಲು ಕನಸು ಕಟ್ಟಿ ಆಲೋಚಿಸುತ್ತಿದ್ದಳು ಗಂಗ. ಸೂರ್ಯ ಮುಳುಗುವ ಮೊದಲೆ ಸಾಬೂನು ಹಾಕಿ ಮುಖ, ಕೈಕಾಲು ತೊಳೆದಳು. ತಲೆ ತುಂಬಾ ಎಣ್ಣೆ ಹಚ್ಚಿ ಬಾಚಣಿಗೆಯಿಂದ ತಲೆ ಬಾಚಿದಳು. ಉದ್ದದ ಕೂದಲಿನಲ್ಲಿ ಐದು ಎಸಳಿನ ಜಡೆ ಹೆಣೆದು ಅದರ ತುದಿಗೆ ರಿಬ್ಬನ್ ಬಿಗಿದು ಗೊಂಡೆ ಹಾಕಿದಳು. ಅಬ್ಬೊಲಿ, ಸೇವಂತಿಗೆ, ಸಂಪಿಗೆ ಮತ್ತು ಗುಲಾಬಿಯ ಹೂಗಳನ್ನೂ ಮುಡಿದುಕೊಂಡು ಅದರ ಮೇಲೆ ಕೇದಗೆಯನ್ನೂ ಪೊರಕೆಯ ಕಡ್ಡಿಯಲ್ಲಿ ಸಿಕ್ಕಿಸಿಕೊಂಡಳು. ತನ್ನ ತಾಯಿ ಕೊಟ್ಟ ಹೊಸ ಸೀರೆ, ರವಕೆಯನ್ನೂ ಉಟ್ಟುಕೊಂಡ ಈ ಹೊಸ ಮದುವಣಗಿತ್ತಿ ಹೆಣ್ಣು, ಗಂಡ ಬರುವ ಹಾದಿಯನ್ನು ನೋಡಿ ನೋಡಿ ಕಡೆಗೂ ಕತ್ತು ನೋವು ಮಾಡಿಕೊಂಡದ್ದೇ ಬಂತು.

ಮಗಳ ಕಂದಿದ ಮುಖ ನೋಡಿ ಹೊಟ್ಟೆ ಉರಿಸಿದ ತಾಯಿ ಸೀತು ಎಷ್ಟು ಹೇಳಿದರೂ ಊಟ ಮಾಡದೆ ಬರಿ ನೆಲದಲ್ಲಿ ಬಿದ್ದು ಉರುಳುತ್ತಾ ಮಲಗಿಕೊಂಡಳು ಗಂಗ.

ದಿನಾ ಮುಂಜಾನೆ ಕೋಳಿ ಕೂಗುವಾಗಲೆ ಚಾಪೆಯಿಂದ ಏಳುತ್ತಿದ್ದ ಗಂಗ ಇಂದು ಹೊತ್ತು ಬೆಳಗಾದರೂ ಮಲಗಿದಲ್ಲಿಂದ ಏಳಲು ಮನಸ್ಸಿಲ್ಲದೆ ಗಂಡನ ಕಲ್ಲು ಮನಸ್ಸನ್ನೆ ನೆನೆಯುತ್ತಿದ್ದಳು. ಅಷ್ಟು ಹೊತ್ತಿಗೆ ಓಡಿಕೊಂಡೆ ಬಂದಳು ಅವಳ ಗೆಳತಿ ಸಂಪ.

''ಇಗೊಳೆ ಗಂಗಾ... ಇದೆಂತದೆ ಮಾರಾಯಿತಿ ನಿನ್ನ ಗಂಡನ ಕತೆ...?''

''ಏನೇ... ಏನಾಯಿತು...? ಹೇಳೆ ಒಮ್ಮೆ ಬೇಗ'' ಸಂಪ ಹೇಳಿದನ್ನು ಕೇಳಿದ ಗಂಗ ಒಮ್ಮೆಲೆ ಬೆಚ್ಚಿ ದಡಕ್ಕಂತ ಎದ್ದು ಕುಳಿತಳು.

''ನಾನು ಏನೂಂತ ಹೇಳಲಿ ಮಾರಾಯಿತಿ? ಏನು ಹೇಳಲೂ ನನಗೆ ನಾಲಗೆಯೆ ಬರೋಲ್ಲಪ್ಪಾ...''

''ಹೌದಾ? ಹಾಗಾದರೆ ಮತ್ತೆ ಯಾಕೆ ಇಲ್ಲಿಗೆ ಬಂದೆ ನೀನು? ನನ್ನ ಹೊಟ್ಟೆ ಉರಿಸಲಿಕ್ಕಾ? ಹೇಳಲು ಮನಸಿದ್ದರೆ ಹೇಳು ಇಲ್ಲದಿದ್ದರೆ ಇಲ್ಲಿಂದ ಹೋಗಾಚೆ'' ಗಂಗ ಕೋಪದಿಂದ ಹಲ್ಲು ಕಡಿದು ಹೇಳಿದಳು.

''ಬೇರೇನೂ ಅಲ್ಲವೇ ನಮ್ಮ ಮನೆಗೆ ನಿನ್ನೆ ತುಂಬಾ ಜನ ನೆಂಟರು ಬಂದಿದ್ದರಲ್ಲವಾ? ಅವರಿಗೆ ಇಂದು ಬೆಳಿಗ್ಗೆ ಚಾ ಮಾಡಲು ಹಾಲು ಬೇಕಾಗಿತ್ತು ಎಂದು ಅಚ್ಚಕ್ಕನ ಮನೆಗೆ ಹೋಗುತ್ತಿದ್ದೆ. ಆಗ ಗದ್ದೆಯ ಹುಣಿ ಬಳಿ ಯಾರೋ ಮಲಗಿದ ಹಾಗೆ ಕಂಡಿತು ನೋಡು. ಯಾರಪ್ಪಾ ಈ ಕೆಸರು ಗದ್ದೆಯಲ್ಲಿ ಹೊರಳುತ್ತಿರುವ ಪುಣ್ಯಾತ್ಮ ಎಂದು ಬಗ್ಗಿ ನೋಡುವಾಗ ಅದು ನಿನ್ನ ಗಂಡನೆ ಆಗಿರಬೇಕಾ? ಛೇ...! ಮೂಗಿನವರೆಗೆ ಕುಡಿದು ಬೋಧವೆ ಇಲ್ಲದಂತೆ ಬಿದ್ದಿದ್ದರು ಗೊತ್ತುಂಟಾ ನಿನಗೆ? ಪಾ...ಪ, ನನಗೆ ನಿನ್ನನ್ನು ನೋಡುವಾಗ ಎಷ್ಟೊಂದು ಸಂಕಟ ಆಗುತ್ತೆ ಎಂದು ಹೇಳಲೆ ತಿಳಿಯುತ್ತಿಲ್ಲ.'' ಗಂಗನಿಗಿಂತಲೂ ಎರಡು ವರ್ಷ ಪ್ರಾಯದಲ್ಲಿ ಹಿರಿಯವಳಾದರೂ ಮದುವೆಯಾಗದೆ ಕನ್ಯೆಯಾಗಿದ್ದ ಸಂಪ ತನ್ನ ಮನಸಲ್ಲಿ ಕುದಿಯುವ ಸಂಕಟವನ್ನು ಈ ರೀತಿಯಲ್ಲಿ ತೋರಿಸಿ ತೃಪ್ತಿಪಟ್ಟಳು. ನಾಚಿಕೆ, ಅವಮಾನ ತಡೆದುಕೊಳ್ಳಲಾಗದೆ ಗಂಗನ ಎರಡು ಕಣ್ಣುಗಳಲ್ಲೂ ಗಂಗಾ ಪ್ರವಾಹವೇ ಇಳಿದು ಬಂತು.

ಬೆಳಿಗ್ಗೆ ಬೀಸಿದ ಚಳಿಗಾಳಿ ದೇಹಕ್ಕೆ ಸೋಂಕಿದಾಗ ಮಾಲಿಂಗನ ತಲೆಗೆ ಏರಿದ್ದ ಅಮಲೆಲ್ಲ ಇಳಿದಿತ್ತು. ಅವನ ಕಿಸೆಯಲ್ಲಿದ್ದ ಪೋಡಿಯ ಕಟ್ಟು ಕೆಳಗೆ ಬಿದ್ದು ಚಲ್ಲಾಪಿಲ್ಲಿಯಾಗಿತ್ತು. ತಿಂಡಿಗೆ ಮುತ್ತಿದ ಕಾಗೆಯ ಹಿಂಡುಗಳು ಕೇಳುವವರ ಕಿವಿ ಕಿವುಡಾಗುವಂತೆ ಕೂಗುತ್ತಿದ್ದವು. ಮೆಲ್ಲ ಮೆಲ್ಲ ಕಣ್ಣು ತೆರೆದ ಮಾಲಿಂಗನಿಗೆ 'ಈಗ ತಾನು ಎಲ್ಲಿದ್ದೇನೆ, ಹೇಗಿದ್ದೇನೆ' ಎಂಬ ಜ್ಞಾನ ಬಂತು. ಗದ್ದೆಯ ಮಣ್ಣಲ್ಲಿ ಹೊರಳುವಾಗ ಆಚೀಚೆ ಸರಿದಿದ್ದ ದೇಹದ ಬಟ್ಟೆಯನ್ನು ಬೇಗ ಸರಿಮಾಡಿಕೊಂಡು ದಡಕ್ಕಂತ ಎದ್ದು ನಿಂತ. ಅಂಗಿ, ಬಟ್ಟೆಗೆ ಅಂಟಿದ ಕಸ ಕಡ್ಡಿ ಮಣ್ಣನ್ನು ಜಾಡಿಸಿಕೊಂಡ. ಒಂದಷ್ಟು ದೂರದಲ್ಲಿ ಬಿದ್ದಿದ್ದ ಬೈರಾಸನ್ನು ಹೆಕ್ಕಿಕೊಂಡ.

''ಆಂ... ಇನ್ನು ಯಾರಾದರೂ ನನ್ನ ಈ ವೇಷವನ್ನು ನೋಡುವುದಕ್ಕಿಂತ ಮೊದಲು ಒಮ್ಮೆ ಇಲ್ಲಿಂದ ಓಡಿ ಹೋಗುತ್ತೇನಪ್ಪಾ...'' ಎಂದು ಮನಸ್ಸಲ್ಲೇ ನೆನೆದ ಮಾಲಿಂಗ ಮತ್ತೆ ಒಂದು ಗಳಿಗೆಯೂ ಅಲ್ಲಿ ನಿಲ್ಲದೆ ಒಂದೇ ಸಮನೆ ಉಸಿರು ಬಿಗಿ ಹಿಡಿದು ಓಡಿದ ತನ್ನ ಊರಿಗೆ.

ಎಲ್ಲರಂತೆ ತನ್ನ ಗಂಡನೂ ದುಡಿದು ತಂದು ಸಂಸಾರದ ಹೊರೆಯನ್ನು ಹೊತ್ತುಕೊಳ್ಳುವರು ಎಂಬ ಭರವಸೆಯನ್ನು ಕಳೆದುಕೊಂಡಳು ಗಂಗ. ಖರ್ಚಿಗೆ ಬೇರೆ ದಾರಿಯೇ ಕಾಣದಾದಾಗ ತವರು ಮನೆಯಿಂದ ತಂದ ಹಸುವನ್ನೆ ನಂಬಬೇಕಾಯಿತು. ಆದರೂ ಹೋಟೆಲ್‌ಗೆ, ಮನೆಯ ಕೇಕದವರಿಗೆ ಹಾಲು ಮಾರಿದ ದುಡ್ಡಲ್ಲಿ ದಿನಕ್ಕೊಂದು ಕಟ್ಟು ಬೀಡಿಯೂ, ಶೇಂದಿ ಕುಡಿಯಲು ಕಾಸೂ ಗಂಗ ಕೊಡಲಿಲ್ಲ ಎಂದಾದರೆ, ಅವಳು ಅಕ್ಕಿಯ ಪಾತ್ರೆಯಲ್ಲಿ, ಮೂಲೆ ಹಲಗೆಯಲ್ಲಿ ಅಡಗಿಸಿ ಇಟ್ಟ ರುಯಿ ಕಾಸಿಗೂ ಮಾಲಿಂಗ ಕೈಕೊಡುತ್ತಿದ್ದ. ಹಾಗಾಗಿ ಎಷ್ಟೋ ಸಲ ಅಂಗಡಿಯಿಂದ ಅಕ್ಕಿಯಾಗಲಿ, ಉಪ್ಪು ಹುಳಿ, ಮೆಣಸಾಗಲಿ ಕೊಂಡು ತರಲು ಕೈಯಲ್ಲಿ ಕಾಸಿಲ್ಲದೆ ಅವಳು ಉಪವಾಸ ಮಲಗಿದ್ದೂ ಉಂಟು. ಹಲವು ಸಲ ಕೋಪದಲ್ಲಿ ಪಿತ್ತ ಕೆರಳಿದರೆ -

''ಒಟ್ಟಾರೆ ನನ್ನ ಅಪ್ಪ ಅಮ್ಮನಿಗೆ ಬುದ್ಧಿ ಇಲ್ಲ. ಅಲ್ಲದಿದ್ದರೆ ನಿಮ್ಮಂತಹ ಕಲ್ಲು ಮನಸಿನವರಿಗೆ ಹೆಣ್ಣು ಕೊಡುತ್ತಾರಾ? ನಿಮ್ಮ ಬದಲಿಗೆ ಆ ಗಡಾಯಿ ಕಲ್ಲಿಗೆ ಕಟ್ಟಿದ್ದರೂ ನಾನು ಸುಖದಲ್ಲಿರುತ್ತಿದ್ದೆ. ಎಲ್ಲಾ ಗಂಡಸರೂ ದುಡಿದು ತಂದು ಹೆಂಡತಿ ಮಕ್ಕಳನ್ನು ಸಾಕುವುದನ್ನು ನೋಡಿದ್ದೇನೆ. ಆದರೆ ಹೆಂಡತಿ ಸಂಪಾದಿಸಿದ ಒಟ್ಟೆ ಮುಕ್ಕಾಲನ್ನೂ ಕದಿಯುವ ಗಂಡನನ್ನು ನಾನು ನೋಡಿಲ್ಲಪ್ಪಾ'' ಎಂದು ಅವನ ಎದೆಗೆ ನಾಟುವಂತೆ ಮುಳ್ಳಿನ ಮಾತನ್ನು ಚುಚ್ಚುತ್ತಲೆ ಇದ್ದಳು. ಮಡದಿಯ ಬಾಯಿಯಿಂದ ಬೈಗುಳ ಕೇಳಿ ಕೇಳಿ ಸಾಕು ಸಾಕಾದ ಮಾಲಿಂಗ ಒಂದು ದಿನ ಅವಳ ಕಿವಿಯೋಲೆಯನ್ನೆ ಕದ್ದು ಮನೆ ಬಿಟ್ಟೇ ಹೋಗಿ ಬಿಟ್ಟ.

''ಹೋದರೆ ಹೋಗಲಿ ಆಚೆ, ಮನೆಯ ಶನಿ ಹೋದಂತಾಯಿತು'' ಎಂದು ಸುಮ್ಮನಿದ್ದಳಲ್ಲದೆ ಅವನನ್ನು ಹುಡುಕುವುದಾಗಲಿ, ಇನ್ನೊಬ್ಬರಿಂದ ಹುಡುಕಲು ಹೇಳುವ ಗೋಜಿಗಾಗಲಿ ಹೋಗದೆ ಕುತ್ತ ಕುಳಿತಳು ಗಂಗ.

''ಏನೇ ಗಂಗ ಕೈ ಹಿಡಿದ ಗಂಡನನ್ನೆ ಓಡಿಸಿದಿಯಲ್ಲಾ ನೀನು? ಇದೆಂತಹ ಮನಸ್ಸಪ್ಪ ನಿನ್ನದು?'' ಹೀಗೆ ಹೇಳಿ ಯಾರಾದರೂ ಅವಳ ಒಡಲ ನೋವನ್ನು ಚಿವುಟಿದರು ಎಂದಾದರೆ -

''ಹೌದು... ಇವರಂತಹ ಬುರ್ನಾಸ್ ಬುದ್ಧಿ ನಿಮ್ಮ ಗಂಡಂದಿರಿಗೂ ಇದ್ದಿದ್ದರೆ ನೀವೂ ಹೇಳುತ್ತಿದ್ದಿರಿ. ಇಂತಹ ಗಂಡ ಇದ್ದರೆ ಏನು ಇಲ್ಲದಿದ್ದರೆ ಏನು ಎಂದು. ಕೈ ಹಿಡಿದವಳಿಗೆ ಮಂಜಟ್ಟಿ ತೂಕದಷ್ಟೂ ಚಿನ್ನ, ಒಡವೆ ಮಾಡಿಸಿ ಸಾಕುವಷ್ಟು ಗತಿ ಇಲ್ಲದಿದ್ದರೂ ನನ್ನಪ್ಪ ಕೊಟ್ಟ ತಟ್ಟ್ ಪೊಟ್ಟನ್ನೂ ಇವರು ಕದ್ದುಕೊಂಡು ಹೋಗಬೇಕಾಗಿತ್ತಾ ಹೇಳಿ ನೋಡುವಾ? ತಾನೇ ದುಡಿಯಲಿ, ದುಡಿದ ಕಾಸಲ್ಲಿ ಶರಾಬು ನುಂಗಲು ಇವರಿಗೇನು ಮಂಡೆ ಕುತ್ತವಾ? ಇಸ್ಸಪ್ಪಾ... ಥೂ... ಥೂ... ಈ ಗಂಡಸಿಗೆ ಒಂದಿಷ್ಟು ನಾಚಿಕೆಯೂ ಆಗಲಿಲ್ಲವಾ? ಮದುವೆಗೆ ಮೊದಲು ನಾನು ಹೇಗೆ ಇದ್ದೆ ಗೊತ್ತುಂಟಾ? ದೊಡ್ಡ ದೊರೆ ಸಾನಿಯಂತೆ ಇದ್ದೆ. ಈಗ ನೋಡಿ ನನ್ನ ಹಣೆ ಬರಹ?'' ಜಗಲಿಯ ಮೆಟ್ಟಲಲ್ಲಿ ನಿಂತುಕೊಂಡು ಊರಿಗೆಲ್ಲಾ ಬಾಯಿ ಅರಳಿಸಿ ತನ್ನ ಹೊಟ್ಟೆಯಲ್ಲಿ ಏಳುತ್ತಿದ್ದ ಬೆಂಕಿಯನ್ನು ಕಕ್ಕುವಳು.

ಅವಳ ನೋವು ಬೇಸರವನ್ನು ತಿಳಿಯದವರು. ''ಓಪ್ಪಾ, ಇವಳು ದೊಡ್ಡ ಗಟವಾನಿ ಗಂಗೆ'' ಎಂದು ಅಡ್ಡ ಹೆಸರು ಇಟ್ಟರು. ಮೊದಲೇ ಕೊಕ್ಕೆ ಬುದ್ಧಿಯವರನ್ನು ನೋಡಿದರಾಗದೆ 'ಕಂಡ ತುಂಡ' ಎಂದು ಹೇಳಿದ ಹಾಗೆ ಅವರ ಮಾತನ್ನೂ ತುಂಡು ಮಾಡುತ್ತಿದ್ದಳು. ಹಾಗಾಗಿ ಅವಳನ್ನು 'ಹಿಡಿಂಬೆ' ಎಂದೂ ಕೆಲವರು ಹೇಳುತ್ತಿದ್ದರು. ಆದರೆ ಇದನ್ನೆಲ್ಲಾ ತಿಳಿದಿದ್ದರೂ ಗಂಗ 'ಅಂಡೆಯ

ಬಾಯಿಯನ್ನಾದರೂ ಕಟ್ಟಬಹುದು ದೊಂಡೆಯ ಬಾಯಿಯನ್ನು ಕಟ್ಟಲಿಕ್ಕಾಗುತ್ತಾ ತನ್ನಿಂದ. ಏನೊ ನೋವು ಬೇಸರ ತಿಳಿಯದವರು ನನ್ನ ಹಿಂದೆ ಹೀಗೆ ಹೇಳಿದರಂತೂ ನಾನಾದರೂ ಯಾಕೆ ತಲೆ ಬಿಸಿ ಮಾಡಿಕೊಳ್ಳಬೇಕು'' ಎಂದುಕೊಳ್ಳುತ್ತಿದ್ದಳು.

ಜವ್ವನೆ ಹೆಣ್ಣುಮಗಳು ಯಾಕಾಗಿ ಒಬ್ಬಳೆ ಇರಬೇಕಲ್ಲಿ ಎಂದು ನೆನೆದ ಅವಳ ತಂದೆ, ತಾಯಿ ಮಗಳನ್ನು ಮನೆಗೆ ಕರೆಸಿದರು. ಒಂದು ವರ್ಷ ಪ್ರಾಯದ ರಂಗನೊಟ್ಟಿಗೆ ಬಂದ ಗಂಗ ತವರುಮನೆಯ ತಂಪು ನೆಲದಲ್ಲಿ ತನ್ನ ಹೊಟ್ಟೆಯಲ್ಲಿ ಅರಳುತ್ತಿದ್ದ ಬೆಂಕಿಯನ್ನು ಆರಿಸಿಕೊಂಡಳು. ಮತ್ತೆ ಒಂದು ನಾಲ್ಕೈದು ವರ್ಷ ಕಳೆಯುವುದರೊಳಗೆ ಹೆತ್ತವರೂ ಕಣ್ಣು ಮುಚ್ಚಿ ಹೋದರು.

ಜಕ್ಕಜವ್ವನ ಮಗ ರಂಗ ಈಗ ಗಂಗಕ್ಕನ ತಲೆಯ ಮೇಲೆ ಬೆಳೆದಿದ್ದ. ಆದರೂ ಅವಳ ದುಡಿಮೆ ಏನೂ ಕಡಿಮೆಯಾಗಲಿಲ್ಲ. ಕಾಸರಗೋಡಿಗೆ ಹೊರಟ ರಂಗ ತನ್ನ ಬಟ್ಟೆ ಬರೆ ಇದ್ದ ಕೈಚೀಲ ತೆಗೆದುಕೊಳ್ಳಲೆಂದು ಕೋಣೆಯೊಳಗೆ ಹೋದ. ಮೆಲ್ಲ ಅವನ ಬದಿಗೆ ಬಂದ ರತ್ನ -

''ಹೌದಾ, ಮುಂದಕ್ಕೆ ನೀವು ಊರಿಗೆ ಬರುವಾಗ ನನಗೊಂದು ವಾಚು ತನ್ನಿ ಆಯಿತಾ?'' ಎಂದು ಅತ್ತೆಗೆ ಕೇಳದ ಹಾಗೆ ಅವನ ಕಿವಿಯಲ್ಲಿ ಪುಸ್ ಪುಸ್ ಹೇಳಿದಳು.

''ಆಯಿತೇ, ನಾನು ವಾಚು ತರುವುದು ದೊಡ್ಡ ಸಂಗತಿಯಾ?'' ಎಂದು ಬಹಳ ಗತ್ತಿನಲ್ಲಿ ಹೇಳಿದ ರಂಗ ನಡುಮನೆಗೆ ಬಂದ.

''ಅಪ್ಪಾ... ರಂಗಣ್ಣ... ಕೈತುಂಬ ಸಂಬಳ ಬಂತು ಎಂದು ಅಡ್ಡಾದಿಡ್ಡಿ ಖರ್ಚು ಮಾಡಿಬಿಡಬೇಡಪ್ಪಾ ಏನು? ನಿನಗೊಂದು ಕೆಲಸ ಸಿಗಲಿ ಎಂದು ಬಬ್ಬು ಕೊಟ್ಟಿಗೆಯ ಸುಬ್ಬಮ್ಮನಿಗೆ, ಕೊರಗ ತನಿಯನಿಗೆ ಹೇಳಿಕೊಂಡ ಹರಕೆಯೆ ಬೇಕಾದಷ್ಟಿದೆ ಮಗಾ... ಆದುದರಿಂದ ನಿನ್ನ ಖರ್ಚಿಗಾಗುವಷ್ಟು ಕಾಸನ್ನು ಕೈಯಲ್ಲಿಟ್ಟುಕೊಂಡು ಉಳಿದದ್ದನ್ನು ನನಗೆ ಕಳಿಸಿಕೊಡಪ್ಪಾ'' ಅಮ್ಮ ಹೇಳಿದಾಗ ಅದಕ್ಕೂ ಸೈ ಎಂದ ರಂಗ. ನಿಂತಲ್ಲೆ ಬಗ್ಗಿ ಅವಳ ಕಾಲು ಮುಟ್ಟಿ ಬರ್ತೇನೆ ಎಂದು ಮಡದಿಗೆ ಕಣ್ಣೊತ್ತಿ ಕೈಯಲ್ಲಿದ್ದ ಚೀಲದೊಂದಿಗೆ ಮನೆಯಿಂದ ಹೊರಟ ರಂಗ ಹೊಸ ಉತ್ಸಾಹದಲ್ಲಿ.

ಎಲ್ಲೊ ದೂರದ ದುಬಾಯಿಗೆ ಹೊರಟವನನ್ನು ಬೀಳ್ಕೊಡಲು ಬಂದ ಹಾಗೆ ರೈಲು ನಿಲ್ದಾಣಕ್ಕೆ ಅವನ ಇಸ್ಪೀಟ್ ಗೆಳೆಯರು ಬಂದು ಸೇರಿದ್ದರು. ಆದರೆ ಅವರೆಲ್ಲರ ಮುಖವೂ ಕುಂದಿ ಹೋಗಿತ್ತು. ಶಿವಣ್ಣನ ಕೈಯಲ್ಲಿದ್ದ ವಾಚು ನೋಡಿದ ಕೂಡಲೆ ರತ್ನ ಹೇಳಿದ ಮಾತು ನೆನಪಾಯಿತು ರಂಗನಿಗೆ. ಅವನು ಬೋರು ಬೋರಾಗಿದ್ದ ತನ್ನ ಕೈಯನ್ನು ನೋಡಿಕೊಂಡ. ನಾಟಕ ಕಂಪನಿ ಸೇರಲು ಹೊರಟ ತನ್ನ ಕೈಯಲ್ಲೊಂದು ವಾಚು ಕೂಡಾ ಇಲ್ಲದೆ ಇರುವುದು ದೊಡ್ಡ ಸಂಗತಿ ಎಂದಾಯಿತು ಅವನ ಮನಸಿಗೆ.

''ಒಂದು ನಾಲ್ಕು ದಿನದ ಮಟ್ಟಿಗೆ ನಿನ್ನ ವಾಚು ಕೊಡ್ತಿಯಾ ಶಿವಣ್ಣ?''

''ಅರೆ ಇದೊಳ್ಳೆ ಗಮ್ಮತ್ತಾಯಿತಲ್ಲಾ ನಿನ್ನದು? ಕೆಳಗೆ ಬಿದ್ದು ಪೆಟ್ಟಾಗಿರುವ ಈ ಪೊಟ್ಟು ವಾಚು ಕಟ್ಟಿಕೊಂಡ ನಿನ್ನಲ್ಲಿ ''ಗಂಟೆಷ್ಟಾಯಿತು?'' ಎಂದು ಯಾರಾದರೂ ಕೇಳಿದರೂ ಎಂದಾದರೆ ನೀನು ಎಷ್ಟು ಎಂದು ಹೇಳುತ್ತಿ? ಇದನ್ನು ರಿಪೇರಿಗೆ ಕೊಡಲೆಂದೆ ನಾನು ಕೈಗೆ ಕಟ್ಟಿಕೊಂಡು ಬಂದದ್ದು ಗೊತ್ತುಂಟಾ?'' ಸಂದರ್ಭ ಸಾಧಕ ಶಿವಣ್ಣ ಹೇಳಿದಾಗ ಗಂಟೆ ನೋಡಲು ತಿಳಿಯದ ರಂಗ ಅವನ ಮಾತನ್ನು ಸತ್ಯ ನಂಬಿದ. ರೈಲು ಹೊರಡುವ ಗಂಟೆ ಬಾರಿಸಿದಾಗ ಒಬ್ಬೊಬ್ಬರಾಗಿಯೆ ಬಂದು ರಂಗನನ್ನು ತಬ್ಬಿಕೊಂಡರು. ಎಲ್ಲರೂ ಕೈ ಬೀಸುತ್ತಿದ್ದಂತೆಯೇ ಮೆಲ್ಲ ಮೆಲ್ಲ ಹೊರಳಿಕೊಂಡು

ಹೊರಟ ರೈಲು ಮತ್ತೆ ಮತ್ತೆ ಓಡುತ್ತಾ ಹೋದ ಹಾಗೆ ಕಣ್ಣಿಂದ ದೂರವಾಯಿತು.

ಕಾಸರಗೋಡು ಪೇಟೆಯ ಮಧ್ಯದಲ್ಲಿಯೆ ನಾಟಕದ ಚಪ್ಪರ ಏರಿಸಿದ್ದ ನಾರ್ಣಪ್ಪಯ್ಯ. ಅಂದಿನ ದಿನ ಪೌರಾಣಿಕ ನಾಟಕ 'ಶಾಕುಂತಲಾ' ಆಡಲಿದ್ದೇವೆ ಎಂದು ಊರೆಲ್ಲಾ ಸುದ್ದಿ ಮಾಡಿಸಿದ್ದ. ರಾತ್ರಿ ಒಂಬತ್ತೂವರೆಗೆ ಪ್ರಾರಂಭವಾಗಬೇಕಿದ್ದ ನಾಟಕದ ಪರದೆ, ಗಂಟೆ ಹತ್ತುವರೆಯಾದರೂ ಮೇಲೇರದಿದ್ದಾಗ ಟಿಕೇಟು ತೆಗೆದು ಕುಳಿತವರಿಗೆ ಕೋಪ ಬಂತು. ಅವರ ಗುಸುಗುಸು ಮಾತುಗಳೆ ಈಗ ಗಲಾಟೆಗೆ ದಾರಿಯಾಗುತ್ತೆ ಎಂದು ತಿಳಿದಿದ್ದ ನಾರ್ಣಪ್ಪಯ್ಯ ರಂಗಸ್ಥಳದ ಮೇಲೇರಿ ಬಂದ.

''ಕಲಾಭಿಮಾನಿಗಳು ಎಲ್ಲರೂ ನಮ್ಮನ್ನು ಕ್ಷಮಿಸಬೇಕು. ಯಾಕೆಂದರೆ ಅವರವರ ಊರಿಗೆ ಹೋಗಿದ್ದ ನಾಟಕದ ಕಲಾವಿದರು ಈಗ ಬಂದವರೆ ಮೇಕಪ್ ಮಾಡುತ್ತಿದ್ದಾರೆ. ಆದುದರಿಂದ ನಾವು ಹೇಳಿದ ಸಮಯ ತಪ್ಪಿ ಹೋದರೂ ದಯವಿಟ್ಟು ನೀವೆಲ್ಲರೂ ದೊಡ್ಡ ಮನಸ್ಸು ಮಾಡಿ ಶಾಂತಚಿತ್ತರಾಗಿ ಕುಳಿತು ಇನ್ನೊಂದು ಗಳಿಗೆಯಲ್ಲಿ ಪ್ರಾರಂಭ ಆಗಲಿರುವ ನಾಟಕವನ್ನು ನೋಡಿ ಸಂತೋಷ ಪಡಬೇಕೂಂತ ನಿಮ್ಮೆಲ್ಲರಲ್ಲೂ ಇನ್ನೊಮ್ಮೆ ಬೇಡಿಕೊಳ್ಳುತ್ತೇನೆ'' ಎಂದು ಸಭಿಕರ ಮಂಡೆ ಬಿಸಿಯಾಗದ ಹಾಗೆ ಕೈ ಮುಗಿದು ಎರಡು ಮಾತು ಹೇಳಿದ. ''ದೇವರೇ, ಸಂದರ್ಭಕ್ಕೆ ತಕ್ಕಂತೆ ಕ್ಷಮೆ ಬೇಡುವ ನಟನೆ ಮಾಡಿ ಈ ಗಡಗಂಜಿಗಳಿಂದ ಸದ್ಯಕ್ಕೆ ಒಮ್ಮೆ ಜಯಿಸಿದೆನಲ್ಲಾ'' ಎಂದು ತನ್ನಷ್ಟಕ್ಕೆ ನೆನಸಿಕೊಂಡ. ಗೌಜಿಗದ್ದಲ ನಿಂತರೂ ಸಭಿಕರ ನಡುವಿನ ಗುಸುಗುಸು ಇನ್ನೂ ಮುಂದುವರಿದಿತ್ತು.

ಗಂಡನ ಮನೆಗೆ ಹೊರಟಿದ್ದ ಶಕುಂತಲೆಯನ್ನು ಆಶ್ರಮದವರು ಬಿಟ್ಟು ಕೊಡುವ ಸನ್ನಿವೇಶ. ಇದರಲ್ಲಿ ಸಾಕುತಾಯಿಯ ಶೋಕಪೂರಿತ ಮೂಕ ಅಭಿನಯದ ಪಾತ್ರವನ್ನು ಸಂದರ್ಭಕ್ಕೆ ಸರಿಯಾಗಿ ರಂಗನಿಗೆ ಕೊಟ್ಟಿದ್ದ ನಾರ್ಣಪ್ಪಯ್ಯ. ಕಣ್ವ ಋಷಿಯ ವೇಷ ಹಾಕಲಿಕ್ಕಿದ್ದ ರಂಗ ಕಾವಿ ಬಣ್ಣದ ಬಟ್ಟೆಯುಟ್ಟು, ನೀಳವಾದ ಬಿಳಿ ಗಡ್ಡವನ್ನು ಗಲ್ಲದಿಂದ ಕಿವಿಯವರೆಗೆ ಸಿಕ್ಕಿಸಿ ಮುಖಕ್ಕೆ ಬಣ್ಣ ಹಚ್ಚಲು ಕಾಯುತ್ತಿದ್ದ.

''ನಿನ್ನ ಬಿಳಿ ಮುಖಕ್ಕೆ ಮೇಕಪ್ ಗೀಪಕ್‌ನ ಅಗತ್ಯ ಏನೂ ಇಲ್ಲಪ್ಪಾ ಹಣೆಗೆ ಮತ್ತು ಕೈಯ ಮೇಲೆ ಬಿಳಿ ನಾಮ ಎಳೆದರೆ ಸಾಕು.'' ಸಾಧ್ಯವಾದಷ್ಟು ಸಾಮಗ್ರಿಗಳನ್ನು ಉಳಿಸಲು ನೋಡುವ ನಾರ್ಣಪ್ಪಯ್ಯ ಹೇಳಿದಾಗ ರಂಗ ನಿರಾಸೆಯಲ್ಲಿ ಬಾಡಿ ಹೋದ. ಬಣ್ಣದ ಬದುಕನ್ನು ಬಯಸಿ ಬಂದವನಾದರೂ ಅವ ತನ್ನ ಆಸೆಯನ್ನು ತೋರಿಸಲಾಗದೆ ಹೋದ. ಯಜಮಾನ ಹೇಳಿದಂತೆ ಅಲ್ಲಿ ಇಲ್ಲಿ ಬಿಳಿ ನಾಮ ಬಳಿದುಕೊಂಡು, ಕೈಯಲ್ಲಿ ದಂಡವನ್ನೂ ರುದ್ರಾಕ್ಷಿ ಮಾಲೆಯನ್ನೂ ಹಿಡಿದುಕೊಂಡು ತನ್ನ ಸರದಿಗೆ ಕಾಯುತ್ತಾ ಪರದೆಯ ಮರೆಯಲ್ಲಿ ತುದಿ ಕಾಲಲ್ಲಿ ನಿಂತುಕೊಂಡ. ಇನ್ನೊಂದು ಬದಿಯಲ್ಲಿ ತಬಲೆಯನ್ನೂ, ಹಾರ್ಮೋನಿಯಮನ್ನೂ ಉದ್ದ ಬಟ್ಟೆಯಲ್ಲಿ ಕಟ್ಟಿ ಹೂಮಾಲೆಯಂತೆ ಅದನ್ನು ಕತ್ತಿಗೆ ಹಾಕಿಕೊಳ್ಳಲು ಮಾವ ನಾರ್ಣಪ್ಪಯ್ಯನೂ ಅಳಿಯ ಮಹಾಬಲನೂ ಸಿದ್ಧವಾಗುತ್ತಿದ್ದರು. ಈ ಹೊಸ ನಮೂನೆಯ ರಿವಾಜು ನೋಡಿದ ರಂಗನಿಗೆ ತನ್ನ ಊರ ಭಜನೆ ಮಂಡಳಿಯವರ ನೆನಪು ಬಂದು ಮನಸ್ಸಲ್ಲೇ ನಗು ಉಕ್ಕಿ ಬಂತು.

'ಗ್ರೀನ್ ರೂಂ' ಎಂದರೆ ಏನೋ ಮೇಕಪ್‌ನ ವಸ್ತುಗಳೇ ತುಂಬಿದ್ದ ಬಹಳ ಚಂದದ ಕೋಣೆಯಾಗಿರಬೇಕು ಎಂದುಕೊಂಡಿದ್ದ ರಂಗ. ಆದರೆ ಇಲ್ಲಿ ನೋಡಿದರೆ ಬಿದಿರು ತಟ್ಟಿಯಲ್ಲಿ ಕಟ್ಟಿದ ದನದ ಕೊಟ್ಟಿಗೆಯಂತೆ ಇದೆಯಲ್ಲಾ ಎಂದು ನೆನೆದೇ ಅವನ ಉತ್ಸಾಹ ಒಮ್ಮೆಲೆ ಇಳಿದು ಹೋಯಿತು. ಬಟ್ಟೆಬರೆ, ಮುಖದ ಬಣ್ಣ ಹಚ್ಚುವುದು ಎಲ್ಲ ಮುಗಿದ ಕೂಡಲೆ ಬಾಕಿ ಸರಕುಗಳಿದ್ದ

ಒಂದೇ ಒಂದು ಪೆಟಾರಿಯ ಒಳಗೆ ಉಳಿದ ಎಲ್ಲವನ್ನೂ ತೂರಿಸಿ ಆಗಲೆ ಅದಕ್ಕೆ ಬೀಗವನ್ನೂ ಹಾಕಿದರು. ಮತ್ತೆ ಅದನ್ನೊಂದು ಮೂಲೆಗೆ ತಳ್ಳಿ ಹಳೆಯ ಚಿಂದಿಯಾಗಿದ್ದ ಪರದೆಯನ್ನು ಹೊದಿಸಿದರು. ಅದರ ಮೇಲೆ ಹಣೆದ ಆರೇಳು ತೆಂಗಿನ ಸೋಗೆಗಳನ್ನು ಮುಚ್ಚಿದರು. ಇದನ್ನೆಲ್ಲಾ ದೊಡ್ಡ ಕಣ್ಣಲ್ಲಿ ನೋಡಿದ ರಂಗನಿಗೆ ಚಳಿಜ್ವರದಲ್ಲಿ ನಡುಗುತ್ತಿದ್ದವನಿಗೆ ಎರಡೆರಡು ಕಂಬಳಿ ಹೊದಿಸಿ ಉಪಚಾರ ಮಾಡಿದ ಹಾಗೆಯೆ ತೋರಿತು. ಈ ಕೆಲಸವೆಲ್ಲಾ ಮುಗಿದ ಮೇಲೆ ಅಂಕದ ಪರದೆ ಮೇಲೇರಿ ನಾಟಕ ಶುರುವಾಗುವ ಲಕ್ಷಣ ಕಂಡಿತು. ಗಂಟೆ ಹೊಡೆದ ಶಬ್ದ ಕಿವಿಗೆ ಬೀಳಬೇಕಾದರೆ ಸಭಿಕರೆಲ್ಲಾ ಚುರುಕಾದರು. ಚಿಕ್ಕ ಮಕ್ಕಳ ಬೊಬ್ಬೆ, ಕಿರುಚಾಟ, ಮುದುಕರ ಕೆಮ್ಮು, ನಿದ್ದೆಯ ತೂರಾಟ, ಹೆಂಗಸರ ಪಟ್ಟಾಂಗ ಎಲ್ಲ ಒಮ್ಮೆಲೆ ನಿಂತು ಹೋಯಿತು.

''ಅಪ್ಪಾ, ಹಾರ್ಮೋನಿಯಂ ಇಲ್ಲಿ ಕೊಡಿ ನೀವು ದುಷ್ಯಂತನ ವೇಷ ಹಾಕಿ ಎಂದು ನುಡಿದ ಮಗನನ್ನು ಅಲುಗಾಡಿಸಿ ಬಾಯಿ ಮುಚ್ಚಿಸಿದ ನಾರ್ಣಪ್ಪಯ್ಯ. ಪರದೆ ಎಳೆಯುವವನೆ ಪದ ಹೇಳಬೇಕಾದುದರಿಂದ ತಟ್ಟಿಯ ಮರೆಯಲ್ಲಿದ್ದ ನಾರ್ಣಪ್ಪಯ್ಯ ಕುಳಿತಲ್ಲಿಂದಲೆ ಒಂದು ಗಣಪತಿ ಸ್ತುತಿಯನ್ನು ರಾಗದಲ್ಲಿ ಹಾಡಿಬಿಟ್ಟ. ಆಮೇಲೆ ನಾಟಕ ಪ್ರಾರಂಭವಾಯಿತು. ಹಿಂದೆ ಸುಮಾರು ಎಂಟು ಹತ್ತು ಜನ ಆಡುತ್ತಿದ್ದ ಈ ನಾಟಕವನ್ನು ಇಂದು ಬರೆ ಮೂವರು ಮಾತ್ರ ಅಭಿನಯಿಸಬೇಕಾಯಿತು.

ಮೊದಲ ದೃಶ್ಯದಲ್ಲಿ ಶಕುಂತಲೆ ತನ್ನ ಸಖಿಯ ಜೊತೆ ಉದ್ಯಾನದ ಉದ್ದಗಲ ಸಂತೋಷದಲ್ಲಿ ತಿರುಗುತ್ತಿರುತ್ತಾಳೆ. ಕಣ್ಣೆದುರಲ್ಲಿದ್ದ ಪ್ರಕೃತಿ ಸೌಂದರ್ಯವನ್ನು ನೋಡಿ ಮರುಳಾಗಿ ಅದನ್ನು ವರ್ಣನೆ ಮಾಡುತ್ತಾಳೆ. ಅಷ್ಟಾಗುವಾಗ ಒಮ್ಮೆಲೆ ಅವಳಿಗೆ ತನ್ನ ಒಡನಾಡಿಗಳಾದ ಮೊಲ, ಜಿಂಕೆ, ನವಿಲುಗಳ ನೆನಪು ಬರುತ್ತದೆ. ''ಅವನ್ನು ಕಣ್ಣಾರೆ ನೋಡದಿದ್ದರೆ ನನಗೆ ಈ ದಿನ ನಿದ್ದೆಯೂ ಬಾರದಪ್ಪಾ'' ಎಂದು ಮುಖ ಚಿಕ್ಕದು ಮಾಡಿ ಹೇಳುತ್ತಾಳೆ. ಅವಳ ಬೇಸರದ ಮಾತು ಕೇಳಿದ ಸಖಿ ಅವಳಿಗೆ ಸಮಾಧಾನ ಹೇಳುವ ಧನಿಯಲ್ಲಿ ''ನಿನ್ನ ಪ್ರೀತಿಗೆ ಪಾತ್ರರಾಗಿರುವ ಮೃಗ ಪಕ್ಷಿಗಳು ಎಲ್ಲಿ ಅಡಗಿದ್ದರೂ ನಾನವನ್ನು ಹುಡುಕಿ ಹಿಡಿದು ನಿನ್ನೆದುರು ತಂದೇ ನಿಲ್ಲಿಸುವೆ. ಆದರೆ ನೀನು ಮಾತ್ರ ಏನೂ ಚಿಂತೆ ಮಾಡಬೇಡ ದೇವಿ'' ಎಂದು ಹೇಳಿದವಳೆ ಅಲ್ಲಿಂದ ಹೊರಡುವಳು. ಅದನ್ನು ಕೇಳಿದ ಶಕುಂತಲೆಯ ಮುಖದಲ್ಲಿ ಸಂತೋಷ ಮೂಡಿತು. ತನ್ನ ಪ್ರೀತಿಯ ಸಂಗಾತಿಗಳ ದಾರಿ ನೋಡುತ್ತಾ ಹೊತ್ತು ಕಳೆದಳು. ಒಬ್ಬಳೆ ಇರುವ ಬೇಸರವನ್ನು ಕಳೆಯಲು ಬೇಕಾಗಿ ಕುಣಿಯುತ್ತಾ ಹಾಡುತ್ತಾ ಇರುವಳು. ಆಗಲೇ ದುಷ್ಯಂತನ ಪ್ರವೇಶ ಆಗಬೇಕಿತ್ತು. ಆದರೆ ಏನು? ರಂಗನೂ ಸೇರಿ ಈಗ ಮೂವರೊಳಗೆ ಪಾತ್ರವನ್ನು ಹಂಚಿಕೊಂಡಿದ್ದರು. ಆದುದರಿಂದ ಸಖಿಯ ವೇಷ ಹಾಕಿದವನೇ ಮತ್ತೆ ದುಷ್ಯಂತ ಆಗಬೇಕಿತ್ತು. ಹಾಗಾಗಿ ತಾನು ಕಚ್ಚೆ ಹಾಕಿ ಸುತ್ತಿದ್ದ ಸೀರೆಯ ಮೇಲೊಂದು ದೊಗಳೆ ಅಂಗಿ ಹಾಕಿಕೊಂಡ. ತಲೆಗೆ ಬೇಗಡೆಯ ಕಿರೀಟ ಇಟ್ಟು ಮೂಗಿಗೆ ಮೀಸೆ ಸಿಕ್ಕಿಸಿ ವೇದಿಕೆಯ ಇನ್ನೊಂದು ಬದಿಯಲ್ಲಿ ಬರುವಾಗ ಸಭಿಕರ ಮಧ್ಯೆ ನಗುವಿನ ಅಲೆ ಎದ್ದಿತು.

ಸಂದರ್ಭಕ್ಕೆ ತಕ್ಕಂತಹ ಮಾತು ಬಾಯಿ ಪಾಠ ಇಲ್ಲದಿದ್ದರೂ ಅರ್ಧಂಬರ್ದ ಸಂಭಾಷಣೆಯ ಜೊತೆಗೆ ಶಕುಂತಲೆ ಮತ್ತು ದುಷ್ಯಂತನ ಸಮಾಗಮ ಮತ್ತು ಸರಸ ಸಲ್ಲಾಪಗಳೂ ಮುಗಿದು ಹೋದುವು. ಈಗ ಇಬ್ಬರೂ ಒಟ್ಟಿಗೆ ಒಂದು ಪದ್ಯ ಹೇಳಿದ ಮೇಲೆ ಅವಳ ಬೆರಳಿಗೆ ಉಂಗುರ ತೊಡಿಸಿ ದುಷ್ಯಂತ ಅಲ್ಲಿಂದ ಹೋಗುತ್ತಾನೆ. ಈಗ ಮತ್ತೆ ಸಖಿಯ ಪ್ರವೇಶ ಆಗಬೇಕಿತ್ತು. ಇಬ್ಬರ ಪಾತ್ರವನ್ನೂ

ಒಬ್ಬನೇ ಮಾಡುತ್ತಿರುವುದರಿಂದ ಒಳಗೆ ಬಂದ ಕೂಡಲೇ ತನ್ನ ಮೈಮೇಲಿದ್ದ ದೊಗಳೆ ಅಂಗಿ, ಕಿರೀಟಗಳನ್ನು ತೆಗೆದರೂ ಗಡಿಬಿಡಿಯಲ್ಲಿ ಸಿಕ್ಕಿಸಿದ ಮೀಸೆಯನ್ನು ತೆಗೆಯಲು ಮರೆತೇ ಬಿಟ್ಟ. ಮೊದಲೇ ಒಂದಿಷ್ಟೂ ಅರ್ಥವಾಗದಂತಹ ಅರ್ಥಂಬರ್ಧ ಸಂಭಾಷಣೆ ಅದರ ಜೊತೆಗೆ ಇಂತಹ ನೋಡಲಾಗದಂತಹ ಅವರ ಧಿರಿಸುಗಳು. ಇಷ್ಟಾಗುವಾಗ ಸಭಿಕರಿಗೆ ತಾನಾಗಿಯೆ ನಾರ್ಣಪ್ಪಯ್ಯನ ಕಣ್ಣುಮುಚ್ಚಾಲೆಯಂತಹ ಆಟ ಹುಚ್ಚಾಟದ ಗುಟ್ಟು ರಟ್ಟಾಗಿ ಹೋಯಿತು.

ಬೆಂಚಿ, ಕುರ್ಚಿಗೆ ದಡಬಡ ಗುದ್ದುವ ಶಬ್ದ ಕಿವಿಗೆ ಬಿದ್ದದ್ದೆ ತಡ ನಾರ್ಣಪ್ಪಯ್ಯ ದಿಗಿಲಾದ. ಅವನಿಗೆ ಇದು ಮೊದಲ ಅನುಭವವೇನೂ ಅಲ್ಲ. ಹಾಗಾಗಿ ಹಾರ್ಮೋನಿಯಂ, ತಬಲೆಯ ಮೂಟೆಯೊಟ್ಟಿಗೆ ಒಂದೇ ಉಸಿರಿಗೆ ಓಡಿ ಹೋದರು ಈ ಮಾವ, ಅಳಿಯ. ರಂಗ ಮಾತ್ರ ತನ್ನದೆ ಆದ ಲೋಕದಲ್ಲಿ ತೇಲುತ್ತಿದ್ದ. ನಾಟಕದಲ್ಲಿ ಪಾರ್ಟ್ ಮಾಡಬೇಕು ಎಂದು ಒಂದೇ ಗುಂಗಿನಲ್ಲಿದ್ದ ಅವನಿಗೆ ಬೇರೆ ಯಾವುದರ ಪರಿವೆಯೂ ಇಲ್ಲದಂತಿದ್ದ. ಆದರೂ ಅವರಿಬ್ಬರೂ ಯಾಕೆ ಒಟ್ಟೊಟ್ಟಿಗೆ ಓಡಿ ಹೋದರು? ಎಂಬುದು ರಂಗನಿಗೆ ತಿಳಿಯದೆ ಹೋಯಿತು. ಈ ಕಡೆಯಿಂದ ಆ ಕಡೆಗೆ ತಿರುಗಬೇಕಾದರೆ ದುಷ್ಯಂತ ಮತ್ತು ಶಕುಂತಲೆಯರೂ ಓಡುತ್ತಿದ್ದಾರೆ.

''ಎಲಾ ಕರ್ಮವೇ, ಇದು ಎಂತ ಕಥೆ? ಎಂದು ಆಶ್ಚರ್ಯದಿಂದ ಪರದೆಯ ಹಿಂಬದಿಯಲ್ಲಿದ್ದವ ತನ್ನಷ್ಟಕೆ ತಾನು ಮುಂದೆ ಬಂದು ನಿಂತ. ಆ ಕ್ಷಣದಲ್ಲೇ ಅವನ ಎದೆ, ತಲೆ, ಮುಖದ ಮೇಲೆಲ್ಲಾ ಬಂದು ಹೊಡೆದುವು ಸಭಿಕರು ಎಸೆಯುತ್ತಿದ್ದ ಕಲ್ಲುಗಳು.

'' ಇಂತಹ ಮೋಸದ ನಾಟಕ ನಮಗೆ ಬೇಡ. ನಮ್ಮ ದುಡ್ಡು ನಮಗೆ ಹಿಂದೆ ಕೊಡಿ'' ಎಂದು ಸಿಕ್ಕಿದ್ದಕ್ಕೆಲ್ಲಾ ಗುದ್ದುತ್ತಾ, ಬಡಿಯುತ್ತಾ ಸ್ಟೇಜಿನ ಮೇಲೇರಿ ಬಂತು ಅವರ ಸೈನ್ಯ. ಭೂತ ಬಡಿದವನಂತೆ ಬೆಪ್ಪಾಗಿದ್ದ ರಂಗನಿಗೆ ಪರಿಸ್ಥಿತಿ ಅರ್ಥ ಆಗಲು ಈಗ ತಡವಾಗಲಿಲ್ಲ.

''ಓ ದೇವರೇ, ಇವರ ಕೈಯಿಂದ ತಪ್ಪಿಸಿಕೊಂಡು ಎಲ್ಲಾದರೂ ಓಡಿ ಹೋಗುವಪ್ಪಾ...'' ಎಂದುಕೊಂಡ. ಓಡಲು ಎಂದು ಆಚೆ ಈಚೆ ದಾರಿ ಹುಡುಕುತ್ತಿದ್ದ ಅವನ ಎದೆಗೆ ಮತ್ತೂ ಎರಡು ಕಲ್ಲು ಬಂದು ಬಿತ್ತು. ಈಗ ಹಿಂದೆ ಮುಂದೆ ನೋಡದೆ ರಂಗ ಉಸಿರು ಬಿಗಿ ಹಿಡಿದು ಓಡಿದ.

''ಅಂತೂ ಅಂಕದ ಪರದೆ ಬೀಳುವ ಮೊದಲೇ ನಾಟಕ ಅಂತ್ಯವಾಯಿತು'' ಎನ್ನುವ ಗಾದೆಯಂತೆಯೆ ಆಯಿತು ಈ ಕಥೆ. ಆದರೆ ರಂಗ ಸ್ಥಳದಲ್ಲಿ ತಾನು ಮೆರೆಯಬೇಕು ಎಂಬ ರಂಗನ ಆಸೆ ಮಾತ್ರ ಹಾಗೆಯೇ ಉಳಿದು ಹೋಯಿತು. ಆದರೂ ಮೊದಲೆ ಬೇಕು ಬೇಕಾದ ವ್ಯವಸ್ಥೆ ಮಾಡಿಕೊಳ್ಳದ ನಾರ್ಣಪ್ಪಯ್ಯನನ್ನು ನೆನೆದು ಮನಸ್ಸಲ್ಲೆ ಮರುಗಿದ. ''ಹೀಗೆಲ್ಲಾ ನಡೆಯಲಿಕ್ಕಿದೆ ಎಂದು ನನಗೂ ಒಂದು ಮಾತು ಹೇಳಬಾರದಿತ್ತಾ ಆ ಪಟ್ಟಿಂಗನಿಗೆ? ಈಗ ಈ ನಾಯಿ, ನಸ್ರಾನಿ ಕೈಯಿಂದ ಅವರೆಲ್ಲರ ಪೆಟ್ಟನ್ನೂ ನಾನೊಬ್ಬನೇ ತಿನ್ನಬೇಕಾಯಿತಲ್ಲಾ? ನನ್ನ ಮಗ ಇನ್ನೊಮ್ಮೆ ಕ್ಯಾಂಪ್ ಹೊತ್ತುಕೊಂಡು ಬರಲಿ ಊರಿಗೆ, ಮಾಡುತ್ತೇನೆ ಅವನಿಗೆ ಬಗೆ'' ಓಡುತ್ತಿದ್ದ ರಂಗ ನಾರ್ಣಪ್ಪಯ್ಯನ ಮೇಲಿನ ಕೋಪದಲ್ಲಿ ಹಲ್ಲುಕಿರಿದ. ಬೈಯುತ್ತಾ ಓಡುತ್ತಿದ್ದನಾದರೂ ಅವನ ಕಾಲುಗಳು ಕಾಸರಗೋಡು ರೈಲು ನಿಲ್ದಾಣಕ್ಕೆ ತಂದು ಮುಟ್ಟಿಸಿತು. ಆಗಲೇ ಬಂದಿದ್ದ ಗಾಡಿಯೂ ಅಲ್ಲಿ ನಿಂತಿತ್ತು. ಉಸಿರು ಕಟ್ಟಿ ಓಡಿ ಬಂದ ರಂಗ ಎಲ್ಲಿಗೆ, ಏನು ಎಂದು ಕೇಳುವ ಗೋಜಿಗೂ ಹೋಗಲಿಲ್ಲ. ನಿಂತ ರೈಲಿಗೆ ಹತ್ತಿ ಜಾಗ ಸಿಕ್ಕಿದಲ್ಲಿ ಕುಳಿತ. ಉಸಿರು ಎಳೆಯುತ್ತಿದ್ದ ಆತ ತನ್ನ ಪಕ್ಕದಲ್ಲಿ ಯಾರೆಲ್ಲಾ ಇದ್ದಾರೆ ಎಂದು ನೋಡಲೂ ಹಿಂಜರಿದ. ದಾರೆಯಂತೆ ಇಳಿಯುತ್ತಿದ್ದ ಬೆವರು ಒರಸಲು ಎಂದು ತನ್ನ ಟವಲು ಹುಡುಕಿದ.

ಜೀವದಾಸೆಗೆ ಹೆದರಿ ತನ್ನ ಅಂಗಿ ಹೊದಿಕೆಯನ್ನೂ ಅಲ್ಲಿ ಬಿಟ್ಟು ಬಂದದ್ದು ನೆನಪಾಯಿತು. ಒಮ್ಮೆಲೆ ರಂಗನ ಕೆನ್ನೆಗೆ ರಪ್ಪಂತ ಯಾರೋ ಹೊಡೆದಂತಾಯಿತು. ಕೊನೆಗೆ, ''ಹೋದರೆ ಅಷ್ಟೇ ಹೋಯಿತು. ತನ್ನ ಜೀವವಾದರೂ ಉಳಿಯಿತಲ್ಲಾ? ಅಬ್ಬಬ್ಬಾ... ಆ ಶಿವಣ್ಣ ವಾಚು ಕೊಡದಿದ್ದುದೇ ಒಳ್ಳೆಯದಾಯಿತಪ್ಪಾ'' ಎಂದು ತನಗೆ ತಾನೇ ಸಮಾಧಾನ ಹೇಳಿಕೊಂಡು ಉಟ್ಟ ಬಟ್ಟೆಯಲ್ಲಿಯೇ ಮುಖ ಒರೆಸಿಕೊಂಡ.

ರೈಲು ಚಲಿಸುವ ಹೊತ್ತಿಗೆ ಬೀಸುತ್ತಿದ್ದ ಗಾಳಿ ಹೆಪ್ಪುಗಟ್ಟಿದ ಅವನ ಮನಸಿಗೆ ಸ್ವಲ್ಪ ತಂಪು ನೀಡಿತು. ಕರುಳಲ್ಲಿ ಹಿಡಿದ ಭಯ ನಿಧಾನವಾಗಿ ಕಡಿಮೆಯಾಗುತ್ತಿದ್ದಂತೆಯೇ ತಾನೀಗ ಎಲ್ಲಿದ್ದೇನೆ. ಎಲ್ಲಿಗೆ ಹೋಗುತ್ತಿದ್ದೇನೆ ಎಂಬ ಜ್ಞಾನ ಬಂತು. ರೈಲಿನ ಕಿಟಕಿಗೆ ಮುಖವಿಟ್ಟ ರಂಗ ಆ ಕತ್ತಲೆಯಲ್ಲೂ ಗಾಡಿ ಹೋಗುತ್ತಿದ್ದ ದಿಕ್ಕಿನ ಗುರುತು ಹಿಡಿದ. ಒಂದರ ಮೇಲೊಂದು ಸಮಸ್ಯೆ ಎದುರಾಗುವುದು ನೋಡುವಾಗ ತಲೆಗೆ ಕಲ್ಲು ಹೊತ್ತು ಹಾಕಿದಂತಾಯಿತು.

ಇನ್ನು ಸ್ವಲ್ಪ ಹೊತ್ತಿನಲ್ಲಿಯೇ ಮಂಗಳೂರು ತಲುಪಲಿದ್ದ ಈ ಗಾಡಿಯಲ್ಲಿ ಟಿಕೇಟು ಇಲ್ಲದೆ ಬಂದ ತಪ್ಪಿಗೆ ನನ್ನನ್ನು ಸುಮ್ಮನೆ ಬಿಡುತ್ತಾರಾ? ನಾಳೆ ಬೆಳಗಾದ ಕೂಡಲೆ ಜೈಲಿನ ಕಂಬಿ ಎಣಿಸುವಂತಾದರೆ ಏನು ಗತಿ? ಅದಲ್ಲದೆ ನನ್ನ ಜೊತೆ ಕುಳಿತವರ ಸಂಶಯದ ದೃಷ್ಟಿಯೂ ನನ್ನ ಮೇಲೆ ಇದೆ ಎಂದು ಅರಿತುಕೊಂಡ ರಂಗ. ಆದರೆ ಅವನ ಪುಣ್ಯ ಸ್ವಲ್ಪ ಒಳ್ಳೆಯದಿತ್ತೂಂತ ಕಾಣುತ್ತೆ.

ರೈಲಿಗೆ ಸಿಗ್ನಲ್ ಸಿಗದೆ ಹೋದುದರಿಂದ ಉಳ್ಳಾಲ ಸೇತುವೆಯ ಬದಿಯಲ್ಲಿಯೇ ನಿಂತು ಬಿಟ್ಟಿತು. ದಡಬಡಾಂತ ಮೇಲೆದ್ದು ನಿಂತ ರಂಗ ಒಮ್ಮೆಲೆ ರೈಲಿಂದ ಕೆಳಗೆ ದುಮುಕಿ ಬಿಟ್ಟ ''ಅಬ್ಬಾ ದೇವರೇ, ಒಮ್ಮೆಗೆ ಬಚಾವಾದೆ'' ಎಂದು ಮನಸಿನಲ್ಲಿಯೇ ಹೇಳಿಕೊಂಡವ ಮತ್ತೆ ಜಪ್ಪು ಗ್ರಾಮದಿಂದ ಹಾದು ತನ್ನ ಮನೆಯ ದಾರಿ ಹಿಡಿದ.

ಟ್ಯೂಬ್‌ಲೈಟಿನ ಬೆಳಕು ಬೆಳದಿಂಗಳಂತೆ ಕಾಣುತ್ತಿತ್ತು. ಆದರೆ ರಸ್ತೆಯಲ್ಲಿ ತಿರುಗುತ್ತಿದ್ದ ಬೀದಿ ನಾಯಿಗಳು ಎಲ್ಲಿ ತನ್ನನ್ನು ಅಟ್ಟಿಸಿಕೊಂಡು ಬಂದು ಬಿಡುತ್ತೋ ಎಂಬ ಭಯದಲ್ಲಿ ರಂಗನ ಕೈಕಾಲು ನಡುಗಿತು. ''ಅಲ್ಲದೆ ಈ ರಾತೋರಾತ್ರಿಯ ಹೊತ್ತಿನಲ್ಲಿ ಎಲ್ಲಾದರೂ ಸನ್ಯಾಸಿಗಳು ತಿರುಗುತ್ತಿರುತ್ತಾರಾ ಎಂಬ ಅನುಮಾನ ನನ್ನನ್ನು ನೋಡಿದವರಿಗೆ ಬಾರದೆ ಇರಲು ಸಾಧ್ಯವಾ? ಅವರು ಮತ್ತೆ ನನಗೆ ಕೈಗೆ ಸಿಕ್ಕಿದರಲ್ಲಿ ಹೊಡೆದು ಹಾಕಿದರೂ ಇಲ್ಲಿ ಕೇಳುವವರು ಯಾರಿದ್ದಾರೆ? ಈ ನಾಟಕದ ಅಂಗಿ ಬಟ್ಟೆಗಳನ್ನೊಮ್ಮೆ ಕಳಚಿ ಬಿಸಾಡುವ ಎಂದರೆ ಉಡಲು ಬೇರೇನಾದರೂ ಇರಬೇಕಲ್ಲಾ? ಅಯ್ಯೋ ನಾಟಕದ ಹುಚ್ಚಿನಿಂದಾಗಿ ಯಾವ್ಯಾವ ಅವಸ್ಥೆ ಆಯಿತು ನನಗೆ?'' ನೆನೆದಷ್ಟೂ ಕರುಳಿಗೆ ಕತ್ತರಿ ಇಟ್ಟಂತಾಯಿತು ಅವನಿಗೆ.

ಅಂತೂ ಇಂತೂ ಹೇಗೂ ತನ್ನ ಮನೆ ಬಾಗಿಲಿಗೆ ಬಂದು ಬಿದ್ದ ರಂಗ. ಮೆಟ್ಟಿಲು ಹತ್ತಿ ಬಂದ ಅವನಿಗೆ ಬಾಗಿಲಲ್ಲಿ ನೇತಾಡುತ್ತಿದ್ದ ಬೀಗ ತನ್ನನ್ನು ನೋಡಿ ನಕ್ಕಂತಾಯಿತು. ''ಅರೆ! ಎಲ್ಲಿ ಹೋಗಿದ್ದಾರಪ್ಪಾ ಈ ಅತ್ತೆ ಸೊಸೆ ಇಬ್ಬರೂ?'' ಎಂದು ಮನಸ್ಸಲ್ಲೆ ಸವಾಲು ಹಾಕಿಕೊಂಡ ರಂಗನಿಗೆ ದೂರದಲ್ಲಿ ಕೇಳಿಬರುತ್ತಿದ್ದ ಚೆಂಡೆಯ ಬಡಿದಾಟ ಉತ್ತರ ಕೊಟ್ಟಿತು.

''ಥತ್! ಇದೆಂತಹಾ ಜನ್ಮಕೆಟ್ಟ ಗ್ರಹಚಾರವಪ್ಪಾ ನನ್ನದು? ಇಂದು ಮಧ್ಯಾಹ್ನದ ಹೊತ್ತಿಗೆ ಎಷ್ಟೊಂದು ಗೌಜಿಯಲ್ಲಿ ಕಾಸರಗೋಡಿಗೆ ಹೊರಟಿದ್ದೆ ನಾನು? ಸಿಕ್ಕಿ ಸಿಕ್ಕಿದವರಲ್ಲೆಲ್ಲಾ 'ಬರ್ತೇನೆ' ಎಂದು ಊರಿಡಿ ಡಂಗುರ ಸಾರಿದ್ದೇ ಬಂತು. ಛೆ! ಅದೇ ದಿನ ರಾತ್ರಿಯಾಗುವುದರೊಳಗೆ ಹಾಕಿದ

ವೇಷದಲ್ಲೆ ಕಳ್ಳನಂತೆ ಹಿಂದೆ ಬರಬೇಕಾಯಿತಲ್ಲಾ? ನೆರೆಮನೆಯ ಆನಂದನಿಗೆ ಸ್ವಲ್ಪವಾದರೂ ಈ ಸುದ್ದಿ ಸಿಕ್ಕಿತು ಎಂದಾದರೆ ಸಾಕು ಮತ್ತೆ ಲೋಕದಲ್ಲಿರುವ ಮನೆ ಮನೆಗೆ ತಿರುಗಿ ಟಾಂ ಟಾಂ ಎಂದು ಬಡಿಯುತ್ತಾ ಬರುವನು. ಬಂಡಸಾಲೆ ಮನೆಯ ಕೊರಗಣ್ಣನ ಹಟ್ಟಿಯ ಚಾಕರಿಯೊಂದು ಮುಗಿದರೆ ಮತ್ತೆ ಅವನಿಗಿರುವುದೆಂದರೆ ತನ್ನದಲ್ಲದ ವಿಚಾರಗಳಿಗೆ ತಲೆ ಹಾಕುವುದು. 'ನಾರದ' ಎಂದು ಊರವರ ಬಾಯಲ್ಲಿ ಅಡ್ಡ ಹೆಸರು ಸಿಕ್ಕಿದರೂ ಅವನಿಗೆ ಒಂದಿಷ್ಟೂ ಬುದ್ದಿ ಬರಲಿಲ್ಲ''.

ಆನಂದನ ಸಂಗತಿ ಹಾಗಿರಲಿ, ನನ್ನನ್ನು ಹೆತ್ತ ತಾಯಿಗೆ ತಿಳಿದರೂ ನನ್ನ ಕತೆ ಮುಗಿಯಿತೆಂದೇ ಲೆಕ್ಕ. ಗಂಗಕ್ಕನ ನೆನಪಾದ ಕೂಡಲೇ ರಂಗನ ಎದೆಯಲ್ಲಿ ಅವಲಕ್ಕಿ ಕುಟ್ಟಿದಂತಾಯಿತು. ಇನ್ನು ನನ್ನ ವೇಷವನ್ನು ಅವಳು ನೋಡುವುದಕ್ಕೆ ಮೊದಲೇ ಇಲ್ಲಿಂದೊಮ್ಮೆ ಓಡಿ ಬಿಡೋಣ ಎಂದಾಯಿತು. ದೊಡ್ಡ ದೊಡ್ಡ ಹೆಜ್ಜೆ ಇಟ್ಟುಕೊಂಡು ಹಿಂದಿನಿಂದ ಯಾರೋ ಬೆನ್ನು ಹಿಡಿದು ಬಂದಂತಾಗಿ ಮಂಟಪದತ್ತ ಓಟಕಿತ್ತ. ಅಲ್ಲಿ ಯಾವತ್ತಿನಂತೆ ಗೆಳೆಯರು ಇಸ್ಪೀಟ್ ಆಡುತ್ತಿದ್ದಾರಲ್ಲಾ ಎಂಬ ಧೈರ್ಯ.

ಹಲವು ವರ್ಷಗಳ ಹಿಂದಿನ ರಾಜರ ಕಾಲದ ಮಂಟಪ ಅದು. ಅಂದಿನ ಕುದುರೆ ಸವಾರನಿಗೆ ವಿಶ್ರಾಂತಿ ಪಡೆಯಲೆಂದೇ ಆ ಮಂಟಪವನ್ನು ಕಟ್ಟಿದ್ದರು. ಅದರ ಬದಿಯಲ್ಲಿಯೇ ನೀರಿದ್ದ ಒಂದು ಚಿಕ್ಕ ಕೊಳವೂ ಇತ್ತು. ಈಗ ಕೊಳದ ರೂಪವೇನೂ ಉಳಿದಿಲ್ಲದಿದ್ದರೂ ಕಾಲಿನ ಪಾದ ಮುಳುಗುವಷ್ಟು ನೀರು ಇರುತ್ತಿತ್ತು ಆ ಹೊಂಡದಲ್ಲಿ. ಅದರ ಸುತ್ತ ಕಾಟು ಸಸಿಗಳು ಪೊದೆಯಂತೆ ಬೆಳೆದಿದ್ದುವು. ಮಂಟಪದ ಮುಂದೆ ಊರೊಳಗೆ ಹೋಗುವ ಒಂದು ಒಳ ಹಾದಿಯೂ ಇತ್ತು.

ಮಂಟಪದ ಬಳಿ ಯಾರೂ ಕಾಣದ್ದು ನೋಡಿ ರಂಗನ ಉತ್ಸಾಹ ಒಮ್ಮೆಲೆ ಇಳಿದು ಹೋಯಿತು. ಒಳಗೆ ಕಾಲಿಡಲೂ ಹೆದರಿ ಅಲ್ಲೇ ನಿಂತು ಬಿಟ್ಟ. ಕಂಬದ ಕಲ್ಲು ಜಾರಿ ಪಾಳು ಬಿದ್ದಿದ್ದ ಈ ಮಂಟಪದ ಒಳಗೆ ಕತ್ತಲೆ, ಬರ ಬರ ಎಂದು ಅಲ್ಲಾಡುವಂತೆ ಕೇಳುವ ಶಬ್ದ ಅವನಲ್ಲಿದ್ದ ಒಂದಿಷ್ಟು ಧೈರ್ಯವನ್ನೂ ನುಂಗಿ ಹಾಕಿತು. ಗಾಳಿ ಬೀಸುತ್ತಿರುವಾಗ ಅತ್ತಿತ್ತ ಹೊರಳುವ ಉದುರಿದ ಎಲೆಗಳು, ಸಸಿ ಮತ್ತು ಮರದ ನೆರಳು ರಂಗನಲ್ಲಿ ಮತ್ತಷ್ಟು ಭಯ ಹುಟ್ಟಿಸಿತು. ಯಾವತ್ತೂ ನೋಡದಿದ್ದ ಪ್ರೇತ, ಪಿಶಾಚಿಯ ಆಕೃತಿಗಳು ರಂಗನ ಕಣ್ಣೆದುರು ಕುಣಿಯಲು ಪ್ರಾರಂಭಿಸಿತು. ಇದೆಲ್ಲಾ ತಾನು ದಿನಾಲೂ ನೋಡುತ್ತಿರುವ ಜಾಗ ಎಂದೂ ಅವನಿಗೆ ಮರೆತು ಹೋಯಿತು. ಭಯದ ಭರದಲ್ಲಿ ಕೂಗಿಕೊಳ್ಳಲು ಸ್ವರ ಬಾರದೆ ನಿಂತಲ್ಲಿಂದ ಹೆಡೆ ಎತ್ತಲೂ ಸಾಧ್ಯವಾಗದೆ ನಡುಗುತ್ತಾ ಮೆಟ್ಟಲು ಮೇಲೆ ಬುಜಿಕ್ಕಂತ ಕುಳಿತುಬಿಟ್ಟ.

ದೇವರನ್ನು ಕನಸಲ್ಲೂ ನೆನೆಸಿಕೊಂಡು ತಿಳಿಯದ ರಂಗನಿಗೆ ಈ ಅವಸರದ ಹೊತ್ತಲ್ಲಿ ಯಾವ ದೇವರ ಹೆಸರೂ ತಲೆಗೆ ಬಾರದೆ ಹೋಯಿತು. 'ಅಯ್ಯೋ... ಅಪ್ಪಾ...' ಎಂದು ನರಳಿದ ಅವನಿಗೆ ಗಂಗಕ್ಕನ ನೆನಪು ಬಂತು. ಆಟಿ ತಿಂಗಳ ಮಳೆಗಾಲದಲ್ಲಿ ಸಿಡಿಲು ಮಿಂಚಿನ ಗರ್ಜನೆ ಜೋರಾದಾಗ ತನ್ನ ಅಮ್ಮ ''ರಾಮಾ ರಾಮಾ ರಾಮಾ ರಾಮಾ'' ಎಂದು ಕಣ್ಣು ಮುಚ್ಚಿ ಕುಳಿತುಕೊಳ್ಳುತ್ತಿದ್ದುದು ನೆನಪಿಗೆ ಬಂತು. ಆ ಕ್ಷಣವೇ ಅವನು ಕೆನ್ನೆಗೆ ಚುಚ್ಚುತ್ತಿದ್ದ ಗಡ್ಡ ಮೀಸೆಯನ್ನು ಗರ್ವದಲ್ಲಿ ತೆಗೆದು ಆಚೆ ಎಸೆದುಬಿಟ್ಟ. ಹಸಿವು, ದಾಹ ಮತ್ತು ಆಯಾಸದಿಂದ ಸುಸ್ತಾಗಿದ್ದ ರಂಗನಿಗೆ ಈಗ ಮೆಲ್ಲ ಮೆಲ್ಲ ನಿದ್ದೆಯ ಅಮಲೇರಿ ಬಂತು.

ಬೆಳಗಿನ ಜಾವ ಸೀಟಿ ಊದುತ್ತಾ ಬರುತ್ತಿದ್ದ ರೈಲು ಅವನ ನಿದ್ದೆಯನ್ನು ಕೆಡಿಸಿತು. ಕಣ್ಣು

ಬಿಟ್ಟು ಅತ್ತಿತ್ತ ನೋಡಿದವನೆ ದಡಕ್ಕಂತ ಎದ್ದು ಕುಳಿತ. ತಾಳಮದ್ದಲೆ ಮುಗಿದು ಒಬ್ಬೊಬ್ಬರೇ ಒಳ ಹಾದಿಯಿಂದ ಬರುತ್ತಿದ್ದರು. ಅವರನ್ನು ನೋಡಿದ ರಂಗ ನಾಚಿಕೆಯಿಂದ ಹಿಡಿಯಾದ. ಬೇಗ ಹೋಗಿ ಕಂಬದ ಮರೆಯಲ್ಲಿ ನಿಂತು ಹೊರಗೆ ಇಣುಕಿದ.

ಆ ಹಾದಿಯಲ್ಲಿ ಜನ ಬರುವುದು ಕಡಿಮೆಯಾದಾಗ ಸೂರ್ಯನೂ ಮೂಡುತ್ತಾ ಬಂದ. ಇನ್ನು ಮಲ ವಿಸರ್ಜನೆಗಾದರೂ ಹೋಗಿ ಬರುವ ಎಂದೆಣಿಸಿ ಕಂಬದ ಮರೆಯಲ್ಲಿದ್ದವನು ಹೊರಗೆ ಬಂದ. ಅವನ ಗೆಳೆಯರು ದೂರದಿಂದಲೇ ಬರುವುದು ಕಂಡು ನಿಂತಲ್ಲಿಂದಲೇ ಓಡುವ ಎಂದಾಯಿತು. ''ಅಯ್ಯೊಪ್ಪಾ ದೇವರೇ ಇನ್ನಾದರೂ ಈ ಸಂಕಟದಿಂದ ಬಿಡುಗಡೆ ಮಾಡಪ್ಪಾ'' ಎಂದು ಕಣ್ಣಿಗೆ ಕಾಣದ ದೇವರಿಗೆ ಕೈಯೆತ್ತಿ ಮುಗಿದ. 'ಇದು ನಾಚಿಕೆ ಕೆಟ್ಟ ಸಂಗತಿ' ಎಂದು ಗೆಳೆಯರಲ್ಲಿ ಹೇಳಲು ಅಂಜಿಕೆ ಪಟ್ಟರೆ ಕೆಲಸ ಕೆಡುತ್ತದೆ. ಹಾಗಾಗಿ ಯಾವುದನ್ನೂ ಮುಚ್ಚಿಡದೆ ಇದ್ದ ವಿಷಯವನ್ನು ಇದ್ದ ಹಾಗೆ ತಿಳಿಸಿಬಿಡಬೇಕು. ಉಳಿದದ್ದೆಲ್ಲಾ ಆಮೇಲೆ ನೋಡಿಕೊಳ್ಳುವ ಎಂದು ಮನಸಿನಲ್ಲೆ ಅಂದು ಕೊಂಡ. ''ಹಾಂ... ನಾನೀಗ ಇವರನ್ನು ಮಂಗಮಾಡಿದರೆ ಹೇಗಾದೀತು'' ಎಂದು ತಲೆಗೆ ಹೊಳೆದಾಗ ತಮಾಷೆಯ ನಗುವೂ ಬಂತು. ರಾತ್ರಿ ಗರ್ವದಲ್ಲಿ ತೆಗೆದು ಎಸೆದಿದ್ದ ಗಡ್ಡ ಮೀಸೆಯನ್ನು ಓಡಿ ಹೋಗಿ ಹೆಕ್ಕಿ ತಂದ. ಅದನ್ನು ಕಿವಿಯ ಬುಡಕ್ಕೆ ಸಿಕ್ಕಿಸಿಕೊಂಡು ಗಳಿಗೆಯೊಳಗೆ ಪದ್ಮಾಸನ ಹಾಕಿ ಕಣ್ಣು ಮುಚ್ಚಿ ಕುಳಿತ.

ಮಂಟಪದ ಒಳಗಿರುವ ದಿಢೀರ್ ಸನ್ಯಾಸಿಯನ್ನು ನೋಡಿ ಅವನ ಗೆಳೆಯರು ದಂಗಾಗಿ ಹೋದರು.

''ಛೇ! ಈ ತಿರುಪೆ ಎತ್ತುವವನಿಂದಾಗಿ ನಮ್ಮ ಆಟಕ್ಕೆ ಕಲ್ಲು ಬಿತ್ತಲ್ಲಾ'' ಎಂದು ಶಿವಣ್ಣ ಎಣಿಸುತ್ತಿರುವಾಗ ಮಿಕ್ಕಿದವರು ಸನ್ಯಾಸಿಯ ಕಾಲಿಗೆ ಶರಣೂಂತ ಅಡ್ಡ ಬಿದ್ದರು. ಅವನ ಕಾಲು ಹಿಡಿದು ಶರಣಾಗಿ ಬಿಟ್ಟರು. ಮೊದಲೇ ಅಸಮಾಧಾನದಿಂದಿದ್ದ ಶಿವಣ್ಣ ಇದನ್ನು ನೋಡಿ ಕೋಪದಿಂದ ಕುದಿಯ ತೊಡಗಿದ. ''ಏಯ್... ಏಳಿರಾ ಅಲ್ಲಿಂದ! ನೀವೇನು ಅವನ ಕಾಲಲ್ಲಿ ಮುತ್ತು ಸುರಿಯುತ್ತೆ ಎಂದು ಎನಿಸಿದಿರಾ ಏನು? ಅವನು ಯಾರು? ಎಲ್ಲಿಯವ ಎಂದು ತಿಳಿಯುವುದು ಬಿಟ್ಟು ಒಮ್ಮೆಲೆ ಶರಣಾಗಲು ಏನಿತ್ತು ಅವಸರ ನಿಮಗೆ? ಇಲ್ಲಿಯೇ ಕಂಬದ ಮರೆಯಲ್ಲಿ ಕುಳಿತು ಇಸ್ಪೀಟ್ ಆಡುವ. ಅಡಗಿ ಕುಳಿತಲ್ಲೇ ಅವನಿಗೆ ತಿಳಿಯದಂತೆ ಅವನ ಮೇಲೊಂದು ಕಣ್ಣಿಡುವ. ನಿಜವಾಗಿಯೂ ಅವನು ಒಳ್ಳೆಯವನೂ ಎಂದಾದರೆ ಮರ್ಯಾದಿ ಕೊಡುವ. ಅಲ್ಲ ಎಂದು ತಿಳಿದರೆ ಒದ್ದು ಆಚೆ ಓಡಿಸಿ ಬಿಡುವ. ಇದಕ್ಕೆ ಏನು ಹೇಳುತ್ತೀರಿ ನೀವೆಲ್ಲಾ?''

''ಹಾಗೆಲ್ಲ ಸ್ವಾಮಿಗಳ ಬಗ್ಗೆ ಕೀಳಾಗಿ ಮಾತನಾಡಬಾರದು ಶಿವಣ್ಣ. ನೋಡು... ನಾವು ಹೇಳುವುದರಲ್ಲಿ ನಿನಗೆ ಬೇಸರವಾಗಲೂಬಹುದು. ಆದರೂ ಚಿಂತಿಲ್ಲ. ಇಂತಹವರ ಎದುರಲ್ಲಿ ಅಡಗಿ ಕುಳಿತು ಇಸ್ಪೀಟ್ ಆಡಲು ನಾವು ತಯಾರಿಲ್ಲ. ಹಾಗೂ ಆಡಲೇಬೇಕು ಎಂದಾದರೆ ರಂಗನ ಬದಲಿಗೆ ಆನಂದನನ್ನು ಕರೆ ತಂದಿದ್ದಿಯಲ್ಲಾ, ಆಡಿ ನೀವಿಬ್ಬರೂ'' ಇಷ್ಟು ಮಾತು ಹೇಳಿದವರೇ ಅಲ್ಲಿಂದ ಇಳಿದುಕೊಂಡು ಹೋದರು ವಿಠಲ ಮತ್ತು ಸುಂದರ.

''ಥತ್... ಈ ಹಾಳಾದ ಬಿಕನಾಸಿಗಳಿಗೆ ಮಂಡೆ ಕುಂಬಾಗಿದೆ ಅಂತ ಕಾಣುತ್ತೆ'' ಶಿವಣ್ಣ ಗುನು ಗುನು ಮಂತ್ರ ಹಾಕಿಕೊಂಡು ಕಣ್ಣು ಮಸೆದು ನೋಡಿದ ಸನ್ಯಾಸಿಯನ್ನು. ಕಣ್ಣು ಮುಚ್ಚಿ ಕುಳಿತಿದ್ದ ರಂಗನಿಗೆ ಗೆಳೆಯರ ಮಾತು ಕೇಳಿ ನಗು ಉಕ್ಕಿ ಬಂತು. ತುಂಬಾ ಹೊತ್ತಿನಿಂದ ಒಂದೇ ರೀತಿ ಕುಳಿತು

ಅವನಿಗೆ ಸಾಕಾಗಿತ್ತು. ಮರಗಟ್ಟಿದಂತಿದ್ದ ಕಾಲಲ್ಲಿ ಇರುವೆ ಸಾಲುಗಟ್ಟಿದಂತಾಯಿತು. ಅದಲ್ಲದೆ ಬಹಿರ್ದೆಶೆಗೆ ಹೋಗುವ ಅವಸರವೂ ಅವನಿಗಿತ್ತು. ಆದುದರಿಂದ ಇನ್ನಷ್ಟು ಹೊತ್ತು ತೆಗೆಯದೆ ತನ್ನ ನಿಜರೂಪವನ್ನು ತೋರಿಸಿಬಿಡುವುದೇ ಒಳ್ಳೆಯದು ಎಂದು ತನ್ನ ಗಡ್ಡಕ್ಕೆ ಕೈಹಾಕಿದ. ಅಷ್ಟು ಹೊತ್ತಿಗೆ -

''ಅವರಿಬ್ಬರೂ ಹೊರಟು ಹೋದ ಮೇಲೆ ಇನ್ನೇನಿದೆ ಆಟದಲ್ಲಿ ಮಜಾ'' ಎಂದು ಆನಂದ ತನ್ನ ಬೇಸರ ತೋರ್ಪಡಿಸಿದ.

''ನೀನಾದರೂ ಸ್ವಲ್ಪ ಬಾಯಿ ಮುಚ್ಚಿ ಇರು ಮಾರಾಯ. ಸುಮ್ಮನೆ ನನ್ನ ತಲೆ ತಿನ್ನಬೇಡ''

''ಯಾಕೋ ಕೋಪ ಮಾಡಿಕೊಳ್ಳುತ್ತಿ? ಒಂದು ವೇಳೆ ಈ ಸನ್ಯಾಸಿ ಸಿಐಡಿ, ಗಿಐಡಿ ಏನಾದರೂ ಆಗಿದ್ದರೆ. ನಾವಾಗಿ ಯಾತಕ್ಕೆ ಗ್ರಹಚಾರವನ್ನು ಮೈಮೇಲೆ ಎಳೆದುಕೊಳ್ಳಬೇಕು? ಬಾ ಹೋಗುವಾ ಬೇರೆಲ್ಲಾದರೂ ಜಾಗ ಹುಡುಕುವ ಬಾ'' ಬಾಯಲ್ಲಿ ಹೇಳುತ್ತಿದ್ದಂತೆಯೇ ಶಿವಣ್ಣನ ಕೈ ಹಿಡಿದು ಎಳೆದು ಕೊಂಡೇ ಹೋದ. ಆನಂದನ ಧ್ವನಿ ಕಿವಿಗೆ ಬಿದ್ದ ಕೂಡಲೇ ರಂಗ ಬಾಯಿ ಇದ್ದರೂ ಬಾಯಿಬಾರದ ಮಂಗನಂತಾದ. ಆದರೆ ಏನು ಮಾಡುವುದು ಹೊಟ್ಟೆ ಉಬ್ಬುತ್ತಾ ಬರುತ್ತಿದ್ದು ಬೇರೆ ಯೋಚನೆ ಮಾಡುತ್ತಾ ಕುಳಿತುಕೊಳ್ಳಲು ಸಮಯ ಬೇಕಲ್ಲಾ? ಮತ್ತೆ ಒಂದು ಗಳಿಗೆಯೂ ತಡೆಯಲು ಆಗದ ಸ್ಥಿತಿಯಲ್ಲಿದ್ದ ಅವನು ಕಾಟು ಸಸಿಗಳ ಪೊದೆಯತ್ತ ಓಡಿದ. ದೇಹಕ್ಕೆ ಆಗುತ್ತಿದ್ದ ಬಾಧೆಯನ್ನು ಮುಗಿಸಿಕೊಂಡು ಪಾಚಿಕಟ್ಟಿ ಕೊಳಕಾಗಿದ್ದ ಕೆರೆಯ ನೀರಲ್ಲೇ ಬಾಯಿ ಮುಕ್ಕಳಿಸಿ ಮುಖವನ್ನೂ ತೊಳೆದುಕೊಂಡ.

ಹೊಟ್ಟೆ ಹಗುರವಾದ ಸಮಾಧಾನದಲ್ಲಿ ಮಂಟಪದಲ್ಲಿಗೆ ಹಿಂದೆ ಬಂದ. ಅಲ್ಲಿ ಕಣ್ಣೀರು ಸುರಿಸುತ್ತಾ ಕುಳಿತಿದ್ದ ದುಗ್ಗಕ್ಕನನ್ನು ನೋಡಿ ದಂಗಾದ. ''ಜುಗಾರಿ ಆಡಲು ಕೈಯಲ್ಲಿ ಕಾಸಿಲ್ಲದಿದ್ದಾಗ ದುಗ್ಗಕ್ಕನೇ ನನಗೆ ಕೈಸಾಲ ಕೊಡುತ್ತಿದ್ದವಳು. ಹಾಗಾಗಿ ನಾನೀಗ ಅವಳ ದುಃಖಕ್ಕೆ ಕಾರಣ ಎನೂಂತ ಕೇಳಬೇಕು ಎಂದರೆ ತನ್ನ ಮೈ ಮೇಲಿದ್ದ ಈ ವೇಷದ ಬಟ್ಟೆಗಳು ಅಡ್ಡ ಬರಬೇಕಾ? ಆಗಲಿ ನಾನೀಗ ಅನುಭವಿಸುವ ಕಷ್ಟ ಕೋಟಲೆಯನ್ನು ಅವಳಿಗಾದರೂ ತಿಳಿಸಿ ಅವಳ ಸಹಾಯ ಪಡೆದರೆ ಹೇಗೆ? ಬೇಡಪ್ಪಾ ಬೇಡ, ಎಷ್ಟು ಹೇಳಿದರೂ ಹೆಂಗಸರ ಬಾಯಿ ಅಲ್ಲವಾ? ಗುಟ್ಟು ರಟ್ಟಾಗಲು ಜಾಸ್ತಿ ಹೊತ್ತಾಗದು. ಇವಳು ಇಲ್ಲಿಂದೊಮ್ಮೆ ಹೋಗುವವರೆಗೆ, ಓ... ಅಲ್ಲಿ ಇರುವ ಹುಣಸೆ ಮರದಡಿಯಲ್ಲಿ ಅಡಗಿರುವದೇ ಲೇಸು. ಹೀಗೆಲ್ಲಾ ಯೋಚಿಸಿದ ರಂಗ ಮೆಲ್ಲ ಆಚೆಗೆ ತಿರುಗುವುದರ ಒಳಗೆ ಅವನು ದುಗ್ಗಕ್ಕನ ಕಣ್ಣ ದೃಷ್ಟಿಗೆ ಬಿದ್ದೇ ಬಿಟ್ಟ. ಕುಳಿತಲ್ಲಿಂದ ದಿಢ್ಕಂತ ಎದ್ದ ಅವಳು ಓಡಿ ಬಂದು ಅವನ ಕಾಲಿಗೆ ಅಡ್ಡ ಬಿದ್ದಳು. ಇದರ ಕಾರಣ ತಿಳಿಯದ ರಂಗ ಆಶ್ಚರ್ಯಗೊಂಡ 'ಯಾಕೆ ದುಗ್ಗಕ್ಕ ನನ್ನ ಕಾಲಿಗೆ ಬಿದ್ದದ್ದು?' ಕೇಳಲೆಂದು ನಾಲಗೆ ತುದಿವರೆಗೆ ಬಂದ ಮಾತನ್ನು ಗುಳುಂಕ ನುಂಗಿಕೊಂಡ.

''ಸ್ವಾಮೀ ಎರಡು ದಿನದಿಂದಲೂ ನೋಡಲಿಕ್ಕೇ ಇಲ್ಲದ ನಮ್ಮ ಒಂದು ಹಸುವನ್ನು ಹುಡುಕಿ ಹುಡುಕಿ ನಾನು ಸೋತು ಸುಣ್ಣವಾಗಿ ಹೋದೆ. ಇಂದೂ ಬರಿಗೈಯಲ್ಲೆ ಮನೆಗೆ ಬಂದೆ ಎಂದಾದರೆ ನಿನ್ನನ್ನು ಮನೆಯೊಳಗೆ ಬರಲು ಬಿಡುವುದಿಲ್ಲ ಎಂದು ಹೇಳಿದ್ದಾರೆ ನನ್ನ ಅತ್ತೆ. ಆದುದರಿಂದ ನೀವು ಹೇಗಾದರೂ ಮಾಡಿ ನನ್ನ ಕಷ್ಟಕ್ಕೆ ಪರಿಹಾರ ತೋರಿಸಿ ಸ್ವಾಮೀ'' ದುಗ್ಗಕ್ಕ ತನ್ನೊಡಲ ನೋವನ್ನು ಹೊರ ಹಾಕಿದಳು.

''ಅರೆ ಮಲಾಮತ್! ಇದೊಳ್ಳೆ ಪಚೀತಿ ಆಯಿತಲ್ಲಾ?'' ನನ್ನ ಕಷ್ಟವನ್ನೇ ಇನ್ನೊಬ್ಬರಿಗೆ

ತಿಳಿಸಲು ಆಗದೆ ನಾನಿಲ್ಲಿ ಸಾಯುತ್ತಿದ್ದೇನೆ. ಇನ್ನು ಇವಳಿಗೂ ನಾನು ಪರಿಹಾರ ದಾರಿ ತೋರಿಸಬೇಕು ಎಂದರೆ ನನ್ನಿಂದ ಹೇಗಪ್ಪಾ ಸಾಧ್ಯ?'' ಮನಸ್ಸಲ್ಲೇ ತರ್ಕ ಮಾಡುತ್ತಿದ್ದ ರಂಗನಿಗೆ ತಟಕ್ಕಂತ ಇಂತ್ರು ಪೊರ್ಬು ನೆನಪಿಗೆ ಬಂದ. ಸ್ಸ...ರಿ, ಇದು ಅವನದೇ ಕಾರುಬಾರು ಆಗಿರಬೇಕು. ತನ್ನ ಗದ್ದೆಯ ಸಸಿ, ಪಸಲು ತಿನ್ನುವ ಹಸು, ಕರುಗಳಿಗೆಲ್ಲಾ ಅವನು ದೊಡ್ಡಿಯ ದಾರಿ ತೋರಿಸುತ್ತಿದ್ದ. ಈ ಸಂಗತಿ ರಂಗನಿಗೆ ಮೊದಲೇ ಗೊತ್ತಿತ್ತು. ಆದರೆ ಈ ವಿಷಯವನ್ನು ನಾನೀಗ ಯುಕ್ತಿಯಲ್ಲಿ ಅವಳಿಗೆ ಹೇಳಬೇಕಲ್ಲಾ? ಹೇಗೂ ಅವಳು ನನ್ನನ್ನು ಸನ್ಯಾಸಿ ಎಂದು ನಂಬಿದ್ದಾಳೆ.

ದುಗ್ಗಕ್ಕನ ಮುಖ ನೋಡಲೂ ಧೈರ್ಯವಿಲ್ಲದ ರಂಗ ಸೀದಾ ಮಂಟಪದೊಳಗೆ ಬಂದ. ಕಾಲನ್ನು ಮಡಚಿ ಪದ್ಮಾಸನ ಹಾಕಿ ಕುಳಿತ. ತನ್ನ ಕೈ ಬೆರಳುಗಳನ್ನು ಮಡಿಸಿ, ಬಿಡಿಸಿ ಒಂದೊಂದನ್ನೇ ಎಣಿಸುವಂತೆ ನಟಿಸಿದ. ಆಮೇಲೆ ತನ್ನ ಧ್ವನಿಯನ್ನು ಬದಲಾಯಿಸಿ -

''ಈ ಚಿಕ್ಕ ವಿಷಯಕ್ಕೆಲ್ಲ ಯಾಕಮ್ಮಾ ತಲೆಬಿಸಿ ಮಾಡಿಕೊಳ್ಳುತ್ತಿ? ಹೆದರಬೇಡ, ಏನೂ ಹೆದರಬೇಡ. ನಿನ್ನ ವಸ್ತು ನಿನಗೆ ಒದಗುತ್ತೆ. ಸದ್ಯಕ್ಕದು ದನಗಳ ಜೈಲಿನಲ್ಲಿ ಬಂದಿಯಾಗಿ ಬಿದ್ದಿದೆ. ನೀನೀಗ ಇನ್ನಷ್ಟು ಹೊತ್ತು ಕಳೆದೆ ಎಂದಾದರೆ ಅವು ಮಾಂಸ ಕಡಿಯುವ ಕಸಾಯಿಗಳ ಪಾಲಾಗಿ ಹೋದೀತು. ಆದುದರಿಂದ ನೀನು ಏನು ಮಾಡಬೇಕು ಎಂದರೆ ಇಲ್ಲಿಂದ ಸೀದಾ ಮೂಗಿನ ನೇರಕ್ಕೆ ಉತ್ತರ ದಿಕ್ಕಿನತ್ತ ಹೋದರೆ...'' ರಂಗ ಹೇಳುತ್ತಿದ್ದ ಮಾತು ಮುಗಿಯುವುದರೊಳಗೇ ದುಗ್ಗಕ್ಕ ಅಷ್ಟು ದೂರ ಹೋಗಿಯಾಗಿತ್ತು. ತಾನು ಮಾತನಾಡಿದ ರೀತಿ ನೆನೆದ ರಂಗನಿಗೆ ಜೋರಾಗಿ ನಗುವೂ ಬಂತು.

ಬಿಸಿಲು ಏರುತ್ತಾ ಏರುತ್ತಾ ಬರುತ್ತಿದ್ದಂತೆಯೇ ಅವನ ಹೊಟ್ಟೆಯಲ್ಲಿಯೂ ಹಸಿವಿನ ಬೆಂಕಿ ಏಳತೊಡಗಿತು. ಮನೆಯಲ್ಲಾದರೆ ಇಷ್ಟು ಹೊತ್ತಿಗೆ ದೊಡ್ಡ ಉರ್ಲಿಯಲ್ಲಿ ತುಂಬಾ ಓಲೆಬೆಲ್ಲದ ಕಾಫಿಯೂ ಕಲಸಿದ ಅವಲಕ್ಕಿಯಾಗಲಿ ಇಲ್ಲದಿದ್ದರೆ ಹೋಟೆಲ್‌ನಿಂದ ತರುವ ದೋಸೆಯಾಗಲಿ ತಿಂದಾಗುತ್ತೆ ಎಂದು ಹಿಂದಿನ ದಿನದವರೆಗಿನ ನಡೆದಿದ್ದ ತನ್ನ ದಿನಚರಿಯನ್ನು ನೆನೆದ. ಹೊತ್ತು ಹೊತ್ತಿಗೆ ಸರಿಯಾಗಿ ಕುಳಿತು ತಿಂದೇ ಅಭ್ಯಾಸ ಆಗಿದ್ದ ರಂಗನಿಗೆ ಇಂದು ಹಸಿವಿನ ನೋವು ಎಂತಹದು ಎಂದು ಸರಿಯಾಗಿ ತಿಳಿದು ಹೋಯಿತು.

ತಲೆಯ ಮೇಲೆ ಗೊಬ್ಬರದ ಬುಟ್ಟಿ ಹೊತ್ತುಕೊಂಡು ಗದ್ದೆಗೆ ಸಾಗಿಸುತ್ತಿದ್ದ ವಿಠಲನನ್ನು ಅಷ್ಟು ದೂರದಿಂದಲೇ ನೋಡಿದ ರಂಗನಿಗೆ ಹೋದ ಜೀವ ಬಂದಂತಾಯಿತು. ಅತ್ತಿತ್ತ ಏನೂ ನೋಡದ ಗೋಜಿಗೇ ಹೋಗದ ಅವನು ಒಮ್ಮೆಲೆ-

''ವಿಠಲಾ... ಓ... ವಿಠಲಾ'' ಎಂದು ಕೂಗಿದ. ತಲೆ ಮೇಲಿದ್ದ ಭಾರವಾದ ಬುಟ್ಟಿಯಿಂದಾಗಿ ತನ್ನನ್ನು ಯಾರು ಕರೆದರು ಎಂದು ಕತ್ತು ಹೊರಳಿಸಿ ನೋಡಲೂ ಆಗಲಿಲ್ಲ ವಿಠಲನಿಗೆ. ನಿಂತಲ್ಲೇ ಅತ್ತಿತ್ತ ಒಮ್ಮೆ ಕಣ್ಣು ಹೊರಳಿಸಿದ. ಅಲ್ಲಿ ತನ್ನ ಪರಿಚಯದವರು ಕಾಣದ್ದು ನೋಡಿ ಹೆಜ್ಜೆ ಮುಂದಿಟ್ಟ. ರಂಗನಿಗಾದ ಸಂಕಟ ಹೇಳಲಿಕ್ಕೂ ಆಗದಂತಾಯಿತು. ಕೆನ್ನೆಗೆ ಕೈ ಊರಿ ಕುಳಿತ್ತಿದ್ದ ಅವನು 'ಕಟ್ ಕಟ್' ಎಂದು ಶಬ್ದ ಕೇಳಿ ಬಂದತ್ತ ತಲೆ ಎತ್ತಿ ನೋಡಿದ. ಸೊಂಟದಲ್ಲಿ ತಿಂಡಿಯ ಬುಟ್ಟಿ ಇಟ್ಟುಕೊಂಡು ಆಧಾರಕ್ಕೆಂದು ಕೈಯಲ್ಲಿ ಹಿಡಿದುಕೊಂಡಿದ್ದ ಕೋಲನ್ನು ನೆಲಕ್ಕೆ ಕುಟ್ಟುತ್ತಾ ಕುಟ್ಟುತ್ತಾ ಬರುತ್ತಿದ್ದಳು ಪೌಲಿನ್ ಬಾಯಿ. ಚಿಕ್ಕ ಚಿಕ್ಕ ಮಕ್ಕಳಿಗೆ ಇಷ್ಟವಾದ ನೆಲ್ಲಿ, ಬುಗರಿ, ಹಲಸಿನ ಬೀಜ, ಹುಣಸೆ ಬೀಜ, ಬೇಯಿಸಿದ ಗೆಣಸನ್ನೂ ಮಾರಿ ದಿನ ದೂಡುತ್ತಿದ್ದಳು ಈ ಮುದುಕಿ. ಜ್ಞಾನೋದಯ

ಶಾಲೆಯ ಗೇಟಿನ ಬಳಿಯೇ ಅವಳ ವ್ಯಾಪಾರದ ಖಾಯಂ ಜಾಗ ಆಗಿತ್ತು. ಅವಳ ಬುಟ್ಟಿಯಲ್ಲಿದ್ದ ಗೆಣಸನ್ನು ನೆನೆದೇ ರಂಗನ ಬಾಯಲ್ಲಿ ಆಶೆ ಹುಟ್ಟಿತು. ಆದರೆ ಆ ಹಾದಿಯಲ್ಲಿ ಈಗ ಹಲವು ಜನ ಅತ್ತಿತ್ತ ಹೋಗುತ್ತಿದ್ದರು. ಹಾಗಾಗಿ ಅವಳನ್ನು ಗಟ್ಟಿಯಾಗಿ ಕೂಗಲು ಆಗದೆ-

''ಬಾಯಮ್ಮಾ... ಬಾಯಮ್ಮಾ... ಓ... ಬಾಯಮ್ಮಾ...'' ಎಂದು ಮೆಲ್ಲ ಕರೆದ. ಮುದುಕಿಯ ಕಿವಿ ಸ್ವಲ್ಪ ಕಿವುಡಾದರೂ ಹತ್ತಿರದಿಂದ ಕರೆದದ್ದು ಕೇಳಿದುದರಿಂದ.

''ಯಾರದು ನನ್ನನ್ನು ಕರೆಯುವುದು?'' ಎಂದು ಆಚೆ ತಿರುಗಿದಳು. ಅಲ್ಲಿ ನಿಂತಿದ್ದ ಕಾವಿ ಉಟ್ಟವನನ್ನು ನೋಡಿ

''ಈ ಸನ್ಯಾಸಿಗಳಿಗೆ ಯಾಕಪ್ಪಾ ಮಕ್ಕಳ ತಿನಿಸುಗಳ ಮೇಲೆ ಇಷ್ಟೊಂದು ಆಶೆ? ಇಷ್ಟಕ್ಕೂ ಇವನ ಕೈಯಲ್ಲಿ ಕಲೆಂಬಿ ಹಿಡಿದ ಮುಕ್ಕಾಲಾದರೂ ಇರಬಹುದಾ? ಮತ್ತೆ ಸಾಲ ಗೀಲ ಕೇಳಿದರೆ? ದಾನ ಕೊಡು ಎಂದು ಕೇಳಿದರೆ? ಛೇ! ನನಗೆ ಯಾಕೆ ಬೇಕು ಈ ರಗಳೆಯ ವ್ಯಾಪಾರ?'' ಪೌಲಿನ್ ಬಾಯಿ ಯೋಚನೆಯಲ್ಲಿ ಬಿದ್ದಳು. ಆದರೆ ಹಸಿವು ತಡೆಯಲು ಸಾಧ್ಯವಾಗದ ರಂಗ 'ಇಲ್ಲಿ ಬನ್ನಿ' ಎಂದು ಕೈ ಬೀಸಿ ಬೀಸಿ ಅವಳನ್ನು ಕರೆದ.

''ಇದರಲ್ಲಿ ನಿಮ್ಮಂತಹವರು ತಿನ್ನುವ ತಿಂಡಿ ಏನೂ ಇಲ್ಲ ಸ್ವಾಮೀ. ಹಾಗೂ ನಿಮಗೆ ಬೇಕೂ ಎಂದಾದರೆ ಹತ್ತು ಪೈಸೆ ಕೊಟ್ಟು ತೆಗೆದುಕೊಳ್ಳಿ. ಮತ್ತೆ ಸಾಲ ಗೀಲ ಪಂಚಾಯತಿಯೆಲ್ಲ ನನ್ನಲ್ಲಿಲ್ಲ.'' ಖಡಾಖಂಡಿತ ಎರಡು ಮಾತು ಹೇಳಿ ಮುದುಕಿ ಅಲ್ಲಿಂದ ಹೋಗಿಯೇ ಬಿಟ್ಟಳು. ಶಾಲೆ ಬಿಡುವುದರೊಳಗೆ ತಾನಲ್ಲಿ ಇರಬೇಕು ಎನ್ನುವ ಅವಸರವೂ ಅವಳಿಗಿತ್ತು.

ಮೊದಲೇ ಹೊಟ್ಟೆಯಲ್ಲಿ ಏಳುತ್ತಿದ್ದ ಉರಿಯಿಂದ ಕಂಗಾಲಾಗಿದ್ದ ರಂಗ ಈಗ ಎದೆ ಬಡಿದು ಕೊಂಡ, ಕೈಕೈ ಹಿಸುಕಿಕೊಂಡ.

''ಛೇ! ಒಂದು ಹತ್ತು ಪೈಸೆಗೂ ಇಂದಿನ ದಿನದಲ್ಲಿ ಗತಿ ಇಲ್ಲದೆ ಹೋಯಿತೇ? ದಿನಾ ಆಡುತ್ತಿದ್ದ ಇಸ್ಪೀಟ್‌ನಿಂದಾಗಿ ಎಷ್ಟೊಂದು ಹಣ ಕಳೆದುಕೊಳ್ಳುತ್ತಿದ್ದೆ ನಾನು. ದುಡಿಯಲು ಬೇಕಾದ ಕೆಲಸವೇ ಸಿಗೋದಿಲ್ಲ ಎನ್ನುವ ಅಡ್ಡಿಯಲ್ಲಿ ಅಮ್ಮ ದುಡಿದದ್ದನ್ನು ತಿಂದು ತಿರುಗಿ ಸೊಕ್ಕಿದೆನಲ್ಲಾ? ಕಣ್ಣು ಕಿವಿ ಮಂದವಾಗಿದ್ದರೂ ದುಡಿದು ತಿನ್ನುವ ಆಸೆ ತುಂಬಿರುವ ಈ ಬಾಯಮ್ಮನಿಗಿಂತಲೂ ಕಡೆಯಾಗಿ ಹೋದೆನೆ ನಾನು? ರಂಗನಿಗೆ ತನ್ನ ಮೇಲೆಯೇ ಜಿಗುಪ್ಸೆ ಬಂತು. ಹೊಟ್ಟೆಯ ಕೂಗಾಟ, ದುಡ್ಡಿಗಿರುವ ಬೆಲೆ ಅವನ ಕಣ್ಣು ತೆರೆಸಿತು. ಆದರೆ ಏನು? ತನ್ನ ತಪ್ಪು ತನಗೇ ತಿಳಿಯುವಾಗ ಕಾಲ ಮೀರಿ ಹೋಗಿತ್ತು.

ಮರದ ಅಡಿಯಿಂದಾಗಿ ಬರುತ್ತಿದ್ದ ದುಗ್ಗಕ್ಕನನ್ನು ಕಂಡು ''ಇವಳು ಮತ್ತೆ ಯಾವ ಗಂಡಾಂತರ ತಂದಳಪ್ಪಾ?' ಎಂದು ನೆನೆದು ಹೆದರಿದ. ಆದರೂ 'ಆಗಲಿ, ಆದ ಹಾಗೆ ಆಗುತ್ತೆ. ಈಗಲೇ ತನ್ನ ಕಷ್ಟವನ್ನು ಇವಳಲ್ಲಿ ಹೇಳುವುದೇ ಒಳ್ಳೆಯದು. ಇಲ್ಲದಿದ್ದರೆ ಎಷ್ಟು ದಿನಾಂತ ಹೀಗೆಲ್ಲಾ ಉಪವಾಸ, ವನವಾಸ ಮಾಡಲು ಸಾಧ್ಯ ನನ್ನಿಂದ?'' ರಂಗ ಈಗ ತನ್ನ ವೇಷದ ಗುಟ್ಟನ್ನು ಹೇಳಿ ಬಿಡುವುದು ಎಂದು ಮನಸ್ಸಲ್ಲೇ ತೀರ್ಮಾನ ಮಾಡಿದ. ಮಂಟಪದ ಮೆಟ್ಟಿಲು ಹತ್ತಿ ಮೇಲೆ ಬಂದ ದುಗ್ಗಕ್ಕ-

''ಸ್ವಾಮೀ, ನಿಮ್ಮ ದಯೆಯಿಂದ ನನ್ನ ಹಸು ನನಗೆ ಹಿಂದೆ ಸಿಕ್ಕಿತು ಸ್ವಾಮಿ'' ಎಂದು ಹೇಳಿದವಳೇ ತಾನು ಸೆರಗಲ್ಲಿ ಹೊದ್ದು ತಂದ ಬೂದಿ ಬಾಳೆ ಹಣ್ಣಿನ ಚೀಪನ್ನೂ ಎರಡು ಕುಡ್ತೆಯಷ್ಟೂ ನೊರೆ ಹಾಲನ್ನೂ ಅದರೊಟ್ಟಿಗೆ ಊದುಬತ್ತಿ, ದೊಡ್ಡ ಮಲ್ಲಿಗೆ, ಗೊಂಡೆ ಹೂ ಮತ್ತು ಎಂಟಾಣೆ

ಪಾವಳಿಯ ಕಾಣಿಕೆಯನ್ನೂ ಇಟ್ಟು ಅಡ್ಡ ಬಿದ್ದು ಮೇಲೆದ್ದಳು. ರಂಗ ಬೆಕ್ಕಸ ಬೆರಗಾಗಿ ಹೋದ. ಮಾತನಾಡಲೆಂದು ತೆರೆದ ಬಾಯಿ ತೆರೆದೇ ಉಳಿಯಿತು. ದುಗ್ಗಕ್ಕನ ತಲೆ ತುದಿ ಮರೆಯಾಗುವವರೆಗೆ ಅವಳು ಹೋಗುವುದನ್ನೇ ನೋಡುತ್ತಿದ್ದ. ಆಮೇಲೆ ಅವನ ಕಣ್ಣು ಅವಳು ತಂದಿತ್ತ ವಸ್ತುಗಳತ್ತ ತಿರುಗಿತು.

ಹಸಿವಿನ ಬೇಗೆಯಲ್ಲಿದ್ದ ರಂಗನ ಮುಖ ಈಗ ಶ್ಯಾನಾಗೇ ಅರಳುತ್ತಾ ಬಂತು. ''ಇನ್ನು ಯಾರಾದರೂ ಬಂದು ಬಿಟ್ಟರೆ ಕೈಗೆ ಬಂದ ಹಣ್ಣು, ಹಾಲು ಬಾಯಿಗೆ ಬಾರದೆ ಹಾಗೆ ಆಗಿ ಹೋದೀತು'' ಎಂದು ನೆನೆದ ರಂಗ ಗಿಂಡಿಯನ್ನು ಕೈಗೆ ತೆಗೆದುಕೊಂಡು ಗುಟ್ಕ್ ಗುಟ್ಕ್ ಎಂದು ಹಾಲು ಕುಡಿದ. ಇಡೀ ಒಂದು ಚೀಪು ಬಾಳೆಹಣ್ಣನ್ನೂ ತಿಂದು ಬಿಟ್ಟ. ಅದರ ಸಿಪ್ಪೆಯನ್ನೆಲ್ಲಾ ತೆಗೆದು ಆಚೆ ದೂರ ಎಸೆದ. ಪಾವಲಿಯನ್ನು ಸೊಂಟಕ್ಕೆ ಸಿಕ್ಕಿಸಿಕೊಂಡ.

''ಓಪ್ಪ ದೇವರೇ, ಈಗ ಹೊಟ್ಟೆ ಸ್ವಲ್ಪ ತಂಪಾಯಿತಪ್ಪಾ'' ಎಂದು ಶ್ವಾಸ ಬಿಟ್ಟ. ''ಹಾಂ ಇನ್ನು ಈ ಊದುಬತ್ತಿಯನ್ನೂ, ಹೂವನ್ನೂ ಏನು ಮಾಡುವುದು?'' ಮನಸ್ಸಲ್ಲೇ ಕಿಸಕ್ಕ ನಕ್ಕ. ''ಹೌದು ಇದುವೇ ಸರಿ'' ಎಂದೆನಿಸುತ್ತಾ ಹೊರಗೆ ಗುಪ್ಪೆ ಹಾಕಿದ್ದ ಮಣ್ಣಿನ ರಾಶಿಯತ್ತ ಹೋದ. ಅಲ್ಲಿ ಹುಡುಕಾಡಿ ಉರುಟಾದ ಒಂದು ಕಲ್ಲನ್ನು ಹೆಕ್ಕಿ ತಂದ. ಮಂಟಪದ ನಡು ಮಧ್ಯದಲ್ಲಿ ಅದನ್ನಿಟ್ಟು ಅದರ ಮೇಲೆ ಸಾಲಾಗಿ ಹೂ ಹಾಕಿದ. ಊದಿನ ಕಡ್ಡಿಯನ್ನೂ ಕಲ್ಲಿನ ಬದಿಯಲ್ಲಿ ನಿಲ್ಲಿಸಿದ. ''ಇನ್ನು ಏನೆಲ್ಲಾ ಗಮ್ಮತ್ತು ನಡೆಯುತ್ತದೆ ಎಂದು ನೋಡಿಯೇ ಬಿಡುವಾ'' ಎಂದು ಅಲ್ಲಿಯೇ ಕುಳಿತ.

ಅಷ್ಟರಲ್ಲೇ ದುಗ್ಗಕ್ಕ ಹೇಳಿದ ಹೊಸ ಸುದ್ದಿ ಊರೆಲ್ಲಾ ಹರಡಿತ್ತು. ಇದನ್ನು ಕೇಳಿದವರೆಲ್ಲಾ ಮಂಟಪದತ್ತ ಓಡಲು ಪ್ರಾರಂಭಿಸಿದರು. ಸನ್ಯಾಸಿಯನ್ನು ನೋಡುವ ಅವಸರ ಹಲವರಿಗೆ, ಭಕ್ತಿ ಭಾವದಿಂದ ಅವನ ದರುಶನ ಪಡೆಯಲೆಂದೇ ಬಂದವರು ಇನ್ನು ಕೆಲವರು ಇದ್ದರು. ನಂಬಿಕೆ ಇಲ್ಲದವರಲ್ಲದೆ ಏನಾದರೂ ವಿಶೇಷ ನಡೆಯುತ್ತದಾ ಎಂಬ ಇರಾದೆಯಿಂದ ಬಂದವರೂ ಇದ್ದರು. ಮಳೆಗಾಲದಲ್ಲಿ ಬರುವ ನೆರೆಯಂತೆ ಕ್ಷಣ ಕ್ಷಣಕ್ಕೂ ಏರುತ್ತಾ ಬರುತ್ತಿತ್ತು ಭಕ್ತರ ದಂಡು. ಇದನ್ನು ನೋಡಿದ ರಂಗ ಕಣ್ಣು ಕತ್ತಲೆ ಬಂದು ಬೀಳುವಂತಾದ. ಅವರೆಲ್ಲರೂ ಈಗ ಕೇಳಲಿಕ್ಕಿರುವ ಪ್ರಶ್ನೆಗಳನ್ನು ನೆನೆದೇ ಅವನು ಬೆವತು ಹೋದ.

ಕಾಲು ಮಡಚಿ ಕುಳಿತಲ್ಲಿಂದ ಭಕ್ತರ ಸೈನ್ಯದತ್ತ ಒಮ್ಮೆ ಕಣ್ಣು ಹೊರಳಿಸಿ ನೋಡಿದ. ಎಲ್ಲವೂ ತನ್ನ ಊರಿನ ಪರಿಚಿತ ಮುಖಗಳು ಎಂದು ತಿಳಿದ ಮೇಲೆ ಸಮಾದಾನದ ಉಸಿರು ಬಿಟ್ಟ.

ಸರಿ... ನಾನೀಗ ಸಾಚಾ ಸನ್ಯಾಸಿಯಂತೆ ನಟಿಸಬೇಕು. ಯಾರಾದರೂ ಅಡ್ಡಾದಿಡ್ಡಿ ಸವಾಲು ಹಾಕಿದರೂ ಎಂದಾದರೆ ತಿಳಿದ ಹಾಗೆ ಉತ್ತರಿಸಿ ಓಡಿಸಿದರಾಯಿತು. ಎಂಬ ಧೈರ್ಯವೂ ಮನಸಲ್ಲಿ ಮೂಡಿತು. ಆಮೇಲೆ ಎಲ್ಲರನ್ನೂ ಒಮ್ಮೆ ನೋಡಿ ಒಂದು ಮುಗುಳು ನಗು ನಕ್ಕ. ''ಕುಳಿತುಕೊಳ್ಳಿಯಪ್ಪಾ ಎಲ್ಲರೂ ಕುಳಿತುಕೊಳ್ಳಿ ಎನ್ನುವಂತೆ ಕೈ ಸನ್ನೆ ಮಾಡಿ ತಲೆ ಆಡಿಸಿದ. ಅಷ್ಟರಲ್ಲಿ ಭಕ್ತರ ಮಧ್ಯೆ ಇದ್ದ ದ್ಯಾಪ ಮುಂದೆ ಬಂದ. ತನ್ನ ಎರಡೂ ಕೈಯನ್ನು ಧೈನ್ಯತೆಯಿಂದ ಮುಗಿದು ''ಸ್ವಾಮಿಗಳೇ ಒಂದು ಚಿಟಿಕೆಯಷ್ಟು ವಿಭೂತಿಯಾದರೂ ಕೊಟ್ಟು ಮಗನ ರೋಗವನ್ನು ಗುಣಪಡಿಸಿ ಸ್ವಾಮೀ'' ಎಂದು ರಂಗನ ಕಾಲಿಗೆ ಬಿದ್ದು ಬೇಡಿಕೊಂಡ. ರಂಗನಿಗೆ ನಗು ಉಕ್ಕಿ ಬಂತು.

ಶರಾಬು ಕುಡಿಯುವುದರಲ್ಲಿ ತನ್ನ ತಂದೆಗಿಂತಲೂ ಒಂದು ಕೈ ಮುಂದಿದ್ದ ಇವನ ಮಗನಿಗೆ ಲೋಕದಲ್ಲಿದ್ದ ಎಲ್ಲಾ ಹಾಳು ಬುದ್ಧಿಯೂ ಇತ್ತು. ಹಾಗಾಗಿ ಊರವರು ಈ ತಂದೆ ಮಗನನ್ನು

ಕಸದ ರಾಶಿಗೆ ಉಗುಳಿದಂತೆ ಇಟ್ಟಿದ್ದರು. ಈಗ ನನ್ನಲ್ಲಿಲ್ಲದ್ದ ವಿಭೂತಿಯನ್ನು ನಾನೆಲ್ಲಿಂದ ತಂದು ಕೊಡಲಿ? ಒಂದು ವೇಳೆ ನಾನು ಕೊಟ್ಟರೂ ಅವನ ರೋಗ ಗುಣ ಆಗುವುದು ಹೌದಾ? ಈ ಸಿಕ್ಕಿನಿಂದ ನಾನೀಗ ಹೊರಬರಬೇಕಾದರೆ ದ್ಯಾಪನನ್ನು ಮುಖ ಎತ್ತದಂತೆ ಮಾತನಾಡಬೇಕು. ಹೀಗೆ ಯೋಚಿಸಿದ ರಂಗನ ಮುಖ ದೊಡ್ಡ ಕುಂಬಳಕಾಯಿಯಂತೆ ಊದಿಕೊಂಡಿತು. ಮೂಗಿನ ರಂಧ್ರಗಳನ್ನು ಅರಳಿಸಿಕೊಂಡು ಕಣ್ಣು ಮಸೆದು ದ್ಯಾಪನನ್ನು ನೋಡಿದ.

''ಥತ್..., ಊರಿನವರಿಗೆಲ್ಲಾ ಬುದ್ಧಿ ಹೇಳುವ ಗುರಿಕಾರನಲ್ಲವಾ ನೀನು? ತಾನೂ ಕೆಟ್ಟು ಮಗನನ್ನೂ ಕೆಡಿಸಿದ ಪುಣ್ಯಾತ್ಮ... ಆಂ... ಆಂ... ತಲೆಗೆ ಸುರಿದ ನೀರು ಕಾಲಿಗೆ ಇಳಿದು ಬರಲೇ ಬೇಕಲ್ಲಾ? ಸ್ಸ... ರಿ... ಇನ್ನೇನಿದೆ ಇಲ್ಲಿ ನಿನಗೆ ಕೆಲಸ? ನಾನು ಭಯ ಭಕ್ತಿಯಲ್ಲಿ ಪೂಜೆ ಮಾಡುತ್ತಿದ್ದ ಈ ನನ್ನ ತಾಯಿ ದೇವಿಯ ಮುಂದೆ ಕೆಟ್ಟ ಸುದ್ದಿ ಹೇಳಿದ ತಪ್ಪಿಗೆ ಎರಡು ರೂಪಾಯಿ ತಪ್ಪು ಕಾಣಿಕೆ ಹಾಕಿ ನಡಿ ಇಲ್ಲಿಂದ'' ರಂಗ ಬಾಯಿ ಬಿಟ್ಟು ಹೇಳಿದಾಗ ಅಲ್ಲಿ ಕುಳಿತವರ ಮುಂದೆ ದ್ಯಾಪನ ಉಸಿರು ನಿಂತಿತು ನಾಚಿಕೆಯಿಂದ ಮತ್ತೆ ಮಾತನಾಡಲೂ ಆಗದೆ ದಂಡ ಕಟ್ಟಿ ತಲೆ ತಗ್ಗಿಸಿಕೊಂಡೇ ಅಲ್ಲಿಂದ ಹೊರಟ.

ಸನ್ಯಾಸಿಯ ಮಹಿಮೆ ನೋಡಿ ಜನರು ದಂಗಾಗಿ ಹೋದರು. ಒಬ್ಬರನ್ನೊಬ್ಬರು ಮುಖ ಮುಖ ನೋಡುತ್ತಾ ''ಸ್ವಾಮಿಗಳು ಹೇಳಿದ ಮಾತು ನೂರಕ್ಕೆ ನೂರು ಸತ್ಯವೆ'' ಎಂಬಂತೆ ತಲೆಯಾಡಿಸಿಕೊಂಡರು. ರಂಗ ಆಡಿದ ನಾಟಕ ಅವನ್ನನು ಗೆಲ್ಲಿಸಿತು. ದ್ಯಾಪಣ್ಣನಿಗಾದ ಅವಮಾನವನ್ನು ನೋಡಿ ಅಂತಹದೇ ಪ್ರಶ್ನೆ ಕೇಳಲೆಂದು ಬಂದವರು 'ಗುಳುಂಕ' ಅಂತ ಉಗುಳು ನುಂಗಿಕೊಂಡು ಬಾಯಿಗೆ ಕೈ ಹಿಡಿದು ಕುಳಿತರು. ಅಲ್ಲಿ ತನಕ ಮುಖ ಬಗ್ಗಿಸಿ ದೇಹವನ್ನು ಒಂದೇ ಹಿಡಿ ಮಾಡಿಕೊಂಡು ಮೂಲೆಯಲ್ಲಿ ಕುಳಿತ್ತಿದ್ದಳು ಪುಟ್ಟಕ್ಕ. ಗುರಿಕಾರ ಹಿಂದೆ ಹೋಗಬೇಕಾದರೆ ಅವಳು ಎದ್ದು ಮುಂದೆ ಬಂದಳು. ತನ್ನ ಮಗಳ ಮದುವೆಯ ಚಿಂತೆ ಅವಳ ಎದೆಯಲ್ಲಿ ಉರಿಯುತ್ತಿತ್ತು.

ಎರಡು ವರ್ಷದ ಹಿಂದೆ ಇವಳ ಮಗಳು ಸುಂದರಿನ್ನು ಮದುವೆಯಾಗಬೇಕೆಂದು ರಂಗ ಬಹಳ ಹುಚ್ಚು ಕಟ್ಟುತ್ತಿದ್ದ. ಆದರೆ ಇದಕ್ಕೆ ಅಡ್ಡ ಕಾಲಿಟ್ಟವಳು ಇದೇ ಪುಟ್ಟಕ್ಕ ಎಂದು ತಿಳಿದ ಮೇಲೆ ಅವಳ ನೆರಳು ನೋಡಿದರೂ ಸಾಕು ರಂಗ 'ಬಿಸಿ' ಆಗುತ್ತಿದ್ದ. ಅಂದಿನ ಹಗೆ ತೀರಿಸಲು ಇಂದು ತನ್ನಷ್ಟಕ್ಕೆ ಕೂಡಿ ಬಂದಿದೆ ಗಳಿಗೆ ಎಂದು ನೆನೆಸಿಕೊಂಡ. ''ಏನಮ್ಮಾ ನಿನ್ನ ಮುಖದಲ್ಲಿ ಕಳೆಯೇ ಇಲ್ಲದಂತೆ ಇದೆಯಲ್ಲಾ ಏನು ಕತೆ?''

''ಸ್ವಾಮೀ, ನನ್ನ ಮಗಳಿಗೆ....''

''ಸರಿ ಸರಿ, ಬಿಲ್ಲಿನಂತೆ ಬಾಗಿರುವ ನಿನ್ನ ಬೆನ್ನು, ತಲೆ ತುಂಬಾ ನೆರೆದ ಕೂದಲು ಹೇಳುತ್ತಲ್ಲಾ ಈಗಾಗಲೇ ನೀನು ಅಜ್ಜಿಯಾಗಿರಬೇಕಿತ್ತೆಂದು? ಆದರೇನು? ನೀನು ಮಾಡಿದ ಕರ್ಮದ ಫಲದಿಂದ ಮದುವೆ ಪ್ರಾಯಕ್ಕೆ ಬಂದ ಮಗಳ ಕೈಯಿಂದಲೇ ನಿನ್ನ ಬಾಣಂತನದ ಕೆಲಸ ಮಾಡಿಸಬೇಕಾಗುತ್ತೆ. ಹೌದಾ ಅಲ್ಲವಾ ಹೇಳು ನೋಡೋಣ?''

ರಂಗ ಒಂದು ಕಣ್ಣು ಮುಚ್ಚಿ ಮತ್ತೊಂದನ್ನು ಅರ್ಧ ಮುಚ್ಚಿಕೊಂಡು ಗರ್ಭಿಣಿ ಪುಟ್ಟಕ್ಕನ್ನನ್ನು ನೋಡಿದ. ಅವಳು ಇದಕ್ಕೆ ಏನೆಂದು ಹೇಳಿಯಾಳು? ಊರವರ ಮುಂದೆ ಒದ್ದೆ ಕೋಳಿಯಂತಾದಳು. ಉಟ್ಟಿದ್ದ ಸೀರೆಯ ಸೆರಗನ್ನು ಎಳೆದುಕೊಂಡು ಬೇಗ ತನ್ನ ಹೊಟ್ಟೆಯನ್ನು ಅಡಗಿಸಿಕೊಂಡಳು. ಅನಂತರ ಎರಡು ಕೈಯನ್ನೂ ಜೋಡಿಸಿಕೊಂಡು -

''ಏನು ಮಾಡುವುದು ಸ್ವಾಮೀ ದೇವರು ಕೈ ಎತ್ತಿ ಕೊಟ್ಟ ಫಲವನ್ನು ಬೇಡಾಂತ ಹೇಳಲಿಕ್ಕಾಗ್ತದಾ? ನನ್ನ ಚಿಂತೆ ಇದಲ್ಲ ಸ್ವಾಮೀ. ಬೆಳೆದು ನಿಂತ ಮಗಳ ತಲೆಯ ಮೇಲೆ ಎರಡು ಅಕ್ಕಿ ಕಾಳು ಹಾಕದೆ ತಿಂದ ಅನ್ನವೂ ದೇಹಕ್ಕೆ ಹಿಡಿಯದಂತಾಗಿದೆ.'' ಒಂದು ಗಳಿಗೆ ಸುಮ್ಮನಿದ್ದ ರಂಗ ಬಹಳ ಯೋಚನೆಯಲ್ಲಿ ಬಿದ್ದ ಹಾಗೆ ಮಾಡಿದ. ಬಲ ಕೈಯ ನಾಲ್ಕು ಬೆರಳುಗಳನ್ನು ಮಡಿಸಿ ಹಿಡಿ ಮಾಡಿ ಉಳಿದ ಒಂದು ಬೆರಳನ್ನು ತಲೆಗೆ ಕುಟ್ಟುತ್ತಾ-

''ಹಿಂದೆ ಒಮ್ಮೆ ನಿನ್ನ ಮಗಳಿಗೆ ಊರಿನೊಳಗಿನದ್ದೇ ಸಂಬಂಧ ಬಂದದ್ದನ್ನು ನೀನೇನಾದರೂ ತಪ್ಪಿಸಿದ್ದಿಯಾ?''

''ಆಂ...? ಅ... ಹೌದು ಸ್ವಾಮೀ. ಆದರೆ ಅದು ಯಾವ ಕರ್ಮದ್ದು ಸಂಬಂಧ ಸ್ವಾಮೀ? ಆ ಹುಡುಗನಿದ್ದಾನಲ್ಲಾ ಇಡೀ ಮನೆಯನ್ನು ನುಂಗುವಂತಹ ಬುರ್ನಾಸ್ ಬುದ್ಧಿಯವ ಗೊತ್ತುಂಟಾ? ಅದು ಸಾಯಲಿ, ಅವನಿಗೊಂದು ಚಿಲ್ಲರೆ ಕೆಲಸವಾದರೂ ಇತ್ತಾ? ಅದೂ ಇಲ್ಲ. ಕೊನೆಗೆ ಹೆಣ್ಣು ಕೊಟ್ಟ ತಪ್ಪಿಗೆ ನಾವೇ ಊಟ ಕೊಟ್ಟು ಸಾಕಬೇಕಾಗಿತ್ತಾ ಏನಾ ಇಬ್ಬರನ್ನೂ'' ರಂಗನಿಗೆ ಒಮ್ಮೆಲೇ ಮೈ ತುಂಬಾ ಚೇಳು ಹರಿದು ಅಲ್ಲಲ್ಲಿ ಕಚ್ಚಿದಂತಾಯಿತು. ಬಾಯಿಯಿಂದ ಒಂದೇ ಒಂದು ಶಬ್ದ ಹೊರಡದಿದ್ದರೂ ಸಹಿಸಿಕೊಂಡು-

''ನೋಡಿದಿಯಾ... ಅಲ್ಲೇ ನೀನು ತಪ್ಪಿದ್ದು. ಉಪ್ಪು ತಿಂದವ ನೀರು ಕುಡಿಯಲೇ ಬೇಕಲ್ಲಾ? ನಿನಗೆ ಏನು ದೊಡ್ಡ ಮುಂಡಾಸಿನ ಸರದಾರನೇ ಅಳಿಯನಾಗಿ ಬರಬೇಕೆಂಬ ದುರಾಸೆ ಕಟ್ಟಿದಿ. ಆದರೆ ನೀನು ಎಣಿಸಿದಷ್ಟು ಬುರ್ನಾಸ್ ಬುದ್ಧಿಯವನೇನಲ್ಲ ಆ ಗಂಡು ಮಗ. ಅವನೂ ಈಗ ನಾಲ್ಕು ಕಾಸು ದುಡಿದು ತರುತ್ತಿದ್ದಾನೆ ಗೊತ್ತುಂಟಾ?

''ಅಯ್ಯಯ್ಯೊ ಸ್ವಾಮೀ, ಇದು ನಾನು ಏನೂ ತಿಳಿಯದೆ ಇದ್ದುದರಿಂದ ಮಾಡಿದ ತಪ್ಪು ಸ್ವಾಮೀ. ನನ್ನನ್ನು ಕ್ಷಮಿಸಿ. ನನ್ನನ್ನು ಉದ್ಧಾರ ಮಾಡಿ ಸ್ವಾಮಿ...'' ಪಾಪದವಳು ತನ್ನ ಕೆನ್ನೆ ಕೆನ್ನೆಗೆ ಹೊಡೆದುಕೊಂಡು ಹೇಳಿದಳು. ಅವಳ ಅಳು ನೋಡಿದ ರಂಗ ''ತಾನು ಹೇಳಿದ್ದು ಅತಿಯಾಯಿತೋ ಏನೋ?'' ಎಂದು ಹೊಟ್ಟೆ ಉರಿಸಿಕೊಂಡ. ''ಆಗಲಿ ಅಳ ಬೇಡಮ್ಮಾ ಅಳಬೇಡ. ಇಗೋ ತಕೋ ಪ್ರಸಾದ. ದೇವರ ದಯೆಯಿಂದ ವರ್ಷ ಕಳೆಯುವುದರೊಳಗೆ ನಿನ್ನ ಮಗಳ ಮದುವೆಯ ವಾದ್ಯ ಊದಿಸಿದರಾಯಿತಲ್ಲಾ?'' ಎಂದು ಕಲ್ಲಿನ ಮೇಲಿದ್ದ ಹೂವಿನ ನಾಲ್ಕು ಎಸಳು ತೆಗೆದ. ಕುಳಿತಲ್ಲೇ ಕಣ್ಣು ಮುಚ್ಚಿ ಮನ ಮನ ಎಂದು ತುಟಿ ಅಲ್ಲಾಡಿಸಿ ದೇವರಿಂದ ಬೇಡುವಂತೆ ನಟಿಸಿದ. ಮತ್ತೆ ಸ್ವಲ್ಪ ಹೊತ್ತು ಕಳೆದು. ಹೂವಿನ ಎಸಳನ್ನು ಅವಳ ಕೈಗೆ ಹಾಕಿದ.

ಇದನ್ನೆಲ್ಲಾ ಕಣ್ಣು ದೊಡ್ಡದು ಮಾಡಿ ನೋಡುತ್ತಿದ್ದ ಆನಂದನಿಗೆ ಓ... ಈ ಸನ್ಯಾಸಿ ಸಿ.ಐ.ಡಿ. ಏನೂ ಅಲ್ಲಾಂತ ಖಾತ್ರಿಯಾಯಿತು. ಆದರೂ ಇವನು ಯಾರು? ಎಲ್ಲಿಂದ ಬಂದ? ಅದ್ಯಾಕೆ ನಮ್ಮ ಊರಲ್ಲೇ ಠಿಕಾಣಿ ಹೂಡಿದ್ದಾನೆ ಎಂದು ಹೇಗೆ ಕಂಡುಹಿಡಿಯುವುದು? ಏನೇ ಆಗಲಿ ಇದರ ಗುಟ್ಟು ತಿಳಿಯದೆ ಖಂಡಿತ ಬಿಡಲಾರೆ. ಒಬ್ಬ ಚಿಕ್ಕ ಡೋಂಗಿ ಸನ್ಯಾಸಿ ಅಂತ ನನಗೇನಾದರೂ ತಿಳಿದು ಬಂದರೆ ಊರವರೂ ನನ್ನ ಬುದ್ಧಿವಂತಿಕೆಯನ್ನು ಮೆಚ್ಚದೆ ಇರ್ತಾರಾ? ಆನಂದನಿಗೆ ಈ ಯೋಚನೆ ಬರುತ್ತಿದ್ದಂತೆಯೇ ಒಳಗೊಳಗೇ ಬೀಗುತ್ತಾ ಹೋದ.

ಅಷ್ಟಾಗುವಾಗ ಮೂಗಿನ ತನಕ ಕುಡಿದು ಬಂದ ನರಸಿಂಹ ರಾಯರು ನಿಂತಲ್ಲಿ ನಿಲ್ಲಲಿಕ್ಕಾಗದೆ ಬಾಯಿಗೆ ಬಂದ ಹಾಗೆ ಸನ್ಯಾಸಿಯನ್ನು ಬಯ್ಯಲು ಶುರುಮಾಡಿದರು. ಅಲ್ಲಿದ್ದವರು ''ಬಾಯಿ

ಮುಚ್ಚಿರಾಯರೇ'' ಎಂದು ಎಷ್ಟು ಹೇಳಿದರೂ ಕೇಳದೆ ''ನನ್ನ ಮಗಂದು ಏನು, ಸಿಪಾಯಿಗಿರಿ ಉಂಟಂತಾ? ಇದ್ದರೆ ಇಲ್ಲಿ ಬರಲಿ ನೋಡುವಾ? ಒಂದು ಕೈ ನೋಡಿಯೇ ಬಿಡುತ್ತೇನೆ ಅವನನ್ನು. ನಿಂತ ಕಾಲಲ್ಲೇ ಇಂದಿಗಿಂದು ಇವನನ್ನು ಊರು ಬಿಟ್ಟು ಓಡಿಸಲಿಲ್ಲಾ ಎಂದಾದರೆ ನಾನು ನನ್ನಪ್ಪನ ಮಗನೇ ಅಲ್ಲ'' ಹುಚ್ಚನ ಹಾಗೆ ಹೀಗೆಲ್ಲಾ ಹೇಳಿಕೊಂಡು ಮಂಟಪ ಕಂಬದ ಬಳಿ ಬಂದು ನಿಂತು ಕೊಂಡರು. ರಂಗನ ಎದೆಯಲ್ಲಿ ಅವಲಕ್ಕಿ ಕುಟ್ಟಲು ಶುರುವಾಯಿತು. ''ದೇವರೇ, ಈ ಪುಣ್ಯಾತ್ಮ ಬಾಯಿಗೆ ಬಂದಹಾಗೆ ಎಷ್ಟು ಬೇಕಾದರೂ ಬೈಯಲಿ ಆದರೆ ಮಾತ್ರ ನನ್ನ ಗಡ್ಡಕ್ಕೊಂದು ಕೈ ಹಾಕದಿದ್ದರೆ ಸಾಕು'' ಎಂದು ಮನಸ್ಸಲ್ಲಿಯೇ ಬೇಡಿಕೊಂಡ. ಅವನ ಭಯದ ಪ್ರಾರ್ಥನೆ ದೇವರಿಗೂ ಕೇಳಿಬಿಟ್ಟಿತೋ ಏನೋ?

ಕುಡಿದ ಅಮಲು ಇಳಿಯದ ಕಾರಣ ಇನ್ನೂ ಏನೇನೆಲ್ಲಾ ಒದರುತ್ತಿದ್ದರು ರಾಯರು. ಬಾಯಿಯಿಂದ ಇಳಿಯುತ್ತಿದ್ದ ನೀರನ್ನೂ ಮೂಗಲ್ಲಿ ಸೋರುತ್ತಿದ್ದ ಸಿಂಬಳವನ್ನೂ ಉಟ್ಟ ಬಟ್ಟೆಯಲ್ಲಿಯೇ ಒರೆಸಿಕೊಂಡರು. ಆಗಲೇ ಅವರಿಗೊಂದು ಸೀನೂ ಬರಬೇಕಾ? ಅವರು ಸೀನಿದ ರಭಸಕ್ಕೆ ಮೂಗು ಕಂಬಕ್ಕೆ ಬಡಿಯಿತು. ಆಯಿತು, ಅಷ್ಟರಲ್ಲೇ ಅವರ ಪೌರುಷ, ಪರಾಕ್ರಮ ತಣ್ಣಗಾಗಿಹೋಯಿತು. ಈಗ ನನ್ನ ಸರದಿ ಎಂಬಂತೆ ಆನಂದ ಮುಂದೆ ಬಂದು ಕುಕ್ಕರ ಕಾಲಲ್ಲಿ ಕುತ್ತ ಕುಳಿತ.

''ಸ್ವಾಮೀ... ನನ್ನ ಒಂದು ಸೊತ್ತು ಕಳವಾಗಿದೆ ಸ್ವಾಮೀ. ಅದು ಇನ್ನು ನನಗೆ ಹಿಂದೆ ಸಿಗುತ್ತದಾ ಇಲ್ಲವಾ ಎಂದು ನನ್ನ ಕೈ ನೋಡಿ ಹೇಳಿ ಸ್ವಾಮಿ'' ಎಂದು ಅಲ್ಲಿ ಕುಳಿತಿದ್ದವರನ್ನೊಮ್ಮೆ ಜಂಬದ ಕಣ್ಣಲ್ಲಿ ನೋಡಿಕೊಂಡು ನಂಜಿಯ ನಗು ಬೀರಿದ. ರಂಗ ಅವನನ್ನು ಕಣ್ಣು ಬಿಟ್ಟು ನೋಡುತ್ತಾ -

''ಒಂದಿಷ್ಟೂ ಸೊತ್ತು ಇಲ್ಲದಿದ್ದ ಮೇಲೆ ಕಳೆದುಕೊಳ್ಳಲು ಏನಿದೆಯಪ್ಪಾ ನಿನ್ನಲ್ಲಿ? ಬಾಯಿಯಿಂದ ಹೊರಟ ಮಾತಿನಂತೆಯೇ ಮನಸು ಕೂಡ ಶುದ್ಧ ಇಲ್ಲದ ಈ ನಿನ್ನ ನಾರದ ಬುದ್ಧಿಯನ್ನು ಬಿಟ್ಟು ಇನ್ನಾದರೂ ಒಳ್ಳೆಯ ಹಾದಿಯಲ್ಲಿ ನಡೆಯಲು ಕಲಿತುಕೋಪ್ಪಾ'' ಸಾದುವಿನ ಬಾಯಿಯಿಂದ ತನ್ನ ಅಡ್ಡ ಹೆಸರು ಕೇಳಿದ ಕೂಡಲೇ ಕೆನ್ನೆಗೆ ಬಡಿದಂತಾಯಿತು ಆನಂದನಿಗೆ. ಆದರೂ ತನ್ನ ಮಾತಿನ ಸಾಮರ್ಥ್ಯವನ್ನು ತೋರಿಸುವ ಸಲುವಾಗಿ -

''ನಾನು ಸತ್ಯವನ್ನೇ ಹೇಳುತ್ತಿದ್ದೇನೆ ಸ್ವಾಮಿ. ನನ್ನ ಒಂದು ಹಾಲು ಕರೆವ ಎಮ್ಮೆ ಹಲವು ದಿನದಿಂದ ಕಾಣುತ್ತಿಲ್ಲ ಸ್ವಾಮೀ...''

''ಹೌದಪ್ಪಾ ಹೌದು. ಎಷ್ಟಾದರೂ ನೀನು ಕಲಿಯುಗದ ಕಲಹ ಪ್ರಿಯಾ ಅಲ್ಲವಾ? ಹಟ್ಟಿಯಲ್ಲಿ ಸೆಗಣಿ ಬಾಚುವುದಲ್ಲದೆ ಎಮ್ಮೆ ಸಾಕುವ ಯೋಗ್ಯತೆ ನಿನ್ನ ಹಣೆಯಲ್ಲಿ ಬರೆಯಲಿಲ್ಲಪ್ಪಾ. ನನ್ನ ಪಾಂಡಿತ್ಯವನ್ನು ಪರೀಕ್ಷೆ ಮಾಡುವ ಕ್ರಮವೂ ಇದಲ್ಲ. ನೀನೀಗ ಅವಮಾನ ಮಾಡಿದ್ದು ನನ್ನನ್ನಲ್ಲ. ಇಲ್ಲಿ ಕುಳಿತ್ತಿದ್ದಾಳಲ್ಲಾ ಈ ನನ್ನ ಅಮ್ಮ, ಇವಳನ್ನು! ಹೂಂ..., ಇನ್ನೂ ಯಾಕೆ ಕಣ್ಣು ಬಾಯಿ ಬಿಟ್ಟು ನೋಡುತ್ತೀ? ಇಪ್ಪತ್ತೈದು ರೂಪಾಯಿ ದಂಡ ಹಾಕಿ ನಡೆ ಇಲ್ಲಿಂದ'' ಸಿಡಿಲು ಬಡಿದಂತಾಗಿ ಆನಂದನ ತಲೆಯಲ್ಲಿ ಬೆವರು ಇಳಿಯುತ್ತಾ ಬಂತು. ತುಂಬಿದ ಸಭೆಯಲ್ಲಿ ಸ್ವಾಮಿ ಜೊತೆ ಸುಳ್ಳು ಹೇಳಿದಕ್ಕಾಗಿ ಎಲ್ಲರೂ ಅವನಿಗೆ ಛೀ ಥೂ ಎಂದು ಬೈದರು.

''ಅಯ್ಯೊಪ್ಪಾ ದೇವರೇ ಒಂದು ಸಿಂಗಲ್ ಚಾ ಕುಡಿವಾ ಎಂದರೆ ನನ್ನ ಕಿಸೆಯಲ್ಲಿ ಮುಕ್ಕಾಲು

ಇಲ್ಲವಲ್ಲಾ ಸ್ವಾಮೀ? ಹಾಗಿರುವಾಗ ಇಷ್ಟೊಂದು ರೂಪಾಯಿಯನ್ನು ನಾನು ಎಲ್ಲಿಂದ ತರಲಿಯಪ್ಪಾ? ದಮ್ಮಯ್ಯ ಸ್ವಾಮಿಗಳೇ ನನ್ನನ್ನು ಕ್ಷಮಿಸಿ''

''ಯಾವತ್ತಿಗೂ ಹೇಳಿದ ಮಾತನ್ನು ಹಿಂದಕ್ಕೆ ಪಡೆಯುವವ ನಾನಲ್ಲ. ಸೂರ್ಯ ಮುಳುಗುವುದರೊಳಗೆ ದಂಡ ಹಾಕದಿದ್ದಲ್ಲಿ ಈ ನನ್ನಮ್ಮ ದೇವಿಯೇ ನಿನ್ನನ್ನು ನೋಡಿಕೊಳ್ಳುವಳು ಎಂದು ನೆನಪಿನಲ್ಲಿಟ್ಟುಕೊ'' ಕೈ ತೋರಿಸಿ ಅವಲಕ್ಷಣ ಹೇಳಿಸಿದ ಗಾದೆಯಂತಾಯಿತು ಆನಂದನ ಗತಿ.

''ಆಗಲಿ ಮತ್ತೇನು ಮಾಡುವುದು? ಯಾರಿಂದಲಾದರೂ ಸಾಲ ಕೇಳಿ ಕಾಸು ತರುತ್ತೇನೆ ಸ್ವಾಮಿ'' ಎಂದು ಅಲ್ಲಿಂದ ಓಡಿಕೊಂಡೇ ಹೋದ.

ಸನ್ಯಾಸಿಯ ಕಾರಣಿಕ ಊರೆಲ್ಲಾ ಬಾಯಿಯಿಂದ ಬಾಯಿಗೆ ಹರಡುತ್ತಾ ಹೋಯಿತು. ಅಂದಿನಿಂದ ಯಾರ ಮನೆಯಲ್ಲಿ ಯಾವುದೇ ಕಾರ್ಯ ನಡೆದರೂ ನೈವೇದ್ಯದ ಒಂದು ಪಾಲು ರಂಗನಿಗೆ ಬರುತ್ತಿತ್ತು. ಹಲವು ಸಲ ಅವನು ಬರಿ ಹೊಟ್ಟೆಯಲ್ಲಿ ಮಲಗಿದ್ದೂ ಇದೆ.

ಕೈಯಲ್ಲಿ ನಾಲ್ಕು ಕಾಸು ಕುಣಿಯಲು ಶುರುವಾದಾಗ ರಂಗ ಸನ್ಯಾಸಿ ವೇಷವನ್ನು ಬದಲಿಸುವ ವಿಷಯವನ್ನೇ ಮರೆತುಬಿಟ್ಟ. ಕಾಸು ಎಂದರೆ ಕಂಬವೂ ಕೈಚಾಚುವ ಈ ಕಾಲದಲ್ಲಿ ತಾನಾಗಿ ಕಾಲಬುಡಕ್ಕೆ ಬಂದ ಭಾಗ್ಯವನ್ನು ಯಾರಾದರೂ ಬೇಡ ಹೇಳಿಯಾರಾ? ಹೇಗೂ ಈ ಕಾವಿ ಬಟ್ಟೆಯ ಧರಿಸು ಧರಿಸಿಯಾಗಿದೆ. ಇನ್ನು ಇದನ್ನು ಕಳಚಿ ಹಾಕುವ ಮುನ್ನ ಒಂದು ಗಂಟು ಏನಾದರೂ ಕಟ್ಟಿಕೊಂಡು ಮನೆಗೆ ಹೋಗಿ ಬಿಟ್ಟರೆ ಆಯಿತಲ್ಲಾ? ನನ್ನಮ್ಮನಿಗೂ ಆಗ ''ತನ್ನ ಮಗ ಮೈ ಬಗ್ಗದವ ಕೆಲಸ ಕಳ್ಳ ಏನೂ ಅಲ್ಲ'' ಎಂದು ಖುಶಿಯಾಗುತ್ತೆ. ಹೀಗೆಲ್ಲಾ ನೆನೆದ ರಂಗನಿಗೆ ಸಂತೋಷದಲ್ಲಿ ಮೈ ನವಿರೆದ್ದಿತು. ಆಮೇಲೆ ಅವನ ಗೆಳೆಯರು ಒಬ್ಬೊಬ್ಬರೇ ಮುಂದೆ ಬಂದರೂ ಅವರ ಪರಿಚಯವೇ ಇಲ್ಲದಂತೆ ನಟಿಸಿದ.

ಅಟ್ಟೆಕಾಲು ಮೋನಪ್ಪ, ಪಾದೆಕಲ್ಲು ಪದ್ಮಕ್ಕ, ಕೊಗ್ಗ ನಾಯ್ಕ, ಉಪ್ಪಿನ ಕೋಟೆಯ ಅನ್ನಪ್ಪ ಇವರೆಲ್ಲಾ ಬಂದು ಅವರವರ ಕಷ್ಟ ಸುಖ ಹೇಳಿಕೊಂಡು ತಕ್ಕ ಪರಿಹಾರವನ್ನೂ ಪಡೆದುಕೊಂಡು ಹೋದರು. ಆದರೆ ಶಿವಣ್ಣನಿಗೆ ಮಾತ್ರ ಇನ್ನೂ ಅವನ ಮೇಲೆ ಸಂಶಯ. ಅದರ ಜೊತೆಗೆ ನಮ್ಮ ಆಟಕ್ಕೆ ಅಡ್ಡಿ ಮಾಡಲೆಂದೇ ಬಂದವ ಎಂಬ ಸಿಟ್ಟು. ಆಗಾಗ ಕಂಬದ ಮರೆಯಲ್ಲಿ ಅಡಗಿಕುಳಿತು ಬೈರಾಗಿಯ ನಡತೆಯನ್ನು ಓರೆ ಕಣ್ಣಲ್ಲಿ ನೋಡುತ್ತಿದ್ದ.

ಅವನು ಮಾತನಾಡುವ ರೀತಿ ನೋಡಿದರೆ ಒಂದಿಷ್ಟೂ ಸುಳ್ಳು ಮಾತು ಇಲ್ಲ. ಆದರೂ ಅವನನ್ನೊಮ್ಮೆ ಇಲ್ಲಿಂದ ಗಡಿ ದಾಟಿಸಿ ಬಿಡಬೇಕು ಎಂಬ ಛಲ ಶಿವಣ್ಣನಿಗೆ. ಯಾವುದಕ್ಕೂ ಸಹಾಯಕ್ಕಿರಲಿ ಎಂದು ಸೀದಾ ಹೋಗಿ ಸಾಧ್ಮಾರ್ ಸೋಂಪನನ್ನು ನೋಡಿದ. ಈ ಸೋಂಪ ಆದರೂ ಏನು? ಬರೀ ಅವಸರ ಪೂಜಾರಿ. ಇವನಿಗೆ ಶಿವಣ್ಣ ಹೇಳಿದ್ದನ್ನು ಕೇಳಿದ ಕೂಡಲೇ ಕರುವಿನ ಕಿವಿಗೆ ಗಾಳಿ ಹೊಕ್ಕಂತಾಯಿತು. ಹಿಂದೆ ಮುಂದೆ ಎಂದು ಒಂದನ್ನೂ ನೋಡದೆ ತನ್ನ ಬೆನ್ನಲ್ಲೇ ಕಾವಲಿಗಿರುವ ಬಂಟರೊಂದಿಗೆ ಬೇಗ ಬೇಗ ಮಂಟಪದತ್ತ ನಡೆದ. ಬಲ ಕೈಗೆ ಕಟ್ಟಿಹಾಕಿದ್ದ ವಾಕಿಂಗ್ ಸ್ಟಿಕ್ ಹಿಡಿದುಕೊಂಡು ಎಡಕೈಯಲ್ಲಿ ಕಚ್ಚೆ ಹಾಕಿ ಉಟ್ಟಿದ್ದ ದೋತಿಯ ತುದಿಯನ್ನು ಎತ್ತಿ ಹಿಡಿದುಕೊಂಡು ಅವಸರ ಅವಸರವಾಗಿ ಹೆಜ್ಜೆ ಹಾಕುತ್ತಿದ್ದ. ಹಿಂದೆ ಇದ್ದ ಪಹರೆಯವರೂ ಅವನಿಗೆ ಸರಿಯಾಗಿ ನಡೆಯುತ್ತಿದ್ದರು. ಅವರ ಪೈಕಿ ಇದ್ದ ಓರ್ವ ಬಂಟ ಬಿಡಿಸಿದ ಕೊಡೆಯನ್ನು ವಾಡಿಕೆಯಂತೆ

ಸಾಹುಕಾರನ ನೆತ್ತಿಯ ಮೇಲೆ ಹಿಡಿದುಕೊಂಡಿದ್ದ. ಇದಕ್ಕೆ ಬಿಸಿಲಾಗಲಿ ಅಲ್ಲದಿದ್ದರೆ ಮಳೆಯೇ ಸುರಿಯಬೇಕೆಂದೇನೂ ಇಲ್ಲ. ತಂಪು ಹವೆಯಲ್ಲೂ ಇದು ಕಡಂಜನ ತತ್ತರ ಕೊಡೆಯಂತೆ ಸೋಂಪನ ಕೆಲಸದವನ ಕೈಯಲ್ಲಿರುತ್ತದೆ.

ಪೊದೆಯಂತಿದ್ದ ಮರ, ಕಾಟು ಸಸಿಗಳ ಮಧ್ಯೆ ಅರಳಿದ್ದ ಬಿಳಿ ಕೊಡೆ ಬರುತ್ತಿರುವದನ್ನು ದೂರದಿಂದಲೇ ನೋಡಿದ ರಂಗ. ಆ ಕೂಡಲೇ ಅವನ ಮಂಡೆಗೆ ತಿಳಿಯಿತು. ಈ ಕೊಡೆಯವ ಯಾರು ಎಂದು. ಒಂದಲ್ಲ ಒಂದು ದಿನ ಇವನು ಇಲ್ಲಿಗೆ ಬಂದೇ ತೀರುವವ, ಬರದೆ ಖಂಡಿತ ಇರಲಾರ ಎಂಬ ಭಯವೂ ಅವನಿಗಿತ್ತು. ''ಛೇ ಈ ಕನೆಮಂಜ ಇಷ್ಟು ಬೇಗವೇ ಬರಬೇಕಾ? ಇವನಿಗೆ ಏನಿದೆ ಲೆಕ್ಕ ತೆಗೆಯುವಂತಹ ಕೆಲಸ ಇಲ್ಲಿ? ದೇವರೇ ನನ್ನ ಕೈಯಲ್ಲಿ ಒಂದಿಷ್ಟು ಕಾಸಾದರೂ ಕೊಟ್ಟಿದ್ದರೆ? ಈ ಕೆಂಗುಡನಿಂದಾಗಿ ಇನ್ನು ಏನೆಲ್ಲಾ ನಡೆಯುತ್ತೊ ಏನೊ ಯಾರಿಗೆ ಗೊತ್ತು? ಹಿಂದೊಮ್ಮೆ ಊರಿಗೆ ಬಂದಿದ್ದ ಠಕ್ಕ ಸನ್ಯಾಸಿಯನ್ನು ಹಿಡಿದು ಗೋಂದಿನಲ್ಲಿ ಅಂಟಿಸಿಕೊಂಡಿದ್ದ ಗಡ್ಡ ಮೀಸೆಯನ್ನು ಎಳೆದು ತೆಗೆದು ಅವನ ಬರಿ ಮೈಗೆ ಚಪ್ಪಲಿ ಹಾರ ಹಾಕಿ ಊರೆಲ್ಲಾ ಮೆರವಣಿಗೆ ಮಾಡಿಸಿದವನಲ್ಲವಾ ಈ ಪಟ್ಟಿಂಗ? ಅಂದು ನಾನು ಎಷ್ಟೊಂದು ಖುಶಿಯಲ್ಲಿರಲಿಲ್ಲ? ಊರವರೊಟ್ಟಿಗೆ ಮೆರವಣಿಗೆಯಲ್ಲಿ ಸೇರಿ ಎಷ್ಟು ನಕ್ಕು ನಲಿದು ಕುಣಿದಿಲ್ಲ? ಆ ಚಾಣಕ್ಯ ಸನ್ಯಾಸಿಯನ್ನು ನಾವೇನು ಸ್ವಲ್ಪವಾ ಆಟವಾಡಿಸಿದ್ದು? ಈಗ ನನಗೂ ಅಂತಹದೇ ಗತಿಯಾದರೆ? ಛೇ! ಛೇ!.., ಇವನ ಕೈಯಿಂದ ತಪ್ಪಿಸಿಕೊಳ್ಳುವ ಎಂದರೆ ಬೇರೆ ದಾರಿಯೂ ಇಲ್ಲವಲ್ಲ ಇಲ್ಲಿ? ಅಯ್ಯೊಪ್ಪೋ... ನನ್ನ ಕತೆ ಇಷ್ಟಕ್ಕೇ ಮುಗಿಯುವಂತಾಯಿತಲ್ಲಾ?' ರಂಗ ಮನಸಿನಲ್ಲಿಯೇ ಹೇಳಿಕೊಂಡು ಚಿಂತೆಯಲ್ಲಿ ಬಿದ್ದ. ಅವನ ಹೃದಯದ ಶ್ವಾಸ ತಮಟೆಯಂತೆ ಬಡಿಯುತ್ತಿತ್ತು.

''ಏಳಿರಾ... ಎಲ್ಲರೂ ಮೇಲೆ ಎದ್ದು ನಿಲ್ಲಿರಾ! ಸಾಹುಕಾರರು ಬಂದರು, ಸಾಹುಕಾರರು ಬಂದರು ದಾರಿ ಬಿಡಿರಾ...'' ಎಂದು ಹೇಳಿದ ಕೆಲಸದವ ಅಲ್ಲಿ ಇದ್ದವರನ್ನು ಅತ್ತಿತ್ತ ಓಡಿಸಿದ. ಇನ್ನೇನು ಮಂಟಪದೊಳಗೆ ನುಗ್ಗಲು ಎರಡೇ ಹೆಜ್ಜೆ ಇದೆ ಎನ್ನುವಾಗ ಸೊಂಟದ ಮೇಲೊಂದು ಕೈ ಊರಿ ತಲವಾರು ಹಿಡಿದ ಸಿಪಾಯಿಯ ಭಂಗಿಯಲ್ಲಿ ನಿಂತುಕೊಂಡ ಸೋಂಪ. ಅವನ ಹಿಂದಿನಿಂದ ಛತ್ರಿಯವನೂ ಇದ್ದ. ಬಿಡದೆ ಬೆನ್ನಲ್ಲೇ ಬರುತ್ತಿದ್ದವರೂ ಕಬ್ಬಿನ ಗದ್ದೆಗೆ ಹಾಕುವ ಬೇಲಿಯಂತೆ ಸುತ್ತಲೂ ನಿಂತರು. ಸಾಹುಕಾರ ಗತ್ತಿನಲ್ಲಿ ತಲೆ ಎತ್ತಿ ಎದೆ ಸೆಟೆದು ಎಲ್ಲರನ್ನೂ ಒಮ್ಮೆ ಕಣ್ಣು ಬಿಟ್ಟು ನೋಡಿದ. ಭಯದ ಕಣ್ಣಲ್ಲಿ ತನ್ನನ್ನೂ ತನ್ನ ಪೌರುಷವನ್ನೂ ನೋಡುತ್ತಾ ನಿಂತಿದ್ದವರನ್ನು ನೋಡಿದ ಸೋಂಪನ ದೌಲತ್ ಇನ್ನಷ್ಟು ಹೆಚ್ಚಾಯಿತು.

''ಏಯ್... ಯಾವ ಊರಿನವನೊ ನೀನು? ಇಲ್ಲಿಗೆ ಯಾಕೆ ಬಂದಿದ್ದಿ?'' ಎಂದು ತಾತ್ಸಾರದಿಂದ ಕೇಳಿದ. ಅವನ ಕೆಂಗಣ್ಣ ಹಕ್ಕಿಯಂತಹ ಕೆಂಪಾದ ಕಣ್ಣು, ನರಸಿಂಹಾವತಾರದಂತಹ ಉಗ್ರರೂಪ ನೋಡಿದ ರಂಗ ಹೆದರಿ ನಿಂತಲ್ಲೇ ಚಳಿ ಹಿಡಿದವನಂತೆ ನಡುಗಿದ. ಸೋಂಪನಿಗೆ ಉತ್ತರ ಕೊಡೋಣ ಎಂದರೆ ನಾಲಗೆ ಹೊರಳದೆ ಮರಗಟ್ಟಿ ಹೋಗಿದೆ. ''ಏನು...? ನಾನು ಹೇಳಿದ್ದು ಕೇಳಿಸಲಿಲ್ಲವಾ ನಿನಗೆ? ರಂಗ ಉಗುಳು ನುಂಗಿ ಮುಖದಲ್ಲಿ ನಗು ತಂದುಕೊಂಡ.

''ಹತ್ತೂರು ತಿರುಗುವ ನನ್ನಂತಹವನಿಗೆ ಯಾವ ಊರಾದರೇನು ಸ್ವಾಮಿ? ಸದ್ಯಕ್ಕಂತೂ ನಾನಿದ್ದ ಊರೇ ನನ್ನದು'' ಎಂದು ನರಳುವಂತೆ ಹೇಳಿದ.

''ಏಯ್... ಸಾಕು ನಿನ್ನ ಸೊಕ್ಕಿನ ಮಾತು. ಊರವರ ಕಣ್ಣಿಗೆ ಮಣ್ಣೆರಚಿ, ಮಂಗ ಮರುಳು

ಮಾಡಿ ಸುಲಭದಲ್ಲಿ ಹಣಗಳಿಸುವ ಎಂದು ನೆನೆದಿಯಾ? ಹಾಗೆಲ್ಲಾ ನಿನ್ನ ಗಿಲೀಟು ಮಾತಿಗೆ ಮರುಳಾಗಲು ನಾವೇನು ಕುರಿಗಳಲ್ಲ. ಹೆಡ್ಡ, ಹಸುಗಳೂ ಅಲ್ಲ ತಿಳಿಯಿತಾ? ಈ ಸಾಹುಕಾರ ಸೋಂಪನ ಜೀವ ಒಂದು ಇದೆ ಎಂದಾದರೆ ನಿನಗೆ ದೊಗ್ಗುಸಲಾಮು ಹಾಕುವುದು ಬಿಡು ನೀನು ಹುಟ್ಟಿಯೇ ಇಲ್ಲ ಎಂದು ಮಾಡದಿದ್ದರೆ ಮತ್ತೆ ಹೇಳು..., ಏನೆಂದು ಎಣಿಸಿದ್ದಿ? ನನ್ನಲ್ಲಿ ಪೆದಂಬು ಮಾತಾಡ್ತಿಯಾ?'' ಅಂಗಿಯ ಕೈಯನ್ನು ಮೇಲೇರಿಸಿಕೊಂಡು ಅವನು ಮುಂದೆ ಮುಂದೆ ಬರುವಾಗ ಪಹರೆಯ ಬೇಲಿಯೂ ಮುಂದೆ ಬಂತು. ರಂಗನ ಗಂಟಲ ಪಸೆ ಆರಿತು. ಎದೆಯ ದಡದಡವೂ ನಿಂತಂತಾಯಿತು. ತುಟಿ ಆಡಿದರೂ ಬಾಯಿಯಿಂದ ಧ್ವನಿಯೇ ಹೊರಡುತ್ತಿಲ್ಲ. ಭಯದ ಬರದಲ್ಲಿ ಮೈ ಪರಚಿಕೊಳ್ಳುವ ಸ್ಥಿತಿಯಲ್ಲಿದ್ದ ಅವನ ತಲೆಗೆ ಒಂದು ಯುಕ್ತಿ ಹೊಳೆಯಿತು.

ಈ ಹಲ್ಕಟ್ ಸೋಂಪನ ಕಸಂಟ್ ಬುದ್ಧಿ ರಂಗನಿಗೆ ಚೆನ್ನಾಗಿ ತಿಳಿದಿತ್ತು. ''ಅರೇ! ಇದೇನು ಈ ಜಿಲೇಬಿ ಬರೀ ಕಹಿ'' ಎಂದು ಅವ ಹೇಳಿದರೂ ಉಳಿದವರು ''ಹೌದಲ್ಲಾ, ಅದು ಏನೋ, ಈ ಜಿಲೇಬಿ ಬರೀ ಕಹಿ ವಿಷದಂತೆ ಉಂಟು'' ಎಂದು ವಾದಕ್ಕಿಳಿಯ ಕೂಡದು. ಅಂತಹ ಹೊಗಳು ಭಟ್ಟರಿಗೆ ಸೋಂಪನ ನ್ಯಾಯದಲ್ಲಿ ಯಾವತ್ತೂ ರೀಯಾಯಿತಿ ಅಲ್ಲದಿದ್ದರೆ ಕ್ಷಮೆ ಕಟ್ಟಿಟ್ಟಂತೆ. ವಿಷಯ ಹೀಗಿರುವಾಗ ನಾನಾದರೂ ಯಾಕೆ ಇವನನ್ನು ಹೊಗಳಬಾರದು? ಇನ್ನೊಂದು ಗಳಿಗೆಯಲ್ಲಿ ಕತ್ತು ಹಿಸುಕುತ್ತಾನೆ ಎನ್ನುವಾಗ ಅವನನ್ನು ತಡೆಯುವವನಂತೆ ಕೈ ಮೇಲಕ್ಕೆತ್ತಿದ. ಆಮೇಲೆ ಜಡೆ ಬಿಡಿಸಿದ ಸರ್ಪದಂತೆ ಕೈ ಬೀಸಿಕೊಂಡು ''ಆ... ಆ... ಆ... ಜ್ವಾಲಾಮುಖಿ, ಜ್ವಾಲಾಮುಖಿ ಶಾಂತವಾಗು, ಶಾಂತವಾಗು, ಸೂತಕದ ಮೈಲಿಗೆ ಇನ್ನೂ ಕಳೆದಿಲ್ಲ. ಆದರೂ ಊರವರ ಮೇಲೆ ಅದೇನು ಅಭಿಮಾನ, ಅಂತಃಕರಣವಪ್ಪಾ ನಿನ್ನದು? ಆ... ಆ... ಎದುರಲ್ಲೊಂದು ಒಡಲಲ್ಲೊಂದು ಇಲ್ಲದ ನಿಸ್ವಾರ್ಥ ಮನುಷ್ಯ ಎಂದರೆ ಸತ್ಯಕ್ಕೂ ನೀನೇ ನೋಡು'' ಎಂದು ಮೆಲ್ಲವಾದರೂ ಎಲ್ಲರಿಗೂ ಕೇಳುವಂತೆ ಹೇಳಿದ. ಹಾವು ತುಳಿದಂತಾದ ಸೋಂಪ ನಿಂತಲ್ಲೇ ಮರಗಟ್ಟಿ ಹೋದ. ಅವನ ಜಲ್ಸ್, ಜಬರ್‌ದಸ್ತ್ ಎಲ್ಲ ಒಮ್ಮೆಲೆ ತಣ್ಣಗಾಯಿತು. ಮಂಟಪದ ಮೆಟ್ಟಿಲ ಮೇಲಿದ್ದ ಕಾಲನ್ನು ಮೆಲ್ಲ ಹಿಂದಕ್ಕೆಳೆದುಕೊಂಡು ಕಣ್ಣು ಪಿಳಿ ಪಿಳಿ ಮಾಡುತ್ತಾ ಸನ್ಯಾಸಿಯನ್ನು ನೋಡಿದ. ಇದನ್ನು ನೋಡಿದ ಕೂಡಲೇ ರಂಗನ ಗಂಟಲಲ್ಲಿ ಕಟ್ಟಿದ್ದ ಸ್ವರವೂ ಮೇಲೆದ್ದಿತು. ಈಗ ಗಟ್ಟಿಯಾಗಿ ಮಾತನಾಡಲು ದಾರಿ ಸುಗಮವಾಯಿತು.

''ಏನಪ್ಪಾ ನಿನ್ನನ್ನು ಹೆತ್ತವಳು ನಿಮ್ಮೆಲ್ಲರನ್ನೂ ಬಿಟ್ಟು ದೇವರ ಪಾದ ಸೇರಿದಳು. ಅವಳು ಕಣ್ಮು ಮುಚ್ಚಿ ಇನ್ನೂ ಹತ್ತು ದಿನ ಕೂಡಾ ಕಳೆದಿಲ್ಲ ಅಲ್ಲವಾ? ಹಾಗಾದರೆ ನಿನ್ನ ಸೂತಕದ ಗಡು ಕಳೆದಿಲ್ಲ ಎಂದಾಯಿತು. ಅದಾಚೆ ಸಾಯಲಿ ಈ ಮಂಟಪದೊಳಗೆ ನಾನು ದೇವಿಯನ್ನು ಪ್ರತಿಷ್ಠೆ ಮಾಡಿದ್ದೇನೆ ಎಂದಾದರೂ ನಿನಗೆ ತಿಳಿದಿಲ್ಲವಾ? ಅಮ್ಮ ದೇವಿಗೆ ಮೈಲಿಗೆ ಯಾದರೆ ಮತ್ತೆ ನಿನ್ನ ಸಂತಾನಕ್ಕೂ ಒಳ್ಳೆಯದಲ್ಲ ಎಂದು ತಿಳಿದುಕೊ'' ಇಷ್ಟು ಕೇಳಿದ ತಕ್ಷಣ ಸೋಂಪನ ಅಹಂಕಾರ ಪೌರುಷವೆಲ್ಲ ಒಮ್ಮೆಲೆ ಉಡುಗಿ ಹೋಯಿತು.

''ಛೇ...! ಇದೆಂತಹ ವಿಚಿತ್ರವಪ್ಪ? ಈ ಸ್ವಾಮಿಗಳು ಮುಖ ನೋಡಿಯೇ ಲಕ್ಷಣ ಹೇಳುತ್ತಾರಲ್ಲಾ? ಇಲ್ಲದಿದ್ದರೆ ನನ್ನ ತಾಯಿ ಸತ್ತ ಸಂಗತಿ ಇವರಿಗೆ ಹೇಗೆ ಗೊತ್ತು? ಎಲಾ... ಕರ್ಮವೇ, ಈ ಶಿವಣ್ಣ ಒಬ್ಬ ಕರೆದ ಎಂದು ನಾನಾದರೂ ಯಾಕೆ ಹೀಗೆ ಹುಚ್ಚುಕಟ್ಟಿಕೊಂಡು ಓಡಿ ಬರಬೇಕಗಿತ್ತು? ''ಶಹಬಾಸ್ ಸಾಹುಕಾರ ಸೋಂಪಣ್ಣ, ಶಹಬಾಸ್'' ಎಂದು ಊರವರ ಬಾಯಿಯಿಂದ

ಹೊಗಳಿಕೆ ಕೇಳಬೇಕೆಂದಿದ್ದೆ. ಆದರೆ ಈಗ ನನ್ನ ಹಾರಾಟವೂ ಇಳಿಯಿತು. ತಲೆಯೂ ತಗ್ಗಿಸಬೇಕಾಯಿತಲ್ಲಾ? ಅಷ್ಟೇ ಅಲ್ಲದೆ ಈ ಸೂತಕದ ದಿನದಲ್ಲೇ ಇಂತಹ ಮಹಾತ್ಮರನ್ನು ಕೀಳಾಗಿ ಧಿಕ್ಕರಿಸಿ ಮಾತನಾಡಿದ್ದು ನನ್ನದು ಮಹಾ ತಪ್ಪಾಯಿತು. ಈಗ ನಾನು ಏನು ಮಾಡಲಿ ದೇವರೇ? ಮನಸಲ್ಲೇ ಮಾತನಾಡಿಕೊಂಡ ಸೋಂಪ ''ಸ್ವಾಮೀ... ನಿಮ್ಮ ಮಹಿಮೆಯನ್ನು ಅರಿಯದೆ ದುಡುಕಿ ಮಾತನಾಡಿದ ನನ್ನನ್ನು ಕ್ಷಮಿಸಿ ಸ್ವಾಮೀ... ಕ್ಷಮಿಸಿ'' ಎಂದು ದಿಡಿಲ್ಲಾಂತ ಅವನ ಕಾಲಿಗೆ ಬಿದ್ದ. ''ಓಪ್ಪ ದೇವರೇ ಸೋಂಪ ಬೀಸಿದ ದೊಣ್ಣೆಯ ಪೆಟ್ಟಿನಿಂದ ಹೇಗೂ ತಪ್ಪಿಸಿಕೊಂಡೆನಲ್ಲಾ? ಇನ್ನು ಇವನನ್ನು ಮಂಗಮಾಡಿ ಆದಷ್ಟು ಕಾಸು ಹಿಂಡುವ ದಾರಿ ನೋಡಬೇಕು'' ರಂಗ ಮೆಲ್ಲನೆ ತನ್ನ ಗಡ್ಡ ಸವರುತ್ತಾ ತುಟಿಯ ಮರೆಯಲ್ಲೇ ನಕ್ಕುಬಿಟ್ಟ. ''ನಿನ್ನನ್ನು ಕ್ಷಮಿಸುವವ ನಾನಲ್ಲಪ್ಪ. ಹಿಂದಿನಿಂದಲೂ ನಾನು ನಂಬಿಕೊಂಡು ಬಂದ ಈ ಅಮ್ಮನೇ ನಿನ್ನನ್ನು ಕ್ಷಮಿಸುವವಳು. ಅವಳು ಸಂತುಷ್ಟಳಾಗುವಷ್ಟು ದುಡ್ಡನ್ನು ತಪ್ಪು ಕಾಣಿಗೆ ಹಾಕಿ ನೀನೇ ಅವಳನ್ನು ಒಲಿಸಿಕೊಂಡರೆ ಸಾಕು'' ಬಿದ್ದಲ್ಲಿಂದಲೇ ರಂಗನ ಕಾಲು ಹಿಡಿದಿದ್ದ ಸೋಂಪ, ಈಗ ದಡಕ್ಕನೆ ಎದ್ದು ನಿಂತ.

ಈ ಜೀವ ಸಂಕಟದ ನಡುವೆಯೂ ಸೋಂಪ ತನ್ನ ಸಾಹುಕಾರತನ ತೋರಿಸಲು ಅವಸರ ಮಾಡಿದ. ಜುಬ್ಬದ ಕಿಸೆಯಲ್ಲಿದ್ದ ಪಾಕೀಟನ್ನು ಹೊರಗೆ ತೆಗೆದ. ಅವನ ಅವತಾರವನ್ನು ಕಣ್ಣು ಬಾಯಿ ಬಿಟ್ಟು ನೋಡುತ್ತಿದ್ದವರ ಎದುರಲ್ಲಿ ನೋಟುಗಳನ್ನು ಎಣಿಸಲು ಆರಂಭಿಸಿದ. ಹತ್ತರ ಒಂದೊಂದೇ ನೋಟನ್ನು ಆಸರೆ ಕೊಡೆಯವನ ಕೈಗೆ ಕೊಟ್ಟ. ಇನ್ನೂರು ರೂಪಾಯಿ ಆದ ಕೂಡಲೇ ಅವನ ಕೈಯಿಂದ ಹಿಂದೆ ತೆಗೆದುಕೊಂಡ. ಅಷ್ಟು ದೂರದಿಂದಲೇ ಅದನ್ನು ದೇವಿಯ ಮುಂದೆ ಇಟ್ಟು ಉದ್ದಂಡ ಬಿದ್ದು ಕೆನ್ನೆ ಕೆನ್ನೆಗೆ ಹೊಡೆದುಕೊಂಡ. ಇದನ್ನೆಲ್ಲಾ ಅರಳಿದ ಕಣ್ಣಲ್ಲಿ ನೋಡುತ್ತಿದ್ದ ರಂಗ. ಒಮ್ಮೆಲೇ ಕುದುರಿ ಬಂದ ತನ್ನ ಭಾಗ್ಯವನ್ನು ಮನದಲ್ಲೇ ಕೊಂಡಾಡಿದ.

ಸೋಂಪ ಈಗ ಮಂಟಪದ ಸುತ್ತ ಒಂದು ಸುತ್ತು ಹೊಡೆದು ಬಂದ. ಅದರ ಮೆಟ್ಟಿಲ ಕಂಬವನ್ನು ಪರೀಕ್ಷಿಸುವವನಂತೆ ಹೊಡೆದು ನೋಡಿದ. ಅವನ ಕಣ್ಣಿಗೆ ಇಂದು ಅದೆಲ್ಲ ಬರೀ ಕುಂಬುಕಲ್ಲಿನಂತೆ ಕಂಡಿತು. ದೇವಿಗೆ ಬರುವ ಕಾಣಿಕೆ ದುಡ್ಡನ್ನೂ ಜೋಪಾನ ಮಾಡಲು ಆಗದಂತಹ ಸ್ಥಿತಿ ಇದೆಯಲ್ಲಾ ಎಂದು ತಿಳಿದುಕೊಂಡ.

''ಸ್ವಾಮೀ... ನಿಮ್ಮಲ್ಲಿ ನನ್ನ ಒಂದು ಬಿನ್ನಹ. ಅದು ಏನು ಎಂದರೆ, ನಿಮ್ಮಂತಹ ಪುಣ್ಯಾತ್ಮರು ಈ ಪಾಳು ಬಿದ್ದ ಮಂಟಪದಲ್ಲಿ ಇರುವುದು ನಮ್ಮೂರಿನ ಎಲ್ಲರಿಗೂ ನಾಚಿಕೆಯ ಸಂಗತಿಯಲ್ಲವೇ? ಆದುದರಿಂದ ನೀವು ಅಪ್ಪಣೆ ಕೊಡುತ್ತೀರಿ ಎಂದಾದರೆ ನಮ್ಮ ತೋಟದ ಮನೆಯಲ್ಲಿ ನಿಮಗೆ ಬೇಕು ಬೇಕಾದಂತಹ ಏರ್ಪಾಡು ಮಾಡಿ ಕೊಡುವೆ. ದಯವಿಟ್ಟು ಆಗೋಲ್ಲಾಂತ ಹೇಳಬೇಡಿ ಸ್ವಾಮೀ'' ರಂಗ ಒಮ್ಮೆಲೆ ದಂಗಾಗಿ ಹೋದ. ''ಓ... ದೇವರೇ... ಈ ಕನೆ ಮುಳ್ಳು ಕುಟುಂಬನೊಟ್ಟಿಗೆ ಬದುಕಲಿಕ್ಕಿದೆಯಾ? ಇಲ್ಲಪ್ಪಾ, ನನ್ನಿಂದೇನೂ ಇದಾಗದು. ನನಗೆ ಇವನ ತೋಟದ ಮನೆ ಬಿಡಿ ಅರಮನೆ ಕೊಡ್ತೇನೆಂದರೂ ನನಗೆ ಬೇಡವೇ ಬೇಡ. ಈ ಅರಳು ಬೆಂಕಿಯ ಬೇಗುದಿಯಿಂದ ಆದಷ್ಟು ದೂರ ಇದ್ದರೇನೇ ನನಗೆ ಒಳಿತು. ಸೋಂಪನ ಸಹಾಯ ಪಡೆಯಲು ರಂಗ ಹಿಂಜರಿದ. ಆದರೂ ಅದನ್ನು ತೋರಿಸದೆ ''ನಿನ್ನ ಅಂತಕರಣ ನನಗೆ ಎಲ್ಲಾ ತಿಳಿದಿದೆಯಪ್ಪಾ. ನನ್ನಂತಹವರು ಇಂತಹ ಜಾಗದಲ್ಲಿ ಇರುವುದೆಂದರೆ ನಿನಗಾಗಲಿ, ನಿನ್ನ ಊರಿನ ಜನರಿಗಾಗಲಿ ನಾಚಿಕೆ ಎಂಬುದೂ ತಿಳಿದಿದೆ. ಆದರೆ ಏನು ಮಾಡುವುದು ಹೇಳು ನೋಡುವಾ? ಸರ್ವ ಸಂಗ ತ್ಯಾಗ ಮಾಡಿದ ನನಗೆ ಇದಕ್ಕಿಂತಲೂ

ಬೇರೆ ಐಶ್ವರ್ಯ ಯಾಕೆ ಬೇಕಪ್ಪಾ? ಅದು ಧರ್ಮವೂ ಅಲ್ಲ. ಹಾಗೂ ನಿನಗೆ ನನ್ನ ಮೇಲೆ ಅಭಿಮಾನ ಉಂಟೂ ಎಂದಾದರೆ ಒಂದು ಕಾಣಿಕೆಯ ಡಬ್ಬಿ ತಂದೊಪ್ಪಿಸಿದರೆ ಸಾಕು. ಕೂಡಿದ ದುಡ್ಡಿನಲ್ಲಿ ದೇವಿಗೊಂದು ಗುಡಿ ಕಟ್ಟಿಸಬೇಕು ಎಂಬ ಆಲೋಚನೆ ನನ್ನದು. ಆದರೆ ಬಟ್ಟಾ ಬಯಲಿನಂತಿರುವ ಈ ಮಂಟಪದಲ್ಲಿ ಎಲ್ಲಿಂತ ದುಡ್ಡು ಅಡಗಿಸಿಡುವುದು ಎಂದೇ ತಿಳಿಯೋದಿಲ್ಲ'' ರಂಗ ನಯವಾಗಿ ಈ ಮಾತು ಹೇಳಿದ. ಕೊನೆಗೂ ಸೋಂಪ ಮಂಟಪದ ರಿಪೇರಿ ಕೆಲಸಕ್ಕೆ ಒಪ್ಪಿಗೆ ಪಡೆದು ಕಣ್ಣುಕಟ್ಟಿನ ತನ್ನ ಉದಾರ ಬುದ್ಧಿಯನ್ನು ತೋರಿಸಿದ.

''ನೀನು ಹೇಗೆ ಬೇಕಾದರೂ ಸತ್ತು ಹೋಗಾಚೆ ನನಗೇನು? ಅನ್ಯಾಯದಿಂದ ಮಾಡಿಟ್ಟ ಗಂಟು ಸ್ವಲ್ಪವಾದರೂ ಕರಗಿ ಹೋಗಲಿ'' ಎಂದು ಕಟಕಟ ಹಲ್ಲು ಕಡಿದುಕೊಂಡು ಮನಸಲ್ಲೇ ಹೇಳಿಕೊಂಡ ರಂಗ. ಸಿಡಿಲಿನಂತೆ ಗರ್ಜಿಸುತ್ತಾ ಬಂದ ಸೋಂಪ ಹಿಮಗಾಳಿಯಂತೆ ತಂಪಾಗಿ ಅಲ್ಲಿಂದ ಹೊರಟು ಹೋದ.

ರಾತ್ರಿ ಕಳೆದು ಹೊತ್ತು ಬೆಳಗಾಗುತ್ತಾ ಬಂತು. ಗಿಜಿಕ್ ಗಿಜಿಕ್ ಎಂದು ಗೆಜ್ಜೆಯ ಶಬ್ದಕ್ಕೆ ಮಲಗಿದ್ದ ರಂಗನಿಗೆ ಎಚ್ಚರಿಕೆ ಆಯಿತು. ಆಕಳಿಸುತ್ತಾ ಹೊರಗೆ ನೋಡುವಾಗ ಚೆನ್ನಯ್ಯನ ಎತ್ತಿನಗಾಡಿಯಲ್ಲಿ ಸಿಮೆಂಟಿನ ಚೀಲ ಬರುವುದು ಕಾಣಿಸಿತು. ಕೈಯಲ್ಲಿ ಟಾಪಿ ಹಿಡಿದ ಮೋಂತು ಪೊರ್ಬು ಜೊತೆಗಿದ್ದ. ಸ್ವತಃ ಸಾಹುಕಾರನೇ ಮುಂದೆ ನಿಂತು ಮಂಟಪಕ್ಕೆ ತೇಪೆ ಹಾಕಿಸಿದ. ಎಲ್ಲ ಕೆಲಸವೂ ಮುಗಿದ ಮೇಲೆ, ಜೇಡನ ಬಲೆಗಳನ್ನೆಲ್ಲಾ ತೆಗೆಸಿ, ಕಸ ಗುಡಿಸಿ ಶುಚಿ ಮಾಡಿಸಿದ. ಕಾಣಿಕೆ ಡಬ್ಬಿಯೊಟ್ಟಿಗೆ ಹಿತ್ತಾಳೆಯ ಕಾಲುದೀಪ, ದೇವರಿಗೆ ನೀರಿಡುವ ತಂಬಿಗೆಯೂ ಮತ್ತೊಂದು ತೀರ್ಥಕೊಡುವ ಚಮಚವೂ ತಂದ. ಇಷ್ಟೇ ಅಲ್ಲದೆ ಪೂಜೆಗೆ ಬೇಕಾದ ಆರತಿ, ಬತ್ತಿ, ಊದುಬತ್ತಿ, ಬೆಂಕಿ ಪೊಟ್ಟಣವೂ ಇತ್ತು. ಅವನ ಉಮೇದ್ ನೋಡಿದ ರಂಗನಿಗೆ ಹಿಂದೊಮ್ಮೆ ಆದ ಸಂಗತಿ ನೆನಪಿಗೆ ಬಂತು.

ತನ್ನ ಕುಟುಂಬದ ಮಾಧವನ ಮೇಲೆ ಸುಳ್ಳು ಕತೆ ಕಟ್ಟಿ ಅವನ ಪಾಲಿನ ಆಸ್ತಿಯನ್ನು ನುಂಗಿ ಹೆಂಡತಿ ಮಕ್ಕಳನ್ನು ಬೀದಿಗೆ ಹಾಕಿದ್ದ ಈ ಸೋಂಪ. ಊರಿನ ಗುರಿಕಾರರು ಒಟ್ಟು ಸೇರಿ ಪಂಚಾಯತಿ ಮಾಡಿ ಮಾದವನ ಪಾಲನ್ನು ''ನೀನು ಅವನಿಗೆ ಕೊಟ್ಟೇ ತೀರಬೇಕು'' ಎಂದು ಹೇಳುವಾಗ -

''ಪಾಲು ಗೀಲು ಎಲ್ಲಾ ಹಾಗಿರಲಿ ಹತ್ತು ರೂಪಾಯಿ ಕೊಡುವಾ ಎಂದರೂ ನನ್ನ ಕಿಸೆಯಲ್ಲಿ ದುಡ್ಡಿಲ್ಲ'' ಎಂದು ವಾದಿಸಿದ್ದ. ಏನೂ ಗತಿ ಇಲ್ಲದಂತಾದ ಮಾಧವ ಇದೇ ಮಂಟಪದಲ್ಲಿ ಸಂಸಾರ ಸಮೇತ ಬಂದು ಬಿದ್ದಿದ್ದ. ಅಲ್ಲಿಗೂ ಬಿಡದ ಸೋಂಪ ಕಂಬದ ಕಲ್ಲು ತಪ್ಪಿಸುವ ಸಾಧನೆಯನ್ನೂ ಮಾಡಿದ್ದ. ರಾತ್ರಿಯ ಹೊತ್ತಲ್ಲಿ ಕಲ್ಲು ಮಣ್ಣು ಎಸೆದು ಪ್ರೇತದ ಭಯ ಹುಟ್ಟಿಸಿದ್ದ. ತನ್ನ ಬಂಧುಗಳ ಸುಖವನ್ನೇ ನೋಡಲಾರದೆ ಒದ್ದು ತುಳಿದು ಉದ್ದಕ್ಕೆ ನಿಂತಿದ್ದ ಈ ರಾಕ್ಷಸ. ಇಂದಿನ ದಿನ ನಾನು ಹೇಳಿದ ಸುಳ್ಳು ಮಾತಿಗೆ ಎಷ್ಟೊಂದು ಬೆಲೆ ಕೊಡುತ್ತಿದ್ದಾನೆ. ಬೈರಾಗಿಗಳಿಗೆ ದುಡ್ಡು ಕಾಸಿನ ಅಗತ್ಯ ಏನುಂಟು ಎಂಬ ಬೊಂಡಾದರೂ ಬೇಡವಾ ಈ ಪೊಡುಂಬನಿಗೆ? ಅಂದು ತನ್ನ ಕೈಯಾರೆ ಒಡೆಸಿದ ಮಂಟಪಕ್ಕೆ ಅದರ ಎರಡು ಪಾಲಿನಷ್ಟು ಇಂದು ಖರ್ಚು ಮಾಡುತ್ತಿದ್ದಾನಲ್ಲಾ? ಮಾಡಲಿ, ಮಾಡಲಿ. ಹಸಿವು ತಾಳಲಾರದೆ ಒದ್ದಾಡುವವನ್ನು ಉಪವಾಸ ಕೆಡವಿ, ಹೊಟ್ಟೆ ತುಂಬಾ ಉಂಡವನಿಗೆ ಔತಣ ಬಡಿಸುವಂತಹ ಮಹಾ ಸಜ್ಜನ. ರಂಗ ಹಲ್ಲು ಕಡಿದುಕೊಂಡ.

ಊರೊಳಗೆ ಸನ್ಯಾಸಿ ಬಂದಂದಿನಿಂದ ರಂಗನ ಗೆಳೆಯರ ಉದಾಸೀನ ಮಾಯವಾಗಿದೆ.

ಅದಲ್ಲದೆ ದುಡಿಯುವುದರಲ್ಲೂ ಅವರಿಗೀಗ ಬಹಳ ಆಸಕ್ತಿ ಬಂದಿದೆ. ಸುಂದರ ಪೆಟ್ಟಿಗೆ ಮೋನಪ್ಪನ ಕಾರ್ಖಾನೆಯಲ್ಲಿ ಮರ ಹೊರುವ ಕೆಲಸಕ್ಕೆ ಸೇರಿದ್ದಾನೆ. ವಿಠಲ ತನ್ನ ಅಣ್ಣನ ಜೊತೆ ಗದ್ದೆಯ ಕೆಲಸ ಮಾಡುತ್ತಿದ್ದಾನೆ. ಇಬ್ಬರೂ ಬಿಡುವಾದಾಗಲೆಲ್ಲಾ ಮಂಟಪದಾಚೆ ಹೋಗಿ ಸ್ವಾಮಿಗಳಿಗೆ ಅಡ್ಡ ಬಿದ್ದು ಬರುತ್ತಿದ್ದರು. ಆದರೆ ಶಿವಣ್ಣ ಮಾತ್ರ ಇನ್ನೂ ತನ್ನ ಪತ್ತೆದಾರಿಕೆ ಕೆಲಸವನ್ನು ಬಿಟ್ಟಿಲ್ಲ. ಅವನಿಗೀಗ ಸನ್ಯಾಸಿಯ ಮೇಲೆ ಅನುಮಾನ ಕಡಿಮೆಯಾಗಿ ಕುತೂಹಲ ಶುರುವಾಗಿದೆ. ''ಅಲ್ಲ... ಈ ಸನ್ಯಾಸಿಯ ಕಣ್ಣು, ಮೂಗು, ಧ್ವನಿ, ನಡತೆ ನೋಡುವಾಗ ನಮ್ಮ ರಂಗನದೇ ನೆನಪು ಬರುತ್ತದಲ್ಲಾ? ಆದರೆ ಇವನೇನೂ ಖಂಡಿತಕ್ಕೂ ಅವನಲ್ಲ. ಹಾಗಾದರೆ ಇದು ಯಾರಾಗಿರಬಹುದು? ಆಂ... ಈಗ... ತಿಳಿಯಿತು'' ಎಂದು ಹೇಳಿದವನೇ ಅವಸರ ಅವಸರವಾಗಿ ರಂಗನ ಮನೆಯತ್ತ ಓಡಿದ. ಗದ್ದೆಯಲ್ಲಿ ಪಂತಿ ಕೊಯ್ಯುತ್ತಿದ್ದ ಗಂಗಕ್ಕ ಇವನ ಓಡಾಟ ನೋಡಿ ಕೈಯಲ್ಲಿದ್ದ ಕತ್ತಿಯನ್ನು ಅಲ್ಲಿಯೇ ಎಸೆದು

''ಏನು ಮಗಾ ಎಲ್ಲಿಗೆ ಹೊರಟಿದೆ ನಿನ್ನ ಸವಾರಿ? ರಂಗನ ಕಾಗದ ಏನಾದರೂ ಬಂತಾ? ಏನು ಹೇಳು ಮಗಾ?'' ಇಳಿಯುತ್ತಿದ್ದ ಬೆವರನ್ನು ಸೆರಗಿನಲ್ಲಿ ಒರಸುತ್ತಾ ಕೇಳಿದಳು.

''ಅಲ್ಲ ಗಂಗಕ್ಕಾ ಕಾಗದ ಬರೆಯಲು, ಅವನೇನು ಶಾಲೆಗೆ ಹೋಗಿ ಓದಲು ಬರೆಯಲು ಕಲಿತವನಾ? ಆಂ....ಆ ಸುದ್ದಿ ಹಾಗಿರಲಿ ಬಿಡು. ಈಗ ನಮ್ಮೂರಿಗೊಬ್ಬ ಸನ್ಯಾಸಿ ಬಂದ ಸಂಗತಿ ಇನ್ನೂ ನಿನಗೆ ಗೊತ್ತಿಲ್ಲವಾ? ಅವನು ಬಂದು ತಿಂಗಳು ಎರಡಾದರೂ ಒಮ್ಮೆಯಾದರೂ ಅವನನ್ನು ನೋಡಲು ನೀನು ಬರಲಿಲ್ಲವಲ್ಲಾ? ಪುರುಸೊತ್ತು ಮಾಡಿಕೊಂಡು ಆ ಕಡೆ ಒಮ್ಮೆ ಬಂದು ರಂಗನ ಸುದ್ದಿ ಸೊಲಕ ಏನೂಂತ ಅವನಲ್ಲಿ ಕೇಳಿ ನೋಡಬಹುದಲ್ಲಾ?

''ಇಸಪ್ಪಾ... ಇಷ್ಟೇನಾ? ಪು... ಸ್... ಕ! ನಾನು ಏನೋ ಎಂದು ಗ್ರಹಿಸಿದೆ. ಇದನ್ನೆಲ್ಲಾ ಆ ಸನ್ಯಾಸಿಯಲ್ಲಿ ಕೇಳುವುದೆಂತಕ್ಕೆ? ಮೊದಲೇ ಅಂತಹವರನ್ನು ನನಗೆ ಕಂಡರೆ ಆಗುವುದಿಲ್ಲ. ಹಾಗಾಗಿ ಅವರ ಮಾತಿನ ಮೇಲೂ ನನಗೆ ನಂಬಿಕೆ ಇಲ್ಲ. ರಂಗನಿಗೆ ಕಾಗದ ಬರೆಯಲು ಬರದಿದ್ದರೆ ಏನಾಯಿತು? ರಜೆ ಸಿಕ್ಕಿದಾಗ ಯಾರ ಕೈಯಲ್ಲಾದರೂ ಬರೆಯಿಸಿ ಹಾಕುತ್ತಾನೆ ಬಿಡು''

''ಹಾಗಲ್ಲ ಗಂಗಕ್ಕಾ ನೀನೊಂದು ಸಲ ಅಲ್ಲಿಗೆ ಬಂದು ನೋಡಿದಿ ಎಂದಾದರೆ ಅವನು ಯಾರು ಎಂದು ನಿನಗೇ ತಿಳಿಯುತ್ತೆ?''

''ಹೇಗಪ್ಪಾ, ಅದ್ಹೇಗೆ ನನಗೆ ತಿಳಿಯುವುದು?''

''ಹೇಗೆ ಎಂದರೆ... ಅವನು ಬೇರೆ ಯಾರೂ ಅಲ್ಲ. ನಾನು ಹೇಳುವುದಾದರೆ ಆ ಸ್ವಾಮಿ ಮಾಲಿಂಗಣ್ಣನೇ ಆಗಿರಬೇಕು ಎಂದು'' ಶಿವಣ್ಣನ ಮಾತು ಕೇಳಿದ ಗಂಗಕ್ಕ ಹೊಟ್ಟೆ ನೋಯುವವರೆಗೆ ಬಿದ್ದು ಬಿದ್ದು ನಕ್ಕಳು.

''ಅಯ್ಯಪ್ಪ ದೇವರೇ'' ಎಂದು ಶ್ವಾಸ ಬಿಟ್ಟ ಮೇಲೆ

''ಅಲ್ಲ... ಅವರಿಗೆ ಹುಚ್ಚಾ? ಏನಾದರೂ ಅವರೊಂದು ಸನ್ಯಾಸಿ ಬಟ್ಟೆಯನ್ನು ಸುತ್ತಿಕೊಳ್ಳುವುದುಂಟಾ? ಒಂದು ಕೋಳಿಯೂ ಶರಾಬು ಅಂಗಡಿ ಇದೆ ಎಂದಾದರೆ ವೈರಾಗ್ಯ ಅವರ ಹತ್ತಿರ ಕೂಡಾ ಸುಳಿಯೋದಿಲ್ಲ ಗೊತ್ತುಂಟಾ ನಿನಗೆ? ಕೋಳಿ ಅಂಕವೇ ಅವರ ಮಡದಿ, ಮಕ್ಕಳು, ಬೀಗರು, ಇಷ್ಟರು ಎಲ್ಲಾ ಆಗಿರುವಾಗ ಅವರು ಈ ಕಾವಿ ಬಟ್ಟೆ ಮುಟ್ಟಲಿಕ್ಕುಂಟಾ? ನನ್ನ ಅತ್ತೆ ಯಾವಾಗಲೂ ಹೇಳುತ್ತಿದ್ದರು ಏನು ಎಂದರೆ...''ನಿನ್ನ ಗಂಡ ಆಟಿಯ ಅಮವಾಸ್ಯೆಯ ದಿನವೇ ಹುಟ್ಟಿದವನು. ನಾನು ಪಾಲಶ ಮರದ ಕೆತ್ತೆಯ ಕಷಾಯ ಕುಡಿದು ಇನ್ನು ಮೆಂತೆ ಗಂಜಿ ತಿನ್ನಬೇಕು

ಎನ್ನುವಾಗ ನನಗೆ ಹೆರಿಗೆ ನೋವು ಬರಲು ಶುರುವಾಗಿತ್ತು ಎಂದು. ಹಾಗಾಗಿ ಪಾಲಶ ಕೆತ್ತೆಯ ಕಷಾಯದ ಹಾಗೆಯೇ ಅವರ ಮನಸೂ ಬರೀ ಕಹಿ, ವಿಷ''

''ಅದು ಏನೇ ಆಗಲಿ ಗಂಗಕ್ಕ, ನೀನೀಗ ನನ್ನೊಟ್ಟಿಗೆ ಬಂದು ನೋಡು. ಆ ಮೇಲಿನ ಸಂಗತಿ ಮತ್ತೆ ನೋಡುವಾ'' ಎಂದು ಹೇಳಿದವನು ಅವಳನ್ನು ಎಳೆದುಕೊಂಡೇ ಕರೆದೊಯ್ದ.

ಬಿಳಿ ಕಲ್ಲಿನ ಮೇಲಿದ್ದ ಎಲ್ಲಾ ಹೂಗಳು ಒಣಗಿದ್ದುವು. ಇದನ್ನು ನೋಡಿದ ರಂಗ, ಅಲ್ಲಿ ಇಲ್ಲಿ ಬೆಳೆದಿದ್ದ ಗಿಡಗಳಿಂದ ತುಂಬೆ, ಕೇಪುಳದ ಹೂಗಳನ್ನು ಕೊಯ್ದು ತಂದ. ಸಾಹುಕಾರನ ದಯೆಯಿಂದ ಅವನಿಗೀಗ ಹೊಟ್ಟೆಯ ಹಸಿವಿಗೆ ಭಯ ಪಡುವ ಚಿಂತೆಯೂ ಇರಲಿಲ್ಲ. ಅವನ ಕೆಲಸದವ ಆಗಲೇ ತಂದಿಟ್ಟ ತಿಂಡಿಗಳನ್ನು ನೋಡಿ ಬಾಯಿ ತುಂಬಾ ನಗುವೂ ಬಂತು. ಅದೆಲ್ಲಾ ಬೈರಾಗಿಗಳು ತಿನ್ನುವ ತಿನಿಸು ಅಲ್ಲ ಎಂಬ ಜ್ಞಾನ ಆದರೂ ಅವನ ಮಂಡೆಗೆ ಹೊಳೆಯದಿರುವುದು ನನ್ನ ಪುಣ್ಯ ಅಂತಲೇ ಹೇಳಬೇಕು. ರಂಗ ಅರಸಿನ ಎಲೆಯಲ್ಲಿ ಮಾಡಿದ ತಿಂಡಿಯ ತುಂಡನ್ನು ತೆಗೆದು ಬಾಯಿಗೆ ಇಟ್ಟುಕೊಂಡ. ಮೆಲ್ಲ ಮೆಲ್ಲನೆ ಅದನ್ನು ಜಗಿದುಕೊಂಡು ಅದರಲ್ಲಿರುವ ಸಿಹಿಯ ರುಚಿಯನ್ನು ಖುಶಿಯಿಂದ ನುಂಗಿಕೊಂಡ. ಎಲ್ಲೋ ನೋಢಿಕೊಂಡು ಏನೋ ಯೋಚನೆ ಮಾಡುತ್ತಿದ್ದ ಅವನ ದೃಷ್ಟಿಗೆ ಶಿವಣ್ಣನ ಜೊತೆ ಬರುತ್ತಿದ್ದ ಅಮ್ಮನನ್ನು ನೋಡಿ ದಿಗಿಲಾಗಿ ಹೋಯಿತು. ತಿಂಡಿ ಜಗಿಯುತ್ತಿದ್ದ ಬಾಯಿ ಬ್ರೇಕ್ ಹಾಕಿದ ಲಾರಿಯಂತೆ ಒಮ್ಮೆಲೆ ನಿಂತು ಬಿಟ್ಟಿತು. ಈ ಗಡಿಬಿಡಿಯ ಹೊತ್ತಿನಲ್ಲಿ ಅವನ ಕೈಕಾಲೂ ಹೊರಳದಂತಾಯಿತು.

ಮೊದಲೇ ನನ್ನಮ್ಮನಿಗೆ ಕಾವಿ ಬಟ್ಟೆಯವರನ್ನು ಕಂಡರೆ ಆಗುವುದಿಲ್ಲ. ಇನ್ನು ಈ ದಿರಸಿನೊಳಗೆ ಸ್ವತಃ ತನ್ನ ಮಗನೇ ಅವಿತಿದ್ದಾನೆ ಎಂದು ತಿಳಿದು ಹೋದರೆ ಆಯಿತು ಬಗೆ ! ಮತ್ತೆ ಪೊರಕೆ ತೆಗೆದುಕೊಳ್ಳುವುದಕ್ಕೂ ಹೇಸುವವಳಲ್ಲ. ಸರಿ, ಆದ ಹಾಗೆ ಆಗುತ್ತದೆ. ನಾನೀಗ ಕಣ್ಣು ಮುಚ್ಚಿಕೊಳ್ಳುವುದೇ ಒಳ್ಳೆಯ ಉಪಾಯ ಎಂದು ಎಣಿಸಿಕೊಂಡ ರಂಗ, ಬಾಯಲ್ಲಿದ್ದ ತಿಂಡಿಯ ತುಂಡುಗಳನ್ನು ಆದಷ್ಟು ನುಂಗಿಕೊಂಡ. ಉಳಿದದ್ದನ್ನು ಥೂ... ಥೂ... ಎಂದು ಹೊರಗೆ ಉಗುಳಿ ಬಂದ. ಬಟ್ಟಲನ್ನು ಹಿಂಬದಿಯ ಕಂಬದ ಮರೆಗೆ ದೂಡಿದ. ಆಮೇಲೆ ಬೇಗ ಬೇಗ ಬಾಯಿ ಒರೆಸಿಕೊಂಡು ಧ್ಯಾನ ಮಾಡುವವನಂತೆ ಕಾಲು ಮಡಚಿ ಕುಳಿತ.

ಮಂಟಪದ ಒಳಗೆ ಬಂದ ಗಂಗಕ್ಕ ಸನ್ಯಾಸಿಗೊಂದು ಸುತ್ತು ಹಾಕಿ ಬಹಳ ಸೂಕ್ಷ್ಮದಲ್ಲಿ ಅವನನ್ನು ಪರೀಕ್ಷೆ ಮಾಡಿದಳು. ಸ್ವಲ್ಪ ದೂರದಲ್ಲಿ ನಿಂತಿದ್ದ ಶಿವಣ್ಣ ಬೆಕ್ಕಸದ ಕಣ್ಣಲ್ಲಿ ಅವಳನ್ನೇ ನೋಡುತ್ತಿದ್ದ. ಮುಖ ಸಿಂಡರಿಸಿ ಕೈಗಳನ್ನು ತಿರುಗಿಸಿಕೊಂಡು -

''ನಿನಗೆ ನಾನು ಹೇಳಲಿಲ್ಲವಾ ನಮ್ಮ ಮನೆಯವರಿಗೆ ಹಾಗೆಲ್ಲಾ ವೈರಾಗ್ಯ ಬರಲಿಕ್ಕಿಲ್ಲ ಎಂದು. ಕೋಳಿ ಜೊತೆ ಸಂಸಾರ ಮಾಡಿಕೊಂಡು ಅವರೀಗ ಯಾವ ಊರಲ್ಲಿ ತಿರುಗುತ್ತಿದ್ದಾರಾ ಯಾರಿಗೆ ಗೊತ್ತು?''

''ನೀನು ಅದ್ಹೇಗೆ ಹೇಳುತ್ತಿ ಇವ ಮಾಲಿಂಗಣ್ಣ ಅಲ್ಲಾ ಅಂತ?''

''ಛೇ..., ಏನೋ ನನಗಷ್ಟೂ ಬುದ್ಧಿ ಗಿದ್ದಿ ಇಲ್ಲಾಂತ ಎಣಿಸಿದಿಯಾ? ನನ್ನ ಗಂಡನ ಕಿವಿಯಲ್ಲಿ ಕೆಂಪು ಕಲ್ಲಿನ ದೊಡ್ಡ ಒಂದು ವಂಟಿ ನೇತಾಡುತ್ತಿದ್ದುದು ನಿನಗೇನು ಗೊತ್ತೋ?''

''ನೀನೆಂತ ಹೇಳುತ್ತಿ ಗಂಗಕ್ಕ ಮಕ್ಕಳ ಹಾಗೆ? ಎಲ್ಲಿಯಾದರೂ ಸನ್ಯಾಸಿಗಳು ಒಂಟಿ ಹಾಕುವುದನ್ನು ನೀನೇನಾದರೂ ನೋಡಿದ್ದಿಯಾ ಹೇಳು?''

''ವಂಟಿ ಹಾಕದಿದ್ದರೆ ಏನಾಯಿತು? ವಂಟಿ ಇದ್ದ ಜಾಗದಲ್ಲಿ ತೂತಾದರೂ ಇರಬೇಕಾಗಿತ್ತಲ್ಲಾ?'' ಅವಳ ಬುದ್ಧಿವಂತಿಕೆಯ ಮಾತನ್ನು ಕೇಳಿದ ಮೇಲೆ ಶಿವಣ್ಣನ ಬಾಯಿಗೂ ಬೀಗ ಬಿತ್ತು. ತನ್ನ ಗಂಡ ಕದ್ದು ಒಯ್ದ ಬೆಂಡೋಲೆಯ ಬದಲಿಗೆ ಅವನ ಕಿವಿಯಲ್ಲಿದ್ದ ವಂಟಿಯನ್ನು ಕಿತ್ತು ತರಬೇಕು ಎಂದುಕೊಂಡು ಬಂದಿದ್ದ ಅವಳಿಗೀಗ ನಿರಾಸೆ ತಡೆಯಲಾಗದೆ ಹೋಯಿತು. ಸುರ್ ಸುರ್ ಎಂದು ಮಂಟಪದ ಮೆಟ್ಟಲಿಳಿದು ಹೋದ ಗಂಗಕ್ಕನ ಹಿಂದೆ ಶಿವಣ್ಣನೂ ಹೋಗಿ ಬಿಟ್ಟ. ಸ್ವಲ್ಪ ಹೊತ್ತು ಕಳೆಯಿತು. ಈಗ ಯಾರ ಧ್ವನಿಯೂ ಕೇಳದಿರುವುದು ಕಂಡು ರಂಗ ಮೆಲ್ಲನೆ ಕಣ್ಣು ತೆರೆದ. ಅದರ ಜೊತೆ ಗಟ್ಟಿಯಾಗಿ ಶ್ವಾಸವನ್ನೂ ಬಿಟ್ಟ.

ಬಾಯಿಯಿಂದ ಬಾಯಿಗೆ ಹರಡುತ್ತಾ ಬಂದ ಸ್ವಾಮಿಯವರ ಸುದ್ದಿ ಊರಿನ ಹಿರಿಯರೂ, ಗಣ್ಯರೂ ಸಮಾಜ ಸೇವಕರೂ ಆಗಿದ್ದ ಮೋನಪ್ಪನವರ ಕಿವಿಗೂ ಬಿತ್ತು. ಅವರಿಗೆ ತನ್ನ ಊರವರ ಅಜ್ಞಾನವನ್ನು ನೋಡಿ ಬಹಳ ಬೇಸರವಾಯಿತು. ಅವರು ತನ್ನ ಅಳಿಯ ಕೃಷ್ಣಪ್ಪರನ್ನು ಕರೆದುಕೊಂಡು ಬಂದು ಮಂಟಪದತ್ತ ಹೋಗುತ್ತಿದ್ದರವನ್ನು ತಡೆದು ಅವರಿಗೆ ಬುದ್ಧಿ ಹೇಳಲು ಪ್ರಾರಂಭಿಸಿದರು.

''ನೀವು ದುಡಿದ ದುಡ್ಡನ್ನು ಗೊತ್ತು ಗುರಿಯಿಲ್ಲದ ಆ ಪರದೇಶಿಗೆ ಕೊಡುವುದಕ್ಕಿಂತ ನಿಮ್ಮ ಮಕ್ಕಳು ಮರಿಗಳಿಗಾದರೂ ಖರ್ಚು ಮಾಡಬಹುದಲ್ಲಾ? ಅವರಿಗೆ ಹಾಲು, ಹಣ್ಣು ಅಥವಾ ಸ್ಲೇಟು, ಪುಸ್ತಕ ತಂದು ಕೊಡಬಹುದಲ್ಲಾ?'' ಎಂದು ಜನರಿಗೆ ತಲೆಗೆ ಹೋಗುವ ಹಾಗೆ ಹೇಳಿದರು.

''ಹೋಗಿ ಸ್ವಾಮೀ, ನೀವೊಬ್ಬರು ಬಾಕಿ ಇದ್ದಿರಿ. ನಿಮಗೆ ಇಷ್ಟು ವಯಸ್ಸಾದರೂ ಬುದ್ಧಿ ಇಲ್ಲದವರಂತೆ ಮಾತನಾಡುತ್ತೀರಲ್ಲಾ? ಆ ಸ್ವಾಮಿಗಳ ಕಾರಣಿಕ ನಿಮಗೇನು ಗೊತ್ತುಂಟು? ಇಷ್ಟಕ್ಕೂ ನಮ್ಮ ಮಕ್ಕಳು ಮರಿಗಳ ಚಿಂತೆ ನಮಗಿಲ್ಲ ಎಂದು ಎಣಿಸಿದಿರಾ?'' ಹೀಯಾಳಿಸಿ ಹೇಳಿದಾಗ ಅವರು ಸುಮ್ಮನೆ ನಿಂತರು.

ಪೇಟೆಗೆ ಹೋಗುವವರು ಮಂಟಪದ ಮುಂದಿರುವ ಒಳ ಹಾದಿಯಲ್ಲೇ ಹೋಗುತ್ತಾ ಬರುತ್ತಾ ಇದ್ದರು. ಅವರು ತೆಂಗಿನ ಓಲೆಯಲ್ಲಿ ತುರಿದು ತರುತ್ತಿದ್ದ ಮೀನಿನ ಕೋಪೆಯನ್ನು ನೋಡಿ ರಂಗನ ಬಾಯಲ್ಲಿ ನೀರಿಳಿಯಿತು. ಛೇ ನನ್ನಮ್ಮ ಮಾಡುತ್ತಿದ್ದ ಮೀನಿನ ಸಾರು ಎಷ್ಟೊಂದು ರುಚಿಯಾಗಿರುತ್ತಿತ್ತಲ್ಲಾ? ಮನಸ್ಸಿನಲ್ಲೇ ಸಾರಿನ ರುಚಿಯನ್ನು ಚಪ್ಪರಿಸಿದ ರಂಗನಿಗೆ ಈಗಿಂದೀಗಲೇ ಮನೆಗೆ ಓಡಿ ಹೋದರೆ ಹೇಗೆ? ಎನ್ನುವಷ್ಟು ಆಸೆಯಾಯಿತು. ಆದರೇನು? ತನ್ನ ವೇಷವನ್ನು ನೆನೆದೇ ಆಶೆಯೆಲ್ಲಾ ಕರಟಿ ಹೋಯಿತು. ದಾರಿಯಲ್ಲಿದ್ದ ನಾಯಿಗಳ ಬೊಗಳಾಟ ಅವನು ಕಾಣುತ್ತಿದ್ದ ಹಗಲು ಕನಸನ್ನು ಕೆಡಿಸಿತು.

ಮುನಿಸಿಪಾಲಿಟಿಯ ಒಬ್ಬ ಕೆಲಸದವನು ಸಾಹುಕಾರ ಸೋಂಪನ ನಾಯಿಯನ್ನು ಅಟ್ಟಿಸಿಕೊಂಡು ಅದರ ಹಿಂದಿನಿಂದಲೆ ಓಡುತ್ತಿದ್ದ. ತನ್ನ ಕೈಯಲ್ಲಿದ್ದ ಹುರಿಹಗ್ಗವನ್ನು ಅಷ್ಟು ದೂರದಿಂದಲೇ ಬೀಸಿಕೊಂಡು ಬೀಸಿಕೊಂಡು ಬರುತ್ತಿದ್ದಂತೆಯೇ ಎಳೆದು ಬಿಸುಟು, ನಾಯಿಯ ಕತ್ತಿಗೆ ಉರುಳು ಬಿದ್ದ ತಕ್ಷಣ ಅದನ್ನು ದರದರ ಎಳೆದುಕೊಂಡು ತಂದು ಜಾಲಿಯ ಗಾಡಿಯೊಳಗೆ ಎತ್ತಿ ಆಚೆ ಹಾಕಿದ. ಇದನ್ನೆಲ್ಲಾ ಕಣ್ಣಾರೆ ನೋಡಿದ ರಂಗನಿಗೆ ನಾಲ್ಕು ಕುಡ್ತೆ ಹಾಲು ಕುಡಿದಷ್ಟು ಸಂತೋಷವಾಯಿತು. ಇಸ್ಪೀಟ್ ಆಡಿ ರಾತ್ರಿ ಮನೆಗೆ ಹೋಗುವಾಗ ಸೋಂಪನ ತೆಂಗಿನ ತೋಟದಲ್ಲಿ ಎಳನೀರು ಕದಿಯುವ ಬುದ್ಧಿಯೂ ರಂಗನ ಗ್ಯಾಂಗ್‌ಗಿತ್ತು. ಅಂದೊಮ್ಮೆ ಬೊಗಳುತ್ತಾ ಬಂದಿದ್ದ ಈ ನಾಯಿಗೆ ಹೆದರಿದ ಗೆಳೆಯರು ಬೇಲಿ ಹಾರಿ ಹೋಗಿ ರಾಂಪಣ್ಣನ ಹಂಚಿನ ಬಂಗಲೆಯೊಳಗೆ

ಅಡಗಿದ್ದರು. ತೆಂಗಿಗೆ ಹತ್ತಿದ್ದ ರಂಗನೂ ಅವರೊಟ್ಟಿಗೆ ಸೇರುವುದರೊಳಗೆ ಅವನ ಲುಂಗಿಗೆ ಬಾಯಿ ಹಾಕಿತ್ತು ನಾಯಿ. ಮರುದಿನ ಸಾಹುಕಾರ ತನ್ನ ಪ್ರೀತಿಯ ನಾಯಿ ಎಳೆದು ತಂದಿದ್ದ ಲುಂಗಿಯನ್ನು ಪ್ರದರ್ಶನಕ್ಕೆ ಇಟ್ಟಿದ್ದ. ಇದನ್ನು ನೋಡಿದ ಕೆಲವರಿಗಾದರೂ ತೆಂಗಿನ ಕಾಯಿ ಕಳ್ಳ ಯಾರೂಂತ ತಿಳಿದು ಹೋಗಿತ್ತು. ಅಂದಿನಿಂದ ಇಂದಿನವರೆಗೆ ಸೋಂಪನ ನಾಯಿಯನ್ನು ಕಣ್ಣಿಂದ ನೋಡಲಾಗುತ್ತಿರಲಿಲ್ಲ ರಂಗನಿಗೆ. ಹೇಗಾದರೂ ಮಾಡಿ ಅದರ ಕಾಲು ತುಂಡರಿಸದೆ ಬಿಡಲಾರೆ ಎಂದು ಗೆಳೆಯರ ಜೊತೆ ಪಂಥ ಹಾಕಿದ್ದ. ಇಂದು ತನ್ನಷ್ಟಕ್ಕೆ ಈ ನಾಯಿಗಳ ದಂಡು ಕಳೆಯಿತಲ್ಲಾ ಎಂದು ಅವನಿಗೆ ಖುಶಿಯಾಯಿತು.

ದನಿ ಮತ್ತು ಒಕ್ಕಲಿನವರ ತಗಾದೆಯಿಂದ ಕೋರ್ಟು, ಕಛೇರಿ ಎಂದು ಅಲ್ಲಿಗೊಮ್ಮೆ ಇಲ್ಲಿಗೊಮ್ಮೆ ಅಲೆಯುತ್ತಿದ್ದ ಸೋಂಪ ಅಲೆದು ಅಲೆದು ಸೋತೇ ಹೋದ. ಗೆಲುವು ಇಲ್ಲದ ಅವನ ನಡತೆಯನ್ನು ನೋಡಿದವರು - ಇವನೇನೋ ವ್ಯಾಜ್ಯದಲ್ಲಿ ಸೋತು ಹೋಗಿರಬೇಕು. ಅದಕ್ಕೆ ಮುಖ ಎತ್ತಿ ಯಾರನ್ನೂ ನೋಡುತ್ತಿಲ್ಲ. ಒಳ್ಳೆಯದಾಯಿತು. ಇನ್ನಾದರೂ ಇವನ ಹಾರಾಟ ಸ್ವಲ್ಪ ಕಡಿಮೆಯಾಗಲಪ್ಪಾ'' ಎಂದು ಅವನ ಹಿಂದಿನಿಂದ ವ್ಯಂಗ್ಯವಾಡುತ್ತಿದ್ದರು.

ಅಂದು ಕೋರ್ಟಿಗೆ ಹೋಗಿದ್ದ ಸೋಂಪ ಮಧ್ಯಾಹ್ನದ ಹೊತ್ತಿಗೆ ಹಿಂದೆ ಬಂದ. ಬಿಸಿಲಿನ ತಾಪಕ್ಕೆ ಸುಸ್ತಾಗಿದ್ದರೂ ಸ್ವಾಮಿಗಳನ್ನು ನೋಡಿದ ತಕ್ಷಣ ಬೆನ್ನು ಬಾಗಿಸಿ ಕೈಮುಗಿದ. ಅವನ ಮುಖವನ್ನೆ ನೋಡುತ್ತಿದ್ದ ರಂಗ, ''ತ್ಚೂ... ತ್ಚೂ... ತ್ಚೂ... ಹೀಗಾಗಬಾರದಿತ್ತು!'' ಎಂದು ಹೇಳಿದ.

''ಏನು ಸ್ವಾಮೀ... ಏನಾಯಿತು?'' ಗಾಬರಿಯಿಂದ ಬಿಂಗ್ರಿ ಕಟ್ಟಿದ ಸೋಂಪ ಕೇಳಿದ.

''ಏನು ಹೇಳುವುದು? ಒಟ್ಟಾರೆ ನಿನ್ನ ಗ್ರಹಚಾರವೇ ಸರಿಯಿಲ್ಲಪ್ಪಾ. ನಿನಗೀಗ ಬಾರೀ ಕಠಿನ ದೆಸೆ. ಮಾಡಿದ ಕರ್ಮ ಫಲದಿಂದಾಗಿ ಕೈ ಹಿಡಿದ ಕೆಲಸಗಳು ಕರಟಿ ಹೋಗುತ್ತಿವೆ. ಅದಲ್ಲದೆ ನಿನ್ನನ್ನು ಹೆತ್ತು ಸಾಕಿದವಳೂ ಹೋದಳು. ನಂಬಿಕೆಯ ಬಂಟನಂತಿದ್ದ ನಾಯಿಯೂ ಹೋಯಿತು. ಇನ್ನು ಮೂರನೆಯದಾಗಿ ನಿನ್ನ ಜೀವಕ್ಕೇ ಕುತ್ತು ಬರಬಹುದು. ಬಂದರೂ ಇದರಲ್ಲಿ ಆಶ್ಚರ್ಯ ಪಡುವಂತಹದೇನೂ ಇಲ್ಲ'' ಸೋಂಪನಿಗೆ ಸಿಡಿಲು ಬಡಿದಂತಾಯಿತು.

''ಬೇಡ ಸ್ವಾಮೀ ಬೇಡ, ಇನ್ನು ಈ ಕಿವಿಯಲ್ಲಿ ಏನನ್ನೂ ಕೇಳಲಾರೆ. ನನ್ನ ಹಿರಿಯರು ಏನೆಲ್ಲಾ ಪಾಪ ಮಾಡಿದ್ದಾರೋ ಏನೋ ಯಾರಿಗೆ ಗೊತ್ತು? ಅವರು ಮಾಡಿದ ಅನ್ಯಾಯದ ಫಲದಿಂದಾಗಿ ನಾನು ಕರ್ಮ ಅನುಭವಿಸಬೇಕಾ? ಆದರೆ ನಾನಾಗಿ ಈ ಜನ್ಮದಲ್ಲಿ ಯಾರಿಗೂ ಎರಡು ಬಗೆದವನಲ್ಲ ನೋಡಿ''

''ಇಲ್ಲಪ್ಪಾ, ಇದು ಎಲ್ಲವೂ ಈ ಜನ್ಮದಲ್ಲೇ ಮಾಡಿದ ಕರ್ಮ ಆಗಿದೆ. ಆಗಲಿ ಅದಾಚೆ ಇರಲಿ, ನಿನ್ನ ಹತ್ತಿರದ ಬಂಧುಗಳು ಯಾರಾದರೂ ನಿನ್ನಿಂದಾಗಿ ಆಸ್ತಿಪಾಸ್ತಿ ಕಳೆದುಕೊಂಡು ಕಷ್ಟದಲ್ಲಿ ಬದುಕುತ್ತಿರುವವರು ಇದ್ದಾರಾ ಹೇಳು?''

''ಇಲ್ಲವಲ್ಲ ಸ್ವಾಮೀ, ಹಾಗೇನೂ ಕಷ್ಟದಲ್ಲಿರುವವರು ನಮ್ಮ ಕುಟುಂಬದಲ್ಲಿ ಯಾರೂ ಇಲ್ಲವಲ್ಲಾ?''

''ಸ್ವಲ್ಪ ಸರಿಯಾಗಿ ನೆನಪಿಸಿ ಹೇಳು ಮಾರಾಯಾ, ಇಂತಹ ಶನಿಕಾಟ ನಿನ್ನ ಬೆನ್ನು ಬಿಡದೆ ಇದ್ದರೂ ನೀನು ನನ್ನಲ್ಲಿಯೇ ಇದ್ದ ಸಂಗತಿಯನ್ನು ಮರೆ ಮಾಚುತ್ತಿಯಲ್ಲಾ?''

''ಆಂ...? ಆಂ... ಹೌದು ಹೌದು ಯಾರೋ ಒಬ್ಬ ದೂರದ ದಾಯಾದಿ ಇದ್ದಾನೆ ಸ್ವಾಮಿ''

''ಕಷ್ಟಕಾಲದ ಅಗತ್ಯಕ್ಕೆ ಅಂತ ಬೆಳ್ಳಿ, ಬಂಗಾರವನ್ನು ಈಡು ಇಟ್ಟವರ ಸೊತ್ತು ಗಿತ್ತು ಏನಾದರೂ ಉಳಿದಿದಾ ಎಂದು ನೆನಪಿಸಿಕೊ ನೋಡುವಾ...''

''ಛೇ... ಇಲ್ಲಪ್ಪಾ. ಅದು ಏನು ನನ್ನಲ್ಲಿ ಉಳಿದಿಲ್ಲ. ಒಂದು ವೇಳೆ ಇದ್ದರೂ ಎಲ್ಲೋ ಚೂರು ಗೀರು ಏನಾದರೂ ಇರಬಹುದು''

''ಆಂ... ನೋಡಿದಿಯಾ? ಅವರ ಕಣ್ಣಿನ ಕಣ್ಣೀರೇ ನಿನ್ನ ಬದುಕಿಗೆ ಶಾಪ ಆಗಿ ನಿಂತಿದೆ ತಿಳಿಯಿತಾ? ಈ ಆಪತ್ತಿನಿಂದ ಬಿಡುಗಡೆ ಆಗಲಿಲ್ಲ ಎಂದಾದರೆ ಮತ್ತೆ ನಿನ್ನ ಜೀವಮಾನದಲ್ಲಿ ನೀನು ಕೊರಗುತ್ತಲೇ ಇರಬೇಕಾದೀತು. ಇಲ್ಲದಿದ್ದರೆ ನಿನ್ನ...''

''ಅಯ್ಯಪ್ಪೋ, ಇದಕ್ಕೆ ಪರಿಹಾರ ಏನೂ ಇಲ್ಲವೇ ಸ್ವಾಮೀ...?''

''ಇಲ್ಲದೆ ಏನು? ಮೊದಲಿಗೆ ನೀನು ಏನು ಮಾಡಬೇಕು ಎಂದರೆ ನಿನ್ನಲ್ಲಿರುವ ಎಲ್ಲ ಪರರ ಸೊತ್ತುಗಳನ್ನು ಅವರವರಿಗೆ ಸಂದಾಯ ಮಾಡಿ ಬಿಡು. ಆ ಕ್ಷಣದಲ್ಲೇ ನೀನು ಮಾಡಿದ ಕರ್ಮ ತನ್ನಷ್ಟಕ್ಕೇ ಬಿಟ್ಟು ಹೋಗುತ್ತೆ'' ಒತ್ತೆಗೆ ಬಂದ ಸೊತ್ತುಗಳು ತಾನಾಗಿ ಕೈತಪ್ಪಿ ಹೋಗುವುದನ್ನು ನೆನೆದೇ ಸೋಂಪ ಪಾತಾಳ ಲೋಕಕ್ಕೆ ಇಳಿದು ಹೋದ.

''ಆಮೇಲೆ ಮೃತ್ಯುಂಜಯ ಹೋಮ ಮಾಡಿಸಿ ಬಡಬಗ್ಗರಿಗೆ ಅನ್ನದಾನ ಮಾಡು. ಮತ್ತೆ ನೋಡು ನಿನ್ನ ಹೊಟ್ಟೆಯ ಸಂಕಟವೂ ನಿಂತು ಹೋಗಿ ಮನೆಯೊಳಗೆ ಸುಖ, ಸಂತೋಷ ನಗುತ್ತಾ-ಕುಣಿಯುತ್ತಾ ಬರುತ್ತದೆ ನೋಡು. ಇನ್ನು ಏನೂ ಹೆದರಬೇಡ. ಈ ಶನಿಕಾಟದ ಗಡು ದಾಟಿತು ಎಂದಾದರೆ ಮತ್ತೆ ನಿನಗೆ ಪೂರ್ಣಾಯುಸ್ಸೇ ಸರಿ... ನೀನೀಗ ಹೋಗಿ ಬಾ, ಅಮ್ಮನ ರಕ್ಷೆಯೂ ನಿನ್ನ ಮೇಲಿರಲಿ''

''ಸ್ವಾಮೀ, ನೀವು ಹೇಳಿದ ಪ್ರಕಾರವೇ ನಾನು ನಡೆಯುತ್ತೇನೆ. ಆದರೆ, ಹೋಮದ ಕಾರ್ಯಕ್ಕೆ ನೀವೂ ಬಂದಿದ್ದರೆ...?''

ರಂಗನ ಒಡಲಲ್ಲಿ ನಗು ಉಕ್ಕಿ ಬಂತು. ಆಯಿತಪ್ಪ, ಆಯಿತು ನಿನ್ನ ಮನೆಯ ಹೋಮಕ್ಕೆ ನಾನೇನಾದರೂ ಬಂದೆ ಎಂದಾದರೆ ಬಾ...ರೀ ಗಮ್ಮತ್ತಾಗಬಹುದು. ಭಟ್ಟರವರು ಜಪ ಗಿಪ ಮಾಡುತ್ತಿರುವಾಗ ಏನೂ ತಿಳಿಯದ ನಾನು ಬಾಯಿ ಬರದ ಮೂಗನಂತೆ ಸುಮ್ಮನೆ ಕುಳಿತಿರಬೇಕಾ? ಎಂದು ತಾನೇ ಮನಸಿನಲ್ಲಿ ಕೇಳಿಕೊಂಡ. ಆದರೂ ತನ್ನ ಹಿಂಜರಿಕೆಯನ್ನು ಸೋಂಪನಿಗೆ ತಿಳಿಸಲಾಗದೆ-

''ಇದೇನು ಮಾರಾಯಾ ನೀನು ಹೀಗೆ ಹೇಳುವುದು? ಸಂಸಾರಸ್ಥರ ಮಧ್ಯೆ ನನ್ನಂತಹ ಸನ್ಯಾಸಿಗಳನ್ನು ಯಾಕೆ ಎಳೆಯುತ್ತಿ? ಅದೆಲ್ಲಾ ಭಟ್ಟರೇ ಸುಧಾರಿಸುತ್ತಾರೆ. ಮತ್ತೆ... ಅಮ್ಮನಿಗೆ ಕೊಡುವ ಕಾಣಿಕೆಗಳು ಏನಾದರೂ ಇದೆ ಎಂದಾದರೆ ಇಲ್ಲಿ ತಂದು ಒಪ್ಪಿಸಿದರೆ ಆಯಿತು. ತಿಳಿಯಿತಾ ನಿನಗೆ ನಾನು ಹೇಳಿದ್ದು?''

''ಹೌದು ಸ್ವಾಮಿ. ನೀವು ಹೇಳಿದ ಸಂಗತಿ ಎಲ್ಲವೂ ತಿಳಿಯಿತು. ಆಯಿತು ಹಾಗಾದರೆ ನಾನಿನ್ನು ಬರ್ತೇನೆ. ನಮಸ್ಕಾರ'' ತಲೆಯ ಮೇಲೆ ಬಹಳ ದೊಡ್ಡ ಬಂಡೆ ಕಲ್ಲಿನ ಹೊರೆ ಹೊತ್ತುಕೊಂಡಂತೆ ಭಾರದ ನಡಿಗೆಯಲ್ಲಿ ನಡೆದ ಸೋಂಪ. ಅವನನ್ನು ಓರೆ ಕಣ್ಣಲ್ಲಿ ನೋಡುತ್ತಿದ್ದ ರಂಗ ತನ್ನ ಹತ್ತು ಬೆರಳನ್ನೂ ಜೋಡಿಸಿ ನೆಟಿಕೆ ತೆಗೆದ.

ನನ್ನ ಮಗ ದುಡ್ಡಿನ ಮದದಲ್ಲಿ ಊರ ಜನರಿಗೆ ಎಷ್ಟೊಂದು ಕಷ್ಟ ಕೊಡಲಿಲ್ಲ? ಈಗ ತಮಾಷೆಗೆ ನಾನು ಹೇಳಿದ್ದನ್ನು ನಂಬಿದನಲ್ಲಾ? ಎಲ್ಲಿಗೆ ಹೋಯಿತು ಇವನ ಎದೆ ಸೆಟೆಯುವಿಕೆ?

ಕಣ್ಣು ಮಸೆಯುವಿಕೆ? ಥತ್ ಪಟ್ಟೆಂಗ! ಹಿಂದೊಮ್ಮೆ ಕೊರಗ ಶೆಟ್ಟರ ಹಟ್ಟಿಯಲ್ಲಿದ್ದ ಕರೆಯುವ ಹಸುವನ್ನೂ ಅದರೊಟ್ಟಿಗೆ ಕರುವನ್ನೂ ಮಾರಲಿದ್ದಾರೆ ಎಂದು ಸುದ್ದಿಯಾಯಿತು. ಇದನ್ನು ಕೇಳಿದ ನನ್ನಮ್ಮ ತಾನೇ ಹಸುವನ್ನು ಖರೀದಿಸುತ್ತೇನೆ ಎಂದು ಆಲೋಚನೆ ಮಾಡಿದಳು. ಆದರೆ ಕೈಯಲ್ಲಿ ಕಾಸು ಸ್ವಲ್ಪ ಕಮ್ಮಿ ಇತ್ತು. ಆಗ ಇದೇ ಸೋಂಪನಿಂದ ಸಾಲ ಕೇಳಿಯಾದರೂ ತರುತ್ತೇನೆ ಎಂದು ಅವನ ಮನೆಗೆ ಹೋಗಿದ್ದಳು. ತನ್ನ ಅಗತ್ಯದ ಸಂಗತಿ ಅವನಲ್ಲಿ ಹೇಳಿದ್ದಕ್ಕೆ -

''ನಿನ್ನಂತಹ ಕೂಲಿ ಕೆಲಸಗಾರಳಿಗೆ ಕೈಸಾಲ ಕೊಟ್ಟು ನಾಳೆ ಬೆಳಿಗ್ಗೆ ನಾನೇನು ಮೂರು ನಾಮ ಎಳೆದುಕೊಳ್ಳಬೇಕಾ ಏನು? ನಿನಗೆ ಅಂಗೈ ಅಗಲದಷ್ಟು ಭೂಮಿಯಾ ಅಲ್ಲ ಎರಡು ತೆಂಗಿನ ಸಸಿಯಾ ಏನುಂಟು ಹೇಳು? ಹಾಗಿರುವಾಗ ಯಾವ ಆಧಾರದ ಮೇಲೆ ನೀನು ಇಲ್ಲಿಗೆ ಬಂದಿದ್ದಿ? ಸಾಲದ ಬಡ್ಡಿ ಕಟ್ಟಲು ನಿನ್ನಲ್ಲಿ ಪುಡಿ ಕಾಸಾದರೂ ಇರಬೇಕಲ್ಲವಾ? ಹೋಗು... ಇಲ್ಲಿಂದೊಮ್ಮೆ ಹೋಗು ನೀನು'' ಎಂದು ಅಮ್ಮನನ್ನು ಸಾಧ್ಯವಿದ್ದಷ್ಟು ವ್ಯಂಗ್ಯವಾಡಿ ಬರೀ ಕೈಯಲ್ಲೇ ಕಳುಹಿಸಿದ್ದ. ಮನೆಗೆ ಬಂದ ಅಮ್ಮ ಬಿಕ್ಕಿ ಬಿಕ್ಕಿ ಅಳುತ್ತಾ ಹೇಳಿದ್ದನ್ನು ಯಾವತ್ತೂ ನಾನು ಮರೆಯುವವನಾ? ಆದರೂ ಕಣ್ಣಲ್ಲಿ ರಕ್ತವಿಲ್ಲದ ಈ ಕಟುಕ ಇಷ್ಟೊಂದು ಸುಲಭದಲ್ಲಿ ನನ್ನ ಮಾತಿನ ಮೇಲೆ ವಿಶ್ವಾಸವಿಡುತ್ತಾನೆ ಎಂದು ನಾನು ಎಣಿಸಿರಲಿಲ್ಲ! ಈಗ ಎಲ್ಲಿಗೆ ಹೋಯಿತು ಇವನ ದೊಡ್ಡಸ್ತಿಕೆ? ಪಾಪ ಸಾಯುವ ಭಯ ಕರುಳಲ್ಲಿ ಹಿಡಿದಿದೆಯಾದ್ದರಿಂದ ಹಣಕಾಸಿನ ಮೇಲಿದ್ದ ಮೋಹವೂ ಮರೆತು ಹೋಯಿತು ಎಂದು ಕಾಣುತ್ತೆ!

ಮತ್ತೆ ಒಂದು ಐದಾರು ದಿನ ಕಳೆಯುವುದರೊಳಗೆ ಸಾಹುಕಾರನ ಮನೆಯಲ್ಲಿ ಹೋಮದ ಅಟ್ಟಣೆ ನಡೆಯಿತು. ಮಾಧವನಿಗೂ ಹೇಳಿಕೆ ಹೋಯಿತು. ಊರಿನ ಗುರಿಕಾರರ ಮುಂದೆಯೇ ಅವರವರ ಸೊತ್ತುಗಳನ್ನು ಹಿಂತಿರುಗಿಸುವಾಗ ಸೋಂಪನ ಕರುಳು ಕತ್ತರಿಸಿದಂತಾಗುತ್ತಿತ್ತು. ಅವನ ಕಣ್ಣಲ್ಲೂ ದರ ದರಾಂತ ನೀರಿಳಿಯಿತು. ''ಇನ್ನಾದರೂ ನನಗೆ ಆಯುಷ್ಯ ಹೆಚ್ಚುತ್ತಲ್ಲಾ'' ಎಂಬ ಅಭಿಲಾಶೆಯಲ್ಲಿ ಬಂದ ದುಃಖವನ್ನು ನುಂಗಿಕೊಂಡ.

ಮರುದಿನ ಬೆಳಗಾಗಬೇಕಾದರೆ ಸೋಂಪ ಓಡಿಕೊಂಡೇ ಬಂದ ಮಂಟಪದತ್ತ. ಇಂದು ಯಾರ ಮನೆಯಿಂದ ಏನಾದರೂ ತಿನ್ನಲು ಬರಬಹುದು ಎಂದು ಲೆಕ್ಕ ಹಾಕುತ್ತಾ ಕುಳಿತ್ತಿದ್ದ ರಂಗ. ಈಗ ಸಾಹುಕಾರನ ಕೈಯಲ್ಲಿನ ಪುಸ್ತಕಗಳನ್ನು ನೋಡಿ ಅವನ ಮುಖ ಕುಂದಿ ಹೋಯಿತು.

''ಸ್ವಾಮೀ ನಮ್ಮ ಮನೆಯ ಅಟ್ಟ ಒತ್ತರೆ ಮಾಡುವಾಗ ಕೆಲಸದವನಿಗೆ ಇದು ಸಿಕ್ಕಿತು. ಧೂಳು ತಿನ್ನುತ್ತಾ ಅಟ್ಟದ ಹೊಗೆಯೊಟ್ಟಿಗೆ ಹಾಳಾಗುವ ಬದಲಿಗೆ ಈ ಗ್ರಂಥಗಳು ನಿಮ್ಮ ಬಳಿಯೇ ಇದ್ದರೆ ಒಳಿತಲ್ಲವೇ? ದಿನಾ ಸಂಜೆ ಹೊತ್ತಿಗೆ ಗ್ರಂಥ ವಾಚನ ಪ್ರಾರಂಭಿಸಿದಿರಿ ಎಂದಾದರೆ ಅದನ್ನು ಆಲಿಸಿದ ನಾಲ್ಕು ಜನರಿಗಾದರೂ ಸಂತೋಷ ಆಗಬಹುದಲ್ಲಾ ಎಂಬುದೇ ನನ್ನ ಒಡಲಿನ ಆಶೆ''. ರಂಗನಿಗೆ ಒಮ್ಮೆಲೆ ತನ್ನನ್ನು ಎತ್ತಿ ಬಿಸಿ ಕಾವಲಿಯ ಮೇಲೆ ಕುಳ್ಳಿರಿಸಿದಂತಾಯಿತು. ''ಓ... ದೇವರೇ, ಇವನಿಗೆ ಯಾಕೆ ಇಂತಹ ಶನಿ ಹಿಡಿದಿದೆಯಪ್ಪಾ? ಈ ಗ್ರಂಥದ ಹೆಸರೇ ಓದಲು ತಿಳಿಯದ ನಾನು ಅದನ್ನು ವಾಚನ ಮಾಡುವುದು ಹೌದಾ? ಛೇ... ಈ ಕಣೆ ಮುಳ್ಳಿನ ಹಿಡಿತದಿಂದ ನಾನು ಹೇಗೆ ಹೊರಗೆ ಬರಲಪ್ಪಾ?''

''ಸ್ವಾಮೀ ನಿಮ್ಮ ಮೌನ ನೋಡುವಾಗ ನಾನು ಹೇಳಿದ್ದು ಎಲ್ಲಿಯಾದರೂ ತಪ್ಪಾಯಿತಾ ಅಂತ...''

''ಛೇ... ಛೇ... ಅಲ್ಲಪ್ಪಾ ಹಾಗೇನೂ ಅಲ್ಲ ಪುರಾಣ ಪುಣ್ಯ ಕತೆಗಳನ್ನು ವಾಚನ ಮಾಡುವಂತಹ ಮಹಾ ದೊಡ್ಡ ಕಾರ್ಯವನ್ನು ಆಗೋಲ್ಲಾ ಎಂದು ಹೇಳಲು ಸಾಧ್ಯವಾ? ನನ್ನ ಮೌನಕ್ಕೆ ಅದಲ್ಲಾ ಕಾರಣ. ನಾಳೆಯಿಂದ ಹದಿನೈದು - ಇಪ್ಪತ್ತು ದಿನಗಳವರೆಗೆ ದೇವಿಯ ಉಪಾಸನೆ ಪ್ರಾರಂಭಿಸಬೇಕೆಂದಿದ್ದೇನೆ. ಹಾಗಾಗಿ ಬೇರೆ ಯಾವೊಂದು ಕಾರ್ಯವನ್ನೂ ಕೈಗೊಳ್ಳಲು ಆಗುವುದಿಲ್ಲವಲ್ಲಾ ಎಂಬ ಆಲೋಚನೆಯಲ್ಲಿ ಬಿದ್ದಿದ್ದೆ ಅಲ್ಲದೆ ಬೇರೆ ಏನೂ ಇಲ್ಲಪ್ಪಾ'' ತನ್ನ ಸೋಲನ್ನು ಸೋಂಪನ ಮುಂದೆ ತೋರಿಸಲಾಗದೆ ಸುಳ್ಳು ಕತೆ ಕಟ್ಟಿದ ರಂಗ.

''ಆಗಲಿ ಸ್ವಾಮೀ ನಿಮ್ಮ ಉಪಾಸನೆ ಮುಗಿದ ಮೇಲೆಯೇ ಗ್ರಂಥ ಓದಲು ಪ್ರಾರಂಭಿಸಿದರಾಯಿತಲ್ಲಾ?''

''ಆಯಿತಪ್ಪಾ ನೋಡುವ ಮುಂದಕ್ಕೆ'' ಎಂದು ಮಾತನ್ನು ಮುಗಿಸಿಬಿಟ್ಟ ರಂಗ. ಸಾಹುಕಾರನನ್ನು ಅಲ್ಲಿಂದ ಸಾಗಿಸಿ ಬಿಟ್ಟ ಮೇಲೆ ಯೋಚನೆಯಲ್ಲಿ ಬಿದ್ದ. ಛೇ... ನಾನು ಆಡುವ ನಾಟಕಕ್ಕೆ ಮಂಗಳ ಹಾಡುವ ಕಾಲ ಬಂತಾ? ಹತ್ತು ಸಲ ಕದ್ದವ ಒಮ್ಮೆಯಾದರೂ ಸಿಕ್ಕಿಬಿದ್ದೇ ಬೀಳುತ್ತಾನಂತೆ. ಇನ್ನೀಗ ನನ್ನದೂ ಇದೇ ಗತಿಯಾಯಿತಾ? ಬೇಡಪ್ಪಾ... ಮೆಲ್ಲನೆ ಇಲ್ಲಿಂದ ಹೊರಟು ಹೋದರೆ ಹೇಗೆ? ಆದರೆ... ದುಡ್ಡಿನ ಗಂಟಿನೊಟ್ಟಿಗೆ ಏನಾದರೂ ಸಿಕ್ಕಿಬಿದ್ದೆ ಎಂದಾದರೆ? ಮತ್ತೆ ಅವರ ಕೈಯಿಂದ ಪೆಟ್ಟು ತಿಂದೇ ಸಾಯಬೇಕಾದೀತು! ಅದಕ್ಕಿಂತ ಏನಾದರೂ ಅಡ್ಡಿಗಿಡ್ಡಿ ಹೇಳಿಕೊಂಡು ವಾಚನ ಕಾರ್ಯವನ್ನು ಮುಂದೂಡಿಕೊಂಡು ಹೋದರಾಗದಾ? ನೆನೆದಷ್ಟೂ ರಂಗನಿಗೆ ಮುಗಿಯುವುದೆಂದೇ ಇಲ್ಲ. ಜೊತೆಗೆ ರಾತ್ರಿ ಕಳೆದು ಹಗಲು ಆಗುತ್ತಾ ಒಂದೊಂದೇ ದಿನ ಕಳೆಯುತ್ತಾ ಹೋಗುತ್ತಿತ್ತು.

ಬೇಟೆಗೆ ಹೋಗಿದ್ದ ಪೋಲೀಸರು ಹುಲಿಯ ಮರಿಯೊಂದನ್ನು ಕೊಂದು ತಂದ ಸುದ್ದಿ ಊರು ತುಂಬಾ ಹರಡಿ ಹೋಯಿತು. ''ಹೌದು ಪೋಲೀಸರು ಗುಂಡು ಏನಾದರೂ ಹೊಡೆದರು ಎಂದಾದರೆ ಅದು ಯಾವತ್ತೂ ಅವರ ಗುರಿ ತಪ್ಪುವುದಿಲ್ಲ'' ಎಂದು ತಿಳಿದಿದ್ದ ಸಂಗತಿ. ಸುದ್ದಿ ತಿಳಿದ ಊರವರು ಹುಲಿಯನ್ನೊಮ್ಮೆ ನೋಡುವ ಎಂಬ ಅವಸರ ಮಾಡಿದರು. ಅವರು ವೇಗವಾಗಿ ಹೆಜ್ಜೆ ಹಾಕುತ್ತಿದ್ದರು. ಈ ಗಡಿಬಿಡಿಯ ಮಧ್ಯೆಯೂ ಅವರೊಮ್ಮೆ ಮಂಟಪದ ಮುಂದೆ ನಿಂತು ಸ್ವಾಮಿಗಳಿಗೆ ಕೈಮುಗಿದೇ ಮುಂದೆ ಸಾಗುತ್ತಿದ್ದರು. ಕೆಲವರು - ''ಈ ಪುಣ್ಯಾತ್ಮರು ನಮ್ಮೂರಿಗೆ ಬಂದ ಮೇಲೆ ರಂಗನ ಗೆಳೆಯರು ಆಡುತ್ತಿದ್ದ ಇಸ್ಪೀಟ್ ಆಟವು ನಿಂತು ಹೋಯಿತು. ಬಾರೀ ದರ್ಪವನ್ನು ತೋರಿಸುತ್ತಿದ್ದ ಸಾಹುಕಾರನ ಅಹಂಕಾರ ನಿಂತು ಹೋಯಿತಲ್ಲದೆ ಜನರ ಮಧ್ಯೆಯೂ ಎಷ್ಟೊಂದು ಸುಧಾರಣೆ ಆಗಿ ಹೋಯಿತು'' ಎಂದು ಮಾತಾಡಿಕೊಳ್ಳುತ್ತಿದ್ದರು. ಇದನ್ನೆಲ್ಲಾ ಕೇಳುತ್ತಿದ್ದ ರಂಗನಿಗೆ ನಗುವೂ ಜೊತೆಗೆ ನಡುಕವೂ ಶುರುವಾಯಿತು.

ಮಂಟಪದಾಚೆ ಕಣ್ಣೆತ್ತಿಯೂ ನೋಡದವಳೊಬ್ಬಳು ತನ್ನ ಗೆಳತಿಯ ಜೊತೆ ಹೋಗುತ್ತಿದ್ದಳು. ಅವಳು ಹಾಕಿದ್ದ ಉದ್ದ ಜಡೆ ಅತ್ತಿತ್ತ ವಾಲುತ್ತಿತ್ತು. ಅವಳು ನಡೆಯುವ ನಡಿಗೆ ರಂಗನ ಮನಸ್ಸನ್ನು ಅತ್ತ ಸೆಳೆಯಿತು. ಅವನಿಗೆ ಆದ ಸಂತೋಷದಲ್ಲಿ ಮೈಯೆಲ್ಲ ನವಿರೆದ್ದಿತು. ಕುಳಿತಲ್ಲಿಂದ ದಡಕ್ಕನೆ ಎದ್ದು ನಿಂತ.

''ರತ್ನಾ ...'' ಎಂದು ಕರೆಯಲು ಇಷ್ಟಗಲ ಬಾಯಿ ತೆರೆದವನು ಒಮ್ಮೆಲೆ ಮುಚ್ಚಿಯೂ ಬಿಟ್ಟ. ನೆರೆಮನೆಯ ಗಿರಿಜ ರತ್ನಳ ಜೊತೆ ಇದ್ದುದರಿಂದ ರಂಗನ ಉತ್ಸಾಹಕ್ಕೆ ತಣ್ಣೀರು

ಎರಚಿದಂತಾಯಿತು. ಅಷ್ಟು ಹೊತ್ತಿಗೆ -

''ಸ್ವಾಮೀ...'' ಎಂದು ಕರೆಯುವುದು ಕೇಳಿಸಿತು. ರಂಗ ಹಿಂತಿರುಗಿ ನೋಡಿದಾಗ ನೆರೆ ಗ್ರಾಮದ ನಾಗಕ್ಕ ನಿಂತಿದ್ದಳು. ನಿಂತಲ್ಲಿಂದಲೇ ಮತ್ತೊಮ್ಮೆ ''ಸ್ವಾಮೀ...'' ಎಂದಳು ನಾಗಕ್ಕ. ಮಡದಿಯನ್ನು ನೋಡಿ ಮರುಳಾದ ರಂಗನಿಗೆ ಇವಳ ಕರೆ ಬರೀ ಕಿರಿಕಿರಿಯಾಯಿತು.

'' ಸ್ವಾಮೀ... ಹಲವು ವರ್ಷದ ನಂತರ ಅಪರೂಪಕ್ಕೆ ಹುಟ್ಟಿದ ಮಗುವಿಗೆ ಕುತ್ತ ತಪ್ಪುವುದಿಲ್ಲವಲ್ಲಾ ಸ್ವಾಮೀ. ಅದಕ್ಕಾಗಿ ಜಾತಕವನ್ನಾದರೂ ನಿಮ್ಮಲ್ಲಿ ಓದಿಸುವಾ ಎಂದು ಬಂದೆ ಸ್ವಾಮೀ ನಾನು'' ಇದನ್ನು ಕೇಳಿದ ರಂಗನಿಗೆ ಪಿತ್ತ ಕೆದರಿತು. ''ಏನಮ್ಮಾ ಈ ಜಾತಕ ಗೀತಕ ಓದಲು ನಾನೇನು ಬಲ್ಮೆಯವನು ಎಂದು ತಿಳಿದಿಯಾ? ದೋಷ ತಪ್ಪುವುದಿಲ್ಲಾ ಎಂದಾದರೆ ಪಂಡಿತರಿಲ್ಲವಾ? ಇಲ್ಲಿಗೇಕೆ ಬಂದೆ? ಜಾತಕ ಅಂತೆ ಜಾತಕ! ಇದುವೇ ಕೊನೆ, ಇನ್ನು ಯಾವತ್ತಿಗೂ ಇಂತಹ ಕೆಲಸ ಏನೂ ಮಾಡಬೇಡ'' ಸ್ವಾಮಿಗಳಿಗೆ ಇಷ್ಟು ಬೇಗ ಕೋಪ ಬರುತ್ತದೆ ಎಂದು ಕನಸಿನಲ್ಲೂ ಎಣಿಸದ ನಾಗಕ್ಕ ಕಣ್ಣೀರೊಟ್ಟಿಗೆ ಮೂಗನ್ನೂ ಒರಸುತ್ತಾ ಅಳುತ್ತಾ ಅಲ್ಲಿಂದ ಹೊರಟಳು. ಗುರ್ತ ಅರ್ತ ಇಲ್ಲದವರು ಯಾರೇ ಬರಲಿ ಅವರ ಮುಂದೆ ಏನಾದರೂ ಒಂದು ನಾಟಕ ಮಾಡಿ ಅವರನ್ನು ಸಾಗಹಾಕುವುದರಲ್ಲಿ ಇತ್ತೀಚೆಗೆ ರಂಗ ಬಹಳ ಚಾಣಾಕ್ಷನಾಗಿದ್ದ.

ಸತ್ತ ಹುಲಿಯನ್ನು ನೋಡಿ ಹಿಂದೆ ಬರುತ್ತಿದ್ದ ರತ್ನಳನ್ನು ಕಂಡು ಮತ್ತೆ ರಂಗನ ದೇಹ ಪುಳಕಗೊಂಡಿತು. ತಲೆ ತಗ್ಗಿಸಿ ತಾನು ನಡೆಯುವ ಹಾದಿಯನ್ನೇ ನೋಡುತ್ತಿದ್ದ ಅವಳ ದೇಹ ಬತ್ತಿ ಬಸಳೆಯಂತಾಗಿತ್ತು. ರತ್ನಳತ್ತ ಮುಖ ತಿರುಗಿಸಿದ ಗಿರಿಜ -

''ಎಷ್ಟು ದಿನಾಂತ ಹೀಗೆ ದುಃಖಿಸುತ್ತಿಯಾ ನೀನು? ಒಮ್ಮೆ ಈ ಸ್ವಾಮಿ ಬಳಿಯಾದರೂ ರಂಗಣ್ಣನ ವಿಚಾರ ಏನೂಂತ ಕೇಳಲಿಕ್ಕಾಗುವುದಿಲ್ಲವಾ ನಿನಗೆ?''

''ಸ್ವಾಮಿಯ ಜೊತೆ ಏನೂ ಕೇಳುವುದು ಬೇಡಪ್ಪಾ, ಮತ್ತೆ ನನ್ನ ಅತ್ತೆಗೆ ಏನಾದರೂ ತಿಳಿಯಿತು ಎಂದಾದರೆ ನನ್ನನ್ನು ಸಿಗಿದು ಬಾಗಿಲಿಗೆ ತೋರಣ ಕಟ್ಟಿಯಾರು.''

''ಇಸ್ಯಪ್ಪ, ನೀನೊಬ್ಬಳು ಹೆದರಿಕೆಯ ಪುಕ್ಕು. ಇದನ್ನೆಲ್ಲ ಯಾಕೆ ಗಂಗಕ್ಕನಲ್ಲಿ ಡಂಗುರ ಸಾರಬೇಕು? ಬಾ, ನಾನಿದ್ದೇನಲ್ಲಾ? ಒಂದು ಗಳಿಗೆ ಹೋಗಿ ಬರುವಾ ಬಾ''. ಗಿರಿಜಳ ಒತ್ತಾಯಕ್ಕೆ ಮಂಟಪದ ಮೇಲೆ ಹತ್ತಿದಳು ರತ್ನ. ಮಡದಿಯನ್ನು ಕಣ್ಣಿಂದಲೇ ನುಂಗಿ ಬಿಡುವಂತೆ ನೋಡುತ್ತಿದ್ದ ರಂಗ. ಆದರೆ ಅವಳ ಇಷ್ಟಗಾರ್ತಿಯ ಮುಂದೆ ತನ್ನ ಆಶೆಯನ್ನು ತಡೆದುಕೊಂಡು-

''ಮಗಳೇ, ನಿನ್ನ ಚಿಂತೆ ಏನೂಂತ ನನಗೆ ತಿಳಿದಿದೆ. ಕೈ ಹಿಡಿದವ ನಿನ್ನನ್ನು ಬಿಟ್ಟು ದೇಶಾಂತರ ಹೋಗಿದ್ದಾನೆ ಎಂಬ ದುಃಖ ನಿನ್ನನ್ನು ಚಿಂತೆಗೀಡು ಮಾಡಿದೆಯಲ್ಲಾ?'' ರತ್ನ ತಗ್ಗಿಸಿದ ತಲೆಯನ್ನು ಒಮ್ಮೆಲೆ ಮೇಲೆತ್ತಿ-

''ಹೌದು ಸ್ವಾಮೀ ನೀವು ಹೇಳಿದ ಮಾತು ಸತ್ಯ ಸ್ವಾಮೀ. ಇಲ್ಲಿ ತನಕ ಅವರ ಪತ್ರವೂ ಬಂದಿಲ್ಲ. ಅವರು ಎಲ್ಲಿದ್ದಾರೆ, ಏನು ಕತೆ ಎಂಬ ಅವರ ಸುದ್ದಿ ಸಂಗತಿಯೂ ನಮಗೆ ತಿಳಿದಿಲ್ಲ ಸ್ವಾಮೀ''

''ಹೌದು ಮಗಳೇ ಹೌದು. ಅವನು ಯಾವುದೋ ಒಂದು ವಕ್ರ ದೆಸೆಯಿಂದಾಗಿ ಹೋದಲ್ಲಿ ಸಿಕ್ಕಿ ಬಿದ್ದಿದ್ದಾನೆ. ಆ ಬಲೆಯ ಸಿಕ್ಕಿನಿಂದ ಹೊರಗೆ ಬರಲು ಅವ ಬಹಳ ಕಷ್ಟ ಪಡುತ್ತಿದ್ದಾನೆ. ಆದರೆ ನಿನ್ನ ಗ್ರಹಚಾರ ಏನಾದರೂ ಚೆನ್ನಾಗಿದೆ ಎಂದಾದರೆ ಅವನು ಅಲ್ಲಿಂದ ತಪ್ಪಿಸಿಕೊಂಡು

ಹಿಂದೆ ಬಂದರೂ ಬರಬಹುದು''

''ಇಲ್ಲದಿದ್ದರೆ?'' ಹೆದರಿ ಕಣ್ಣೇರಿಳಿಸಿ ಕೇಳಿದಳು ರತ್ನ

''ಇಲ್ಲದಿದ್ದರೆ....? ಇಲ್ಲದಿದ್ದರೆ....., ಅಂ..... ಅದೆಲ್ಲವೂ ನಿನ್ನ ಕೈಯಲ್ಲಿದೆ''

'ಹೌದಾ ಸ್ವಾಮೀ... ಹಾಗಾದರೆ ನಾನು ಏನು ಮಾಡಬೇಕು ಸ್ವಾಮೀ?'' ಅವಳಿಗೆ ಆಶೆ ಚಿಗುರಿತು.

''ನಾಳೆ ಮುಂಜಾನೆಗೆ ಸರಿಯಾಗಿ ಏಳು ದಿನಗಳ ತನಕ ನಾನು ನಂಬಿದ ಈ ಅಮ್ಮನ ಸೇವೆ ಮಾಡಿ ಅವಳನ್ನು ನಿನ್ನತ್ತ ಒಲಿಸಿಕೊಂಡೆ ಎಂದಾದರೆ ನಿನ್ನ ಗಂಡನಿಗೆ ಬಿದ್ದ ಬಂಧನವು ತಪ್ಪಿ ಹೋಗುತ್ತೆ. ನಿನ್ನ ಆಶೆಯೂ ಈಡೇರುತ್ತೆ''

''ನಾಳೆ ಸೂರ್ಯೋದಯಕ್ಕೆ ಮೊದಲೇ ಎದ್ದು ತಲೆಗೆ, ಮೈಗೆ ತಣ್ಣೀರು ಸ್ನಾನ ಮಾಡಿ ಒಗೆದ ಮಡಿ ಬಟ್ಟೆಯನ್ನೇ ಉಡಬೇಕು. ಆಮೇಲೆ ದೇವಿಯ ಆರಾಧನೆಗಾಗಿ ಒಂದು ನಾಲ್ಕು ಹೂ, ಹಣ್ಣು, ಕಾಯಿ, ಕರ್ಪೂರದ ಜೊತೆ ಬಂದರೆ ಪೂಜೆಯ ಕ್ರಮವನ್ನು ಮತ್ತೆ ತಿಳಿಸಿ ಕೊಡಬಹುದು'' ರಂಗ ಮಾತಾಡುತ್ತಿರುವಂತೆಯೇ ಹೊತ್ತಿ ಬೂದಿಯಾದ ಊದುಬತ್ತಿಯ ಪುಡಿಯನ್ನು ತನ್ನ ಎರಡು ಬೆರಳಲ್ಲಿ ತೆಗೆದು ಇಬ್ಬರ ಅಂಗೈಗೂ ಹಾಕಿದ. ರತ್ನಳ ಜೊತೆ ಗಿರಿಜಳೂ ಅವನ ಕಾಲಿಗೆ ಬಿದ್ದು ಅಲ್ಲಿಂದ ಹೊರಟರು. ರಂಗನ ತಲೆಯ ಮೇಲಿದ್ದ ಹೊರೆಯ ಭಾರ ಅರೆವಾಸಿಯಷ್ಟು ಹಗುರವಾಯಿತು. ಅವನಿಗೆ ಸಂತೋಷವನ್ನು ತಡೆದುಕೊಳ್ಳಲಾಗದೆ ಬಾಯಿಯಿಂದ ಸೀಟಿ ಹಾಕಿಕೊಂಡು ಮಡದಿ ಹೋಗುತ್ತಿದ್ದ ಹಾದಿಯನ್ನೇ ನೋಡುತ್ತಾ ಕಂಬದ ಬಳಿ ಬಂದು ನಿಂತ.

ಸಂಜೆಯಿಂದಲೂ ಆನೆ ಬಾಗಿಲಲ್ಲೇ ನಿಂತು ರತ್ನ ಬರುವುದನ್ನೇ ಕಾಯುತ್ತಿದ್ದಳು ಗಂಗಕ್ಕ. ಅಷ್ಟು ಹೊತ್ತಿಗೆ ಸೊಸೆಯ ಕಾಲುಂಗರದ ಶಬ್ದ ಕೇಳಿ ಅತ್ತ ತಿರುಗಿದಳು.

ಏನು? ಬೆಳಕು ಹೊತ್ತಿಸುವ ಸಮಯವಾದರೂ ಮನೆಯೊಳಗೆ ಬೇಗ ಬರಬೇಕು ಎಂಬ ಜ್ಞಾನವೂ ಬೇಡವೇ ನಿನಗೆ?'' ಅತ್ತೆ ಹೇಳಿದ್ದನ್ನು ಕಿವಿಯೊಳಗೆ ಹಾಕಿಕೊಳ್ಳದ ರತ್ನ -

''ಅತ್ತೆ ನೀವೇನಾದರೂ ಕೋಪ ಮಾಡಿಕೊಳ್ಳುವುದಿಲ್ಲ ಎಂದಾದರೆ ನಾನೊಂದು ಮಾತು ಹೇಳುತ್ತೇನೆ''

''ಅದು ಏನಪ್ಪಾ ನನಗೆ ಕೋಪ ಬರದಂತಹ ಮಾತು?''

''ಗಿರಿಜಳ ಒತ್ತಾಯಕ್ಕೆ ನಾನು ಮಂಟಪದತ್ತ ಹೋದೆ''

''ಏನು ಹೇಳಿದೆ? ನಿನಗೆ ಮಂಡೆ ಏನಾದರೂ ಸರಿ ಉಂಟಾ ಇಲ್ಲವಾ? ಅಲ್ಲ ಪಿತ್ತ ಕಿತ್ತ ಕೆದರಿದಾ ಏನು? ಅಂತಹ ತುರ್ತು ಕಾರ್ಯ ಏನು ಇತ್ತೇ ನಿನಗಲ್ಲಿ?''

''ಆ ಸ್ವಾಮಿಗಳು ನನ್ನ ಮುಖ ನೋಡಿದ ಕೂಡಲೇ ನಿಮ್ಮ ಮಗನ ಸುದ್ದಿ ಏನೆಲ್ಲಾ ಹೇಳಿದರೆಂದು ಗೊತ್ತುಂಟಾ ನಿಮಗೆ?

''ಹೌದೌದು, ಅವ ಹೇಳಿದ, ನೀನು ಕಿವಿಗೊಟ್ಟು ಕೇಳಿದೆ ಅಲ್ಲವೇ?''

''ಹಾಗಲ್ಲ ಅತ್ತೆ, ನಿಮ್ಮ ಮಗ ಕೆಟ್ಟ ಗ್ರಹಚಾರದಿಂದ ಎಲ್ಲೋ ಸಿಕ್ಕಿ ಬಿದ್ದಿದ್ದಾರಂತೆ. ಹಾಗಾಗಿ ನಮಗೊಂದು ಪತ್ರ ಬರೆಯಿಸಲೂ ಅವರಿಗೆ ಆಗುತ್ತಿಲ್ಲವಂತೆ. ಅವರಿಗೆ ಹಿಡಿದದ್ದು ಬಿಡಬೇಕಾದರೆ ನಾನು ಏಳು ದಿನ ಮಂಟಪಕ್ಕೆ ಹೋಗಿ ದೇವಿಯನ್ನು ಪೂಜಿಸಿ ಒಲಿಸಿಕೊಳ್ಳಬೇಕಂತೆ. ಹಾಗಾದರೆ ಮಾತ್ರ ಅವರು ದೆಸೆ ಕಳೆದು ಮತ್ತೆ ನಮ್ಮ ಸ್ವಾಧೀನ ಆಗುತ್ತಾರಂತೆ''

''ಸಾಕೇ, ಮುಚ್ಚೇ ಬಾಯಿ, ಯಾರಿಂದಲೋ ಅವನಿಗೆ ರಂಗನ ವಿಚಾರ ತಿಳಿದಿರಬೇಕು. ಅದಕ್ಕೇ ಅವನು ಕಾಸು ತಿನ್ನಲೋಸ್ಕರ ಪೂಜೆಯ ಹುನ್ನಾರ ಮಾಡುತ್ತಿದ್ದಾನೆ. ಇಗೋ, ನೀನೇನಾದರೂ ಅವನು ಹೇಳಿದ ಹಾಗೆ ಕಿವಿಗೊಡಬೇಡ ಏನೇ?''

''ಅಲ್ಲ ಅತ್ತೆ, ಅವರ ಮಾತು ಸುಳ್ಳಲ್ಲ. ಗಿರಿಜನಲ್ಲಿ ಬೇಕಾದರೆ ನೀವೇ ಕೇಳಿ ನೋಡಿ. ಒಂದು ವೇಳೆ ನಿಮ್ಮ ಮಗನ ಸಂಗತಿ ಸ್ವಾಮಿಗಳಿಗೆ ತಿಳಿದಿದ್ದರೂ ನಾನೇ ಅವರ ಮಡದಿ ಎಂದು ಅವರಿಗೆ ಹೇಗೆ ತಿಳಿಯಿತು? ಅವರು ಯಾಕೆ ''ನಿನ್ನ ಗಂಡ, ನಿನ್ನ ಗಂಡ'' ಎಂದು ಗಳಿಗೆಗೊಮ್ಮೆ ನನ್ನಲ್ಲೇ ಹೇಳಬೇಕಾಗಿತ್ತು?'' ಗಂಗಕ್ಕನಿಗೂ ಈಗ ಸೊಸೆ ಹೇಳಿದ್ದನ್ನು ನಂಬುವಂತಾಯಿತು.

''ಆಯಿತಲ್ಲಾ? ಈ ತನಕ ನೀನೊಬ್ಬಳು ಬಾಕಿ ಇದ್ದೆ. ಆಗಲಪ್ಪಾ ಆಗಲಿ ಅದೆಂತಹ ಪೂಜೆ ಮಾಡುತ್ತಿಯೋ ಮಾಡಿ ಬಿಡು. ನನಗೆ ನನ್ನ ಮಗ ಕ್ಷೇಮವಾಗಿ ಮನೆಗೆ ಬಂದರೆ ಸಾಕು'' ಅತ್ತೆಯ ಒಪ್ಪಿಗೆ ಸಿಕ್ಕಿದ ಮೇಲೆ ರತ್ನಳ ಮನಸಿಗೆ ಸ್ವಲ್ಪ ಗೆಲುವಾಯಿತು.

ಮರುದಿನ ಬೆಳಿಗ್ಗೆ ಎದ್ದು ಸ್ನಾನಮಾಡಿ ಶುದ್ಧವಾದಳು ರತ್ನ. ಪೂಜೆಗೆ ಬೇಕು ಬೇಕಾದ ವಸ್ತುಗಳ ಜೊತೆ ಗಿರಿಜನ ಮನೆಯ ಬಳಿ ಬಂದಳು. ಅಲ್ಲಿ ಅಳುತ್ತಿದ್ದ ಪುಟ್ಟ ಮಗುವನ್ನು ಲಾಲಿಸುತ್ತಿದ್ದಳು ಗಿರಿಜ.

''ಅಯ್ಯಯ್ಯೋ, ಇನ್ನೂ ಹೊರಟಿಲ್ಲವಾ ಮಾರಾಯಿತಿ? ಪೂಜೆಗೆ ಬರುತ್ತಿ ಎಂದು ಮತ್ತೆ ಯಾಕೆ ಹೇಳಿದ್ದು?''

''ನಾನು ಹೇಳಿದ್ದು ಹೌದು. ಆದರೆ ಏನು ಮಾಡುವುದು? ರಾತ್ರಿಯಿಂದಲೂ ಮಗುವಿಗೆ ಜ್ವರ ಬರುತ್ತಿದೆ. ಒಂದು ಗಳಿಗೆಯೂ ಕಣ್ಣು ಮುಚ್ಚದೆ ನಿದ್ರೆ ಕಳೆದು ಮಗುವನ್ನು ಸಮಾಧಾನ ಪಡಿಸುತ್ತಲೇ ಇದ್ದೇನೆ ನೋಡು. ಆದರೂ ಅಳು ನಿಲ್ಲಿಸುತ್ತಿಲ್ಲ. ಹಾಗಿರುವಾಗ ನಾನು ಹೇಗೆ ಇದನ್ನು ಬಿಟ್ಟು ಬರಲಿ ಹೇಳು ನೋಡುವಾ?''

''ಅದೂ ಹೌದಲ್ಲವಾ? ಆಗಲಿ, ನಾನೊಬ್ಬಳೇ ಹೋಗಿ ಬರುತ್ತೇನೆ'' ಎಂದು ಮಂಟಪದತ್ತ ಹೊರಟಳು ರತ್ನ.

ಹೆಂಡತಿ ಬರುವುದನ್ನು ದೂರದಿಂದಲೇ ನೋಡಿದ ಅವಳ ಗಂಡ ''ನಾನು ಹೇಳಿದ ಮಾತು ನಿಜ ಎಂದು ನೆನೆದಾದರೂ ಬಂದಳಲ್ಲ ಇವಳು'' ಎಂದು ತನ್ನಷ್ಟಕ್ಕೆ ನಕ್ಕು ಬಿಟ್ಟ. ರಂಗನಿಗೆ ಈಗ ಮಂಗನಂತೆ ಲಾಗ ಹಾಕುವ ಮನಸಾಯಿತು. ಮೆಟ್ಟಲು ಹತ್ತಿ ಮಂಟಪದೊಳಗೆ ಬಂದವಳನ್ನು ಕುಳಿತುಕೋ ಎಂದು ಹೇಳಿದ. ರತ್ನ ಕುಳಿತ ಮೇಲೆ ಯಾರಾದರೂ ನೋಡುತ್ತಿದ್ದಾರಾ ಎಂದು ಭಯದಿಂದ ಸುತ್ತಲೂ ಕಣ್ಣು ತಿರುಗಿಸಿ ನೋಡಿದ. ಇಲ್ಲಿ ಇರುವವರು ನಾವಿಬ್ಬರು ಮಾತ್ರ. ನೋಡುವವರು ಇಷ್ಟು ಬೇಗ ಯಾರು ಬರುತ್ತಾರೆ? ಎಂದು ಕೊಳ್ಳುತ್ತಾ ಅವಳ ಹತ್ತಿರ ಬಂದ. ಒಂದು ಕೈಯಿಂದ ಅವಳ ಕೈ ಹಿಡಿದು ಇನ್ನೊಂದು ಕೈಯಿಂದ ಅವಳ ತಲೆ ಸವರಿ ತುದಿಗಣ್ಣಲ್ಲೇ ಮಡದಿಯ ಮುಖ ನೋಡಿದ. ಇದನ್ನು ಕನಸು ಮನಸಿನಲ್ಲೂ ನೆನೆಯದ ರತ್ನ ಒಮ್ಮೆಲೆ ಬೆಚ್ಚಿಬಿದ್ದಳು.

''ಓ ದೇವರೇ, ಇದೆಂತಹ ಅನ್ಯಾಯ? ನಾನೀಗ ಮೋಸದ ಬಲೆಗೆ ಸಿಕ್ಕಿಯೇ ಬಿಟ್ಟೆನಲ್ಲಾ? ಛೇ, ಅತ್ತೆ ಬೇಡ ಹೇಳುವಾಗಲೇ ನಾನು ಸುಮ್ಮನಿರಬೇಕಾಗಿತ್ತು. ಆತುರದಿಂದ ನಾನೊಬ್ಬಳೇ ಇಲ್ಲಿಗೆ ಬರಲೂ ಬಾರದಿತ್ತು'' ಎಂಬ ಸಂಕಟದಲ್ಲಿ ತಳಮಳವಾಯಿತು ಮನಸ್ಸು.

''ಸ್ವಾಮೀ ನನಗೆ ಇನ್ನು ಹೊತ್ತಾಗುತ್ತೆ ನೀವೊಮ್ಮೆ ಪೂಜೆ ಶುರು ಮಾಡುತ್ತೀರಾ?'' ಅವನ

ಕೈಯಲ್ಲಿದ್ದ ತನ್ನ ಕೈಯನ್ನು ಬಿಡಿಸುತ್ತಾ ಹೇಳಿದಳು.

''ಈಗಲೇ ನಿನಗೇನು ಅವಸರ? ಮೊದಲು ಈ ಪೂಜೆ ಮುಗಿಯಲಿ'' ಎಂದು ಅವಳ ಕೆನ್ನೆ ಸವರುತ್ತಾ ನುಡಿದ. ಬೆದರಿ ನಡುಗುತ್ತಿದ್ದ ರತ್ನ ಬೊಬ್ಬೆ ಹೊಡೆಯಲೆಂದು ಬಾಯಿ ತೆರೆದಾಗ -

''ಬೊಬ್ಬೆ ಹೊಡೆಯಬೇಡವೆ ರತ್ನಾ. ಇಗೋ ಇಲ್ನೋಮ್ಮೆ ನೋಡು'' ಎಂದು ಗಡ್ಡವನ್ನೊಮ್ಮೆ ತೆಗೆದು ತೋರಿಸಿ ಆಗಲೇ ಸಿಕ್ಕಿಸಿಕೊಂಡ.

''ಅಯ್ಯಯ್ಯಪ್ಪೋ, ಓ... ಭಗವಂತಾ... ಇದ್ರೇನ್ರಿ ನಿಮ್ಮ ಕತೆ? ನಾವು ನಿಮಗೇನು ಅನ್ಯಾಯ ಮಾಡಿದ್ದೇವೆ ಅಂತ ನೀವು ಹೀಗೆ ನಡು ನೀರಿನಲ್ಲಿ ಕೈಬಿಟ್ಟರಿ? ಇಂತಹ ವೈರಾಗ್ಯ ನಿಮಗೆ ಹೇಗೆ ಬಂತುರೀ? ಇದು ಎಂತಹ ಅವಸ್ಥೇಂತ ನನಗೇ ತಿಳಿಯುತ್ತಿಲ್ಲಪ್ಪಾ! ಅಯ್ಯೋ ದೇವರೇ, ನಿಮ್ಮ ಸುದ್ದಿಯೇ ಇಲ್ಲಾಂತ ಅತ್ತೆ ಎಷ್ಟೊಂದು ಚಿಂತೆ ಮಾಡುತ್ತಿದ್ದಾರೆ ಎಂದೂ ನಿಮಗೆ ತಿಳಿಯುವುದಿಲ್ಲವಾ? ಆದರೂ ಆ ಹೆತ್ತ ತಾಯಿಗೆ ನೀವು ಹೀಗೆ ಮೋಸ ಮಾಡಬಾರದಿತ್ತು. ಓಪ್ಪಾ ನಿಮ್ಮ ಮನಸ್ಸೇ?'' ರತ್ನನಿಗೆ ದುಃಖ ಒತ್ತರಿಸಿ ಬಂತು. ಹೆಗಲಲ್ಲಿದ್ದ ಸೆರಗನ್ನು ತೆಗೆದು ಮುಖ ಮುಚ್ಚಿಕೊಂಡು ಬಿಕ್ಕಿ ಬಿಕ್ಕಿ ಅತ್ತಳು. ಇದನ್ನು ನೋಡಿದ ರಂಗನಿಗೀಗ ನಡುಗಲು ಶುರುವಾಯಿತು.

''ನೋಡು ರತ್ನಾ ನೀನೀಗ ಅಳುತ್ತಲೇ ಕುಳಿತಿ ಎಂದಾದರೆ ಕೆಲಸ ಕೆಡುತ್ತೆ. ನನ್ನ ಮೇಲಿರುವುದು ವೇಷದ ಬಟ್ಟೆಯಲ್ಲದೆ ಬೇರೇನೂ ಅಲ್ಲ ತಿಳಿಯಿತಾ? ಈ ಮಾರಿಯಿಂದಾಗಿ ನಾನು ಬಂದ ಕಷ್ಟ ಕೇಳಿದರೆ ಇದು ಹಗೆಯವರಿಗೂ ಬೇಡಪ್ಪಾ ಎಂದು ನೀನು ನಾಳೆ ಹೇಳುತ್ತಿ. ಈ ಸಂಗತಿಯೆಲ್ಲ ಹಾಗಿರಲಿ. ಮನೆಗೆ ಬಂದ ಮೇಲೆ ಎಲ್ಲ ಹೇಳುವೆನು. ಈ ಸಂಕಟದಿಂದ ನಾನೀಗ ಹೊರಗೆ ಬರಬೇಕಾದರೆ ನಿನ್ನ ಸಹಾಯ ಅಗತ್ಯವಿದೆ ನನಗೆ. ಹಾಗಾಗಿ ನನ್ನ ಗೆಳೆಯರು ಸಿಕ್ಕಿದಾಗಲೂ ಅವರ ಸಹಾಯ ಏನೂ ಕೇಳಿಲ್ಲ ನಾನು. ಯಾಕೆಂದರೆ ಅವರನ್ನೂ ನಂಬುವುದು ಹೇಗೆ? ಒಬ್ಬರಿಗೊಬ್ಬರು ಹೇಳಿಕೊಂಡೇ ನನ್ನ ಗುಟ್ಟು ರಟ್ಟು ಮಾಡಿದರೆ ಎಂದು. ಆಂ... ಈಗ ನೀನೂ ನನ್ನ ಒಂದು ಮಾತು ನೆನಪಿಟ್ಟುಕೊ. ನಾನು ಇಲ್ಲಿದ್ದ ಸಂಗತಿಯನ್ನು ಅಮ್ಮನಿಗಾಗಲಿ ಅಲ್ಲದೆ ಬೇರೆ ಯಾರಿಗೇ ಆಗಲಿ ಹೇಳಿದರೆ ನಿನಗೆ ನನ್ನ ಮೇಲೆ ಆಣೆ ಇದೆ''

''ಆಣೆ ಗೀಣೆ ಎಲ್ಲ ಯಾಕೆ ಹಾಕುತ್ತೀರಿ. ಯಾರಿಗೂ ಹೇಳಬೇಡ ಎಂದು ಹೇಳಿದರೆ ಆಯಿತಲ್ಲಾ''.

''ಆಯಿತು ಕಣೇ ಆಯಿತು. ಬೆಳಿಗ್ಗಿನ ಹೊತ್ತಲ್ಲಿ ಇಲ್ಲಿ ಜನ ಸಂದಣಿ ಇರುವುದಿಲ್ಲ ನೋಡು. ಆದುದರಿಂದ ದಿನಾಲೂ ನೀನು ಇದೇ ಸಮಯಕ್ಕೆ ಬರುತ್ತಿರಬೇಕು ಏನು? ಆಂ... ಹೇಳಿದ ಹಾಗೆ ನನ್ನ ಬಟ್ಟೆಯಲ್ಲಿರುವ ಕೊಳೆ ನೋಡಿದಿಯಾ? ನಾನು ಸ್ನಾನ ಮಾಡಿ ಕೆಲವು ತಿಂಗಳಾಯಿತು ಮಾರಾಯಿತಿ. ಎಷ್ಟು ದಿನಾಂತ ಈ ಕೊಳಕಿನಲ್ಲಿ ನರಳುತ್ತಾ ಇರಬೇಕು ಹೇಳು? ನಾಳೆ ಬರುವಾಗ ಒಂದು ತುಂಡು ಸಾಬೂನು, ಒಂದು ಕಾಚ ಮತ್ತೊಂದು ಕತ್ತಿಯನ್ನೂ ತರಲು ಮರೆಯಬೇಡ ಏನು?''

''ಕತ್ತಿ! ಅದು ಯಾಕೆರೀ ನಿಮಗೆ?'' ಕಣ್ಣಲ್ಲಿದ್ದ ಕಣ್ಣೀರನ್ನು ಸೆರಗಿನಲ್ಲಿ ಒರೆಸಿಕೊಳ್ಳುತ್ತಾ ಕೇಳಿದಳು ರತ್ನ.

''ನಾಳೆ ಇಲ್ಲಿಗೆ ಬಂದ ಮೇಲೆ ನಿನಗೇ ತಿಳಿಯುತ್ತೆ ಬಿಡು, ಆಂ... ಹೀಗೇ ಇನ್ನೂ ಒಂದು ಸಂಗತಿ ಹೇಳುವುದನ್ನು ನಾನು ಮರೆತು ಬಿಟ್ಟೆನಲ್ಲಾ?''

''ಹೌದಾ! ಏನನ್ನು ಮರೆತಿರಿ ಎಂದು ನೆನಪು ಮಾಡಿ ಹೇಳಿ ನೋಡುವಾ?''

''ಬೇರೇನೂ ಅಲ್ಲವೇ, ಮನೆಯ ಊಟ, ಅಮ್ಮನ ಕೈಯ ಮೀನಿನ ಸಾರು ತಿನ್ನದೆ ನನ್ನ ನಾಲಗೆ ಮರಗಟ್ಟಿ ಹೋಗಿದೆಯಲ್ಲಾ. ನಾಳೆ ಅದನ್ನೂ ತರುತ್ತಿಯಾ? ಅದರೊಟ್ಟಿಗೆ ಎರಡು ತುಂಡು ದೀವಿಹಲಸು ಪಲ್ಯ ಇದ್ದರೂ ಬಹಳ ಒಳ್ಳೆಯದಿತ್ತು''

''ಈಗ ಎಲ್ಲಿ ಸಿಗುತ್ತೇರಿ ನಿಮ್ಮ ದೀವಿಹಲಸು? ಅದನ್ನೆಲ್ಲಾ ಮನೆಗೆ ಬಂದ ಮೇಲೆ ಮಾಡಿ ಕೊಡುತ್ತೇನೆ ಆಯಿತಾ?''

''ಆಯಿತು ಮಾರಾಯಿತಿ ಹಾಗೂ ಆಗಬಹುದು''

''ನಾನು ಹೇಳಿದ ಮಾತು ನೆನಪುಂಟಲ್ಲ? ಯಾವ ಒಂದು ಸಂಗತಿಯನ್ನೂ ಈಗಲೇ ಅಮ್ಮನಲ್ಲಿ ಏನಾದರೂ ಹೇಳಿ ಬಿಡಬೇಡ. ನನ್ನ ಕತ್ತು ಹಿಸುಕಿ ಕೊಂದು ಬಿಟ್ಟಾರು ಜೋಕೆ''

''ಆ ಮಾತು ಇರಲಿ, ಊರವರಿಗೆ ತಿಳಿಯದಂತೆ ಗುಟ್ಟು ಮಾಡುವುದು ದೊಡ್ಡ ಸಂಗತಿಯಲ್ಲ, ಆದರೆ ಅತ್ತೆ ಚಿಂತೆಮಾಡುವುದನ್ನು ನನ್ನಿಂದ ನೋಡಲಿಕ್ಕೆ ಆಗುವುದಿಲ್ಲವಲ್ಲಪ್ಪಾ''

''ಅಮ್ಮನ ಮನಸಿನ ನೋವು ನನಗೂ ತಿಳಿಯುತ್ತದೆ ರತಾ! ನೀನು ನೀಲಿ ಬಣ್ಣದ ಕಾಗದವನ್ನೂ ಒಂದು ಪೆನ್ಸಿಲನ್ನೂ ತಂದು ಕೊಟ್ಟರೆ ಅದರಲ್ಲಿ ಎರಡು ಅಕ್ಷರ ಬರೆದು ನಿನ್ನ ಕೈಯಲ್ಲೇ ಕೊಡುತ್ತೇನೆ. ನೀನು ಅದನ್ನು ಅಂಚೆ ಪೆಟ್ಟಿಗೆಗೆ ಹಾಕಿ ಬಿಡು ಆಗೋಲ್ವಾ?''

''ಆಯಿತು, ಹಾಗೇ ಮಾಡುತ್ತೇನೆ. ಮತ್ತೆ... ಹೇಗೂ ನಾಳೆ ಬೆಳಿಗ್ಗೆ ಪೂಜೆಗೆ ಬರ್‍ತೇನಲ್ಲಾ. ಆಗ ನೀವು ಹೇಳಿದ ವಸ್ತುಗಳೆಲ್ಲವನ್ನೂ ಮರೆಯದೆ ನೆನಪಲ್ಲಿ ತಂದು ಕೊಡುತ್ತೇನೆ'' ತಮಾಷೆ ಮಾಡುವಂತೆ ಕುಲು ಕುಲು ನಗುತ್ತಾ ಹೇಳಿದಳು ರತ್ನ. ಆಮೇಲೆ ಸ್ವಲ್ಪ ಹೊತ್ತು ಅಲ್ಲಿದ್ದು ಊರಿನ ಆ ಸುದ್ದಿ ಈ ಸುದ್ದಿಗಳನ್ನೆಲ್ಲಾ ಗಂಡನಿಗೆ ಹೇಳಿ ಅಲ್ಲಿಂದ ಹೊರಟಳು.

ಸೊಸೆಯ ನಾಟ್ಯದಯಂತಹ ಕುಣಿತವನ್ನು ಗಮನಿಸಿದ ಗಂಗಕ್ಕ -

''ಹೌದೇ, ಏನು? ಬಹಳ ವೈಯಾರದಲ್ಲಿ ದೋಸೆ ಕಾಯಿಸುತ್ತಿರುವಂತೆ ದಿಗಿಣ ತೆಗೆಯುತ್ತಿದ್ದಿಯಲ್ಲಾ? ಈ ಮಟ ಮಟ ಮಧ್ಯಾಹ್ನ ಅದೆಂತಹ ಪೂಜೆಯೇ ನಿನ್ನದು?''

''ಅತ್ತೆ... ಇನ್ನು ಎರಡು ಮೂರು ದಿನದೊಳಗೆ ನಿಮ್ಮ ಮಗನ ಪತ್ರ ಬರುತ್ತದಂತೆ, ಹಾಗೇಂತ ಸ್ವಾಮಿಗಳು ಹೇಳಿದರು ಗೊತ್ತಾಯಿತಾ?''

''ಆಗಲಿ, ನಾನೂ ನೋಡುತ್ತೇನೆ. ನೀನು ಹೇಳಿದ ಹಾಗೆ ಎರಡು ತಪ್ಪಿದರೆ ಮೂರು ದಿನದೊಳಗೆ ರಂಗನ ಪತ್ರ ಬಂತು ಎಂದಾದರೆ ಸ್ವಾಮಿಗಳ ಮಾತಿನ ಮೇಲೆ ವಿಶ್ವಾಸ ಇಡುತ್ತೇನೆ. ಇಲ್ಲಾ ಅಂದ...ರೆ ಏನು ಮಾಡುತ್ತೇನೆ ನೋ...ಡು'' ಹುಲಿ ಗರ್ಜಿಸಿದಂತೆ ಅತ್ತೆ ಗಂಟಲು ಬಿರಿದಾಗ ರತ್ನನ ಗಂಟಲ ಪಸೆ ಆರಿತು.

ಗಿರಿಜನ ಮಗುವಿನ ಜ್ವರ ನಿಂತು ಅದು ಆರೋಗ್ಯವಾಗಿದೆ ಎಂದು ತಿಳಿಯಿತು ರತ್ನಳಿಗೆ. ಆದುದರಿಂದ ''ಮಗುವನ್ನು ಎತ್ತಿಕೊಂಡು ನಾನೂ ನಿನ್ನೊಟ್ಟಿಗೆ ಪೂಜೆಗೆ ಬರುತ್ತೇನೆ'' ಎಂದು ಅವಳೇನಾದರೂ ಹೇಳಿದರೆ? ಎಂಬ ಆಲೋಚನೆ ಅವಳ ತಲೆಗೆ ಹೋಯಿತು. ಅದಕ್ಕಾಗಿ ಅವಳಿಗೆ ತಿಳಿಯದಂತೆ ಬೇಗ ಬೇಗ ಸೀರೆ ರವಕೆ ಉಟ್ಟುಕೊಂಡು ಹೊರಟಳು ರತ್ನ. ಹೂ, ಹಿಂಗಾರವೂ ಹಣ್ಣು, ಕಾಯಿಯೂ ಇದ್ದ ಹರಿವಾಣವನ್ನು ಕೈಯಲ್ಲಿ ಹಿಡಿದುಕೊಂಡು, ಕಾಗದವನ್ನು ಮಡಿಲಲ್ಲಿ ಬಚ್ಚಿಟ್ಟುಕೊಂಡು, ಉಳಿದ ವಸ್ತುಗಳನ್ನು ಚೀಲಕ್ಕೆ ತುಂಬಿಸಿಕೊಂಡು ವೇಗವಾಗಿ ಹೆಜ್ಜೆ ಹಾಕಿಕೊಂಡು

ಮಂಟಪದಲ್ಲಿಗೆ ಬಂದಳು.

ಮಡದಿ ತಂದವುಗಳನ್ನು ನೋಡಿ ರಂಗನ ಮುಖದಲ್ಲಿ ಸಂತೋಷ ಮೂಡಿತು. ಮೊದಲು ಅವನು ಕತ್ತಿಯನ್ನು ಕೈಗೆ ತೆಗೆದುಕೊಂಡು ಕಾಣಿಕೆ ದುಡ್ಡಿದ್ದ ಡಬ್ಬದ ಬುಡಕ್ಕೆ ಕುಟ್ಟಿದ. ಕುಟ್ಟಿ ದೊಡ್ಡ ತೂತಾದ ಮೇಲೆ ಅದರಲ್ಲಿದ್ದ ನೋಟುಗಳನ್ನು ಆದಷ್ಟು ಹೊರಗೆ ತೆಗೆದ. ಅದನ್ನು ರತ್ನನ ಕೈಗೆ ಕೊಡುವಾಗ -

''ಇಷ್ಟು ದಿನ ನಾನು ದುಡಿದ ಹಣ ನೋಡಿದಿಯಾ? ಇಗೋ ತೆಗೆದುಕೊ. ಯಾರಿಗೂ ತಿಳಿಯದಂತೆ ಮನೆಯ ಪೆಟ್ಟಿಗೆಯಲ್ಲಿ ಜೋಪಾನ ಮಾಡಿ ಇಡು'' ಎಂದು ಹೇಳಿದ. ಅವಳು ಆಗಲೇ ನೋಟುಗಳನ್ನು ಮಡಿಸಿ, ಮಡಿಸಿ ರವಕೆಯೊಳಗೆ ಬಚ್ಚಿಟ್ಟಳು. ಆ ಮೇಲೆ ಅಕ್ಕಿರೊಟ್ಟಿಯನ್ನು ತುಂಡು ಮಾಡಿ ಮೀನಿನ ಸಾರಿಗೆ ಮುಳುಗಿಸಿ ಬಾಯಿಗೆ ಇಡುತ್ತಿದ್ದ ಗಂಡನ ಜೊತೆ -

''ಬೇಗ ಒಮ್ಮೆ ಕಾಗದ ಬರೆದು ಕೊಡಿ ಎಂದು ಅವಸರ ಮಾಡಿದಳು. ಪೆನ್ಸಿಲನ್ನೂ ಕಾಗದವನ್ನೂ ಹಿಡಿದು ಪತ್ರ ಬರೆಯಲು ನೋಡಿದ. ಆದರೆ ಒಂದೇ ಒಂದು ಅಕ್ಷರವೂ ಅವನ ನೆನಪಿಗೆ ಬಾರದೇ ಹೋಯಿತು. ಕೊನೆಗೆ ನಾಲ್ಕನೇ ತರಗತಿ ಕಲಿತ ರತ್ನನೇ ಎರಡು ಮಾತು ಬರೆದು ನಾಲಗೆಯ ಉಗುಳಿನಿಂದ ಕಾಗದವನ್ನು ಅಂಟಿಸಿದಳು.

ನೆತ್ತಿಯ ಮೇಲಿದ್ದ ಸೂರ್ಯ ಬೆಂಕಿಯಂತೆ ಉರಿಯುತ್ತಿದ್ದ. ಆಗಲೇ ಪೇಟೆಗೆ ಹೋಗಿದ್ದ ಸೋಂಪನ ಸವಾರಿ ಏದುರುಸಿರು ಬಿಡುತ್ತಾ ಬಂತು. ಅವನನ್ನು ನೋಡಿದ ಕೂಡಲೇ ರಂಗನ ಎದೆ 'ದಡಕ್ ದಡಕ್' ಎಂದಿತು. ಈ ಬಿಕನಾಸಿ ನನ್ಮಗ ಬಂದ ಎಂದಾದರೆ ಏನಾದರೂ ಗಂಡಾಂತರ ತಂದುಕೊಂಡು ಬಂದನಾ ಎಂಬ ಭಯ ಅವನಿಗೆ. ಆದರೆ ಬಂದಾಗಲೆಲ್ಲಾ ತಮಾಷೆಗೆಂದು ನಾನಿಟ್ಟ ಬಿಳಿ ಕಲ್ಲಿಗೆ ಅಡ್ಡ ಉದ್ದ ಬಿದ್ದು ಕೈತುಂಬಾ ಕಾಣಿಕೆಯೂ ಹಾಕದೆ ಅವನೇನೂ ಇಲ್ಲಿಂದ ಮಿಸುಕಾಡುವವನಲ್ಲ ಎಂಬ ಸಂತೋಷವೂ ರಂಗನಿಗಿತ್ತು. ಬೆವರು ಸುರಿಸುತ್ತಾ ಅವನು ಬರುವ ರಭಸವನ್ನು ನೋಡುವಾಗ ನಗುವೂ ಬಂತು. ಈಗ ಅವನೊಟ್ಟಿಗೆ ಆಸರೆ ಕೊಡೆಯವನೂ ಇಲ್ಲ. ಹಿಂದೆಯೇ ಬೆನ್ನಲ್ಲಿ ಬರುತ್ತಿದ್ದ ಪಹರೆಯವರೂ ಇಲ್ಲ. ಶ್ರೀಮಂತಿಕೆಯೊಟ್ಟಿಗೆ ಬೋಂದಲನಂತಿದ್ದ ಹೊಟ್ಟೆಯೂ ಇಳಿದು ಹೋಗಿದೆ' ಆಮ ಭೀಮನಿಗೆ ಹೆದರದವ ಶಾವಿಗೆಯ ದುಗ್ಗುವಿಗೆ ಹೆದರಿದನಂತೆ' ಹಾಗಾಯಿತು ಇವನ ಗತಿ''.

''ಸ್ವಾಮೀ, ಗ್ರಂಥ ವಾಚನಕ್ಕೆ ಎಲ್ಲಿ ಏರ್ಪಾಡು ಮಾಡಲಿ ಸ್ವಾಮೀ...? ಇಡೀ ಊರಿನವರು ಎಲ್ಲರೂ ಈ ಪುಣ್ಯದ ಕತೆ ಕೇಳಲೆಂದು ಖಂಡಿತವಾಗಿಯೂ ಬಾರದೆ ಇರಲಾರರು. ಹಾಗಿರುವಾಗ ಇಲ್ಲಿದ್ದ ಸ್ಥಳ ಏನೂ ಸಾಕಾಗಲಿಕ್ಕಿಲ್ಲ ಅಲ್ಲವೇ? ಅದಕ್ಕೆ ಬೇಕಾಗಿ ದೊಡ್ಡ ಮೈದಾನದಲ್ಲೇ ಚಪ್ಪರ ಏರಿಸಿದರೆ ಹೇಗೆ? ಎಂದು ನಿಮ್ಮ ಅಪ್ಪಣೆ ಕೇಳಲೆಂದು ಬಂದಿದ್ದು ಸ್ವಾಮಿ ನಾನು'' ವೈರಾಗ್ಯದತ್ತ ವಾಲುತ್ತಾ ಹೋಗುತ್ತಿರುವ ಈ ಪಿಲ್ಚಾಂಡಿಯ ಉತ್ಸಾಹ ನೋಡಿ ಆಶ್ಚರ್ಯವಾಯಿತು ರಂಗನಿಗೆ. ಆದರೂ ಸೋಂಪನ ಸೊರಗಿ ಕಡ್ಡಿಯಂತಾಗಿದ್ದ ದೇಹ, ಮಾಟೆಯೊಳಗೆ ಹೋಗಿ ಮಿನುಗುತ್ತಿದ್ದ ಅವನ ಕಣ್ಣುಗಳನ್ನೇ ನೋಡುತ್ತಾ 'ಮಗ ದಾರಿಗೆ ಬಂದ' ಎಂದು ಮನಸಲ್ಲಿ ಹೇಳಿಕೊಂಡು -

''ದೇವರೇ, ಭಕ್ತ ಎಂದರೆ ನೀನು ನೋಡಪ್ಪಾ. ಆದುದರಿಂದ ನಿನ್ನ ಆಶೆಗೆ ನಾನು ಏನು ಅಡ್ಡಿ ಗಿಡ್ಡಿ ಮಾಡುವವನಲ್ಲ. ಈ ಪುಣ್ಯದ ಕಾರ್ಯ ನಿನ್ನ ಇಷ್ಟ ಪ್ರಕಾರವೇ ನಡೆಯಲಿ. ಇಲ್ಲಿ ಕುಳಿತಿರುವ ಅಮ್ಮನ ದಯೆಯೂ ನಿನಗಿರಲಿ'' ಕೈ ಎತ್ತಿ ಸೋಂಪನ ತಲೆ ಸವರಿ ಕಳಿಸಿದ ರಂಗ.

ಮಾವಿನ ಮರದ ನೆರಳಲ್ಲಿ ಕುಕ್ಕರ ಕುಳಿತು ಸೋಗೆ ಹೆಣೆಯುತ್ತಿದ್ದಳು ಗಂಗಕ್ಕ. ಚಪ್ಪಲಿ ಹಾಕಿದ ನಡತೆಯ ಶಬ್ದಕ್ಕೆ ಕೆಳಗೆ ಹಾಕಿದ ತಲೆಯನ್ನು ಸರಕ್ಕಂತ ಮೇಲಕ್ಕೆತ್ತಿದಳು. ಮನೆ ಮನೆಗೆ ಪತ್ರ ಹಂಚುವ ಪೇದೆ ಪಾಗಾರ ದಾಟಿ ಅಂಗಳ ಹತ್ತಿಕೊಂಡು ಅವಳು ಕುಳಿತಲ್ಲಿಗೇ ಬರುತ್ತಿದ್ದ.

''ಇವನು ಯಾರಿಗೆ ಪತ್ರ ತಂದ? ನನಗೆ ಏನೋ? ಇಲ್ಲಪ್ಪ ನನಗಾಗಿರಲಿಕ್ಕಿಲ್ಲ. ಹುಟ್ಟಿ ಇಷ್ಟು ದೊಡ್ಡ ಹೆಂಗಸಾಗಿದ್ದೇನೆ ಆದರೆ ಒಮ್ಮೆಯೂ ನನಗೊಂದು ಪತ್ರ ಬಂದ ನೆನಪಿಲ್ಲ. ಈಗ ಇವನು ಕೊಟ್ಟರೆ ತೆಗೆದುಕೊಳ್ಳುವುದಾ ಬೇಡವಾ?'' ಎಂಬ ಅನುಮಾನದಲ್ಲಿ ಬಿದ್ದ ಗಂಗಕ್ಕ ''ಅಮ್ಮಾ... ರತ್ನಾ... ಇಲ್ಲಿಗೊಮ್ಮೆ ಬಾ ಮಗಾ... ಪೇದೆಯವರು ಯಾವುದೊ ಪತ್ರ ತಂದಿದ್ದಾರೆ. ಅದನ್ನೊಮ್ಮೆ ನೋಡು ಮಗಾ...'' ಎಂದು ಸೊಸೆಯನ್ನು ಕರೆದು ಹೇಳಿದಳು. ಬಾಗಿಲಲ್ಲೇ ನಿಂತು ಅಂಗಳದಲ್ಲಿ ನಡೆಯುತ್ತಿರುವುದನ್ನು ಆಲಿಸುತ್ತಾ ನೋಡುತ್ತಿದ್ದರೂ ಏನೂ ತಿಳಿಯದವಳಂತೆ ಈಚೆಗೆ ಬಂದ ರತ್ನ ಪತ್ರ ಪಡೆದು ಓದಿದವಳೇ-

''ಅತ್ತೆ ಇದು ನಿಮ್ಮ ಮಗನ ಪತ್ರ'' ಎಂದಳು

''ಹೌದೇ...! ಸುಳ್ಳೇನೂ ಹೇಳಬೇಡ, ದೇವರಾಣೆಗೂ ಇದು ರಂಗನದೇ ಪತ್ರವಾ? ಇನ್ನೊಮ್ಮೆ ಸರಿಯಾಗಿ ನೋಡು! ಏನೆಂದು ಬರೆದಿದ್ದಾನೆ ಅವನು? ಬೇಗೊಮ್ಮೆ ಓದಿ ಹೇಳಮ್ಮಾ''

''ನಾನು ಸುಖದಲ್ಲಿ ಇದ್ದೇನೆ. ಊರಿಗೆ ಬೇಗ ಬರುತ್ತೇನೆ'' ಎಂದು ಇಷ್ಟೇ ಬರೆದಿದ್ದಾರೆ ಅತ್ತೆ. ರತ್ನ ತಾನು ಬರೆದು ಅಂಚೆ ಡಬ್ಬಿಗೆ ಹಾಕಿದ ಕಾಗದವನ್ನೇ ಅತ್ತೆಗೆ ಓದಿ ಹೇಳಿದಳು. ಇದನ್ನು ಕೇಳಿದ ಗಂಗಕ್ಕ ದಂಗಾಗಿ ಹೋದಳು. ''ನಿಜಕ್ಕೂ ಆ ಸ್ವಾಮಿ ಬಹಳ ಕಾರಣಿಕದವರಪ್ಪಾ. ಅವರು ಹೇಳಿದ ಹಾಗೆ ಎರಡೇ ದಿನದೊಳಗೆ ರಂಗನ ಪತ್ರ ಬಂತಪ್ಪಾ. ಆಗಲಿ ದೇವರು ದೊಡ್ಡವನು. ಹೌದಾ ಮಗಳೇ ರತ್ನಾ ನಾಳೆ ಬೆಳಿಗ್ಗೆ ನಾನೂ ನಿನ್ನೊಟ್ಟಿಗೆ ಪೂಜೆಗೆ ಬರುತ್ತೇನೆ ಮಗಾ ಆಯಿತಾ? ನನಗೂ ಆ ಪುಣ್ಯಾತ್ಮರನ್ನು ಕಣ್ಣು ತುಂಬಾ ನೋಡಬೇಕೆನಿಸುತ್ತದೆ'' ರತ್ನನ ಎದೆ ಬಡಿತ ಆಗಲೇ ನಿಂತು ಹೋದ ಹಾಗೆ ಆಯಿತು. ಅವಳಿಗೆ ಗಂಗಕ್ಕನ ಮನಸಿಗೂ ನೋವು ಮಾಡಲು ಸಾಧ್ಯವಾಗದೆ-

''ಅದು ಹೇಗಾಗುತ್ತೆ ಅತ್ತೆ? ದಿನಾ ನಾನೊಬ್ಬಳೇ ಬಂದು ಪೂಜೆ ಮಾಡಬೇಕೂಂತ ಸ್ವಾಮಿಗಳ ಅಪ್ಪಣೆಯಾಗಿದೆಯಲ್ಲಾ?'' ಉಪಾಯದಲ್ಲಿ ಹೇಳಿದಳು ರತ್ನ.

''ಹೌದಾ ಮಗಾ, ಹಾಗೆ ಅಪ್ಪಣೆ ಮಾಡಿದ್ದಾರಾ? ಆಯಿತು ಹಾಗಾದರೆ ನೀನೊಬ್ಬಳೇ ಹೋಗಿ ಬಾ ಆಯಿತಾ? ಅಂ... ನೀನು ಅವನಿಗೊಂದು ಪತ್ರ ಬರೆದು ಹಾಕು ಮಗಾ... ನಾನು ಹೇಳಿದೆ ಎಂದು ಬರೆ. ಅದೇನೆಂದರೆ ಎರಡು ದಿನದ ಮಟ್ಟಿಗಾದರೂ ಕೆಲಸಕ್ಕೆ ರಂಗ ರಜೆ ಹಾಕಿ ಒಮ್ಮೆ ಇಲ್ಲಿಗೆ ಬಂದು ಹೋಗಲಿ. ನಾವಿಬ್ಬರೂ ಒಟ್ಟಿಗೆ ಹೋಗಿ ಸ್ವಾಮಿಗಳ ದರ್ಶನ ಪಡೆದುಕೊಂಡು ಬರುತ್ತೇವೆ. ಪಾ...ಪ, ರಂಗನಿಗೆ ಈ ಪುಣ್ಯಾತ್ಮರ ಕಾಲಿಗೆ ಬಿದ್ದು ಆಶೀರ್ವಾದ ಪಡೆಯುವ ಭಾಗ್ಯ ಆದರೂ ಸಿಗಲಿ. ನೀನು ಹಾಗೆಯೇ, ನಾನು ಹೇಳಿದ ಹಾಗೆ ಬರೆ ಮಗಾ''

''ಆಯಿತು ಅತ್ತೆ. ನೀವು ಹೇಳಿದಂತೆ ಬರೆಯುತ್ತೇನೆ'' ಉಕ್ಕಿ ಬಂದ ನಗುವನ್ನು ತಡೆಯುತ್ತಾ ಹೇಳಿದಳು.

ಮನೆಯಲ್ಲಿ ನಡೆದ ಸಂಗತಿಯನ್ನು ಗಂಡನಿಗೆ ವರದಿ ಒಪ್ಪಿಸಿದಳು ರತ್ನ. ಅಮ್ಮನಿಗೆ ತನ್ನ ಮೇಲಿದ್ದ ಪ್ರೀತಿ, ಅವಳ ಒಡಲ ನೋವು ಇದನ್ನೆಲ್ಲ ನೆನೆದೇ ರಂಗನ ಹೊಟ್ಟೆ ಉರಿಯಿತು.

''ತಾಯಿಗೆ ಒಬ್ಬನೇ ಮಗನಾದರೂ ಅವಳೇ ದುಡಿದು ಬೆಂಡಾದಳಲ್ಲದೆ ನನ್ನಿಂದ ಏನು

ಪ್ರಯೋಜನ ಆಯಿತು ಅವಳಿಗೆ? ಮೊದಲು ಪುಂಡರ ಕಾಟದಿಂದ ದೂರವಾಗಬೇಕು ನಾನು. ಒಂದು ಗೂಡಂಗಡಿಯನ್ನಾದರೂ ಮಾಡಿಕೊಂಡು ಬದುಕಿನ ದಾರಿ ನೋಡಿಕೊಳ್ಳಬೇಕು. ತಾಯಿಯ ದುಡಿತವನ್ನು ನಿಲ್ಲಿಸಿ ಇನ್ನಾದರೂ ಅವಳಿಗೆ ಸ್ವಲ್ಪ ವಿಶ್ರಾಂತಿಯನ್ನು ತೆಗೆದುಕೊಳ್ಳಲು ಅವಕಾಶ ಮಾಡಿ ಕೊಡಬೇಕು.'' ಎಂದು ಒಡಲಲ್ಲಿದ್ದ ಸಂಕಟವನ್ನು ಮಡದಿಗೆ ಹೇಳಿದ.

''ಹೌದು, ನೀವು ಹೇಳುವುದೇ ಸರಿ, ಅತ್ತೆ ಒಬ್ಬರೇ ದುಡಿದಿದ್ದನ್ನು ಎಷ್ಟು ದಿನಾಂತ ನಾವಿಬ್ಬರೂ ತಿನ್ನುವುದು?''

ಪೂಜೆಯ ನೆಪದಲ್ಲಿ ಮಂಟಪಕ್ಕೆ ಬರುತ್ತಿದ್ದ ರತ್ನ ಕಾಣಿಕೆ ಡಬ್ಬಿಯ ದುಡ್ಡು ಕೊಂಡು ಹೋಗಿ ಪೆಟ್ಟಿಗೆಯಲ್ಲಿ ಜೋಪಾನ ಮಾಡಿಕೊಂಡಳು. ದುಡ್ಡು ತೆಗೆದು ಡಬ್ಬಿ ಖಾಲಿಯಾದ ಮೇಲೆ ರಂಗನಿಗೂ 'ಅಯ್ಯಪ್ಪಾ' ಎಂದ ಹಾಗಾಯಿತು. ಇನ್ನು ಇಲ್ಲಿಂದೊಮ್ಮೆ ಓಡಿ ಹೋದರೆ ಸಾಕಪ್ಪ! ಅಲ್ಲದಿದ್ದರೆ ವಾಚನ ಗೀಚನ ಎಂದು ಸೀಂತ್ರಿ ಸೋಂಪನ ಮುಂದೆ ಸೋಲಬೇಕಾದೀತು. ಇಂತಹ ಯೋಚನೆ ಬಂದ ಕೂಡಲೇ

''ಹೌದಾ ರತ್ನ.....ನಾಳೆ ಬೆಳಿಗ್ಗೆಯಿಂದಲೇ ಈ ನಾಟಕಕ್ಕೆ ಮುಕ್ತಾಯ ಹಾಡಬೇಕೆಂದಿದ್ದೇನೆ. ಹಾಗಾಗಿ ನಾಳೆ ಸುಮಾರು ನಡು ಮಧ್ಯಾಹ್ನದ ಹೊತ್ತಿಗೆ ನನ್ನ ಎರಡು ಅಂಗಿ ಬಟ್ಟೆಗಳನ್ನೂ ಮತ್ತೆ ಸ್ವಲ್ಪ ದುಡ್ಡನ್ನೂ ತೆಗೆದುಕೊಂಡು ಸೋಮೇಶ್ವರ ದೇವಸ್ಥಾನದ ಬಳಿ ಹೋಗಿ ಅಲ್ಲಿ ನಿಂತುಕೋ'' ಅವನು ಮಾತು ಮುಗಿಸಬೇಕಾದರೆ ಸೋಂಪ ಬರುತ್ತಿರುವುದನ್ನು ಬೆರಳಿನಲ್ಲಿ ತೋರಿಸಿದಳು ರತ್ನ. ರಂಗ ಕೋಪದಲ್ಲಿ ''ಮತ್ತೆ ಇವನ ಪಿಂಡ ಬಂತಾ'' ಎಂದು ಬೈದ. ಬೇಗ ಬೇಗ ಆರತಿ ಬತ್ತಿಗೆ ಬೆಂಕಿ ಹಚ್ಚಿ ಬಿಳಿ ಕಲ್ಲಿಗೆ ಮಂಗಳಾರತಿ ಮಾಡಿದ. ಆಗಲೇ ಪೂಜೆ ಮುಗಿಸಿದಂತೆ ನಟನೆ ಮಾಡಿ ರತ್ನನ ಕೈಗೆ ಪ್ರಸಾದ ಹಾಕಿದ. ಇದನ್ನು ನೋಡಿದ ಸೋಂಪ ಭಯ ಭಕ್ತಿಯಲ್ಲಿ ಬಂದು ತಾನೂ ಕೈಯೊಡ್ಡಿ ನಿಂತ. ಆಮೇಲೆ -

''ಸ್ವಾಮೀ ನಾಡಿದ್ದು ಸೋಮವಾರದಂದು ಊರ ದೈವ ಜುಮಾದಿಯಜ್ಜನ ಸಾನದಲ್ಲಿ ಕೋಲ ಉಂಟಲ್ಲಾ? ಅದರ ಮರುದಿನ ಗ್ರಂಥ ವಾಚನ ಪ್ರಾರಂಭಿಸಿದರೆ ಹೇಗೆ ಸ್ವಾಮಿ?'' ಬಾಯಿ ತುಂಬಾ ಎಲೆ ಅಡಿಕೆ ತುಂಬಿಸಿಕೊಂಡು ಆಡಿನಂತೆ ಮೆಲ್ಲುತ್ತಾ ಕೆಂಪಾದ ಅವನ ನಾಲಗೆ, ಕೆನ್ನೆಯ ಮೇಲೆ ಕಣ್ಣಿನ ಬಳಿ ಅಂಟಿಸಿದ್ದ ವೀಳ್ಯದೆಲೆಯ ತುದಿಯನ್ನೇ ನೋಡುತ್ತಿದ್ದ ರಂಗ ''ನೀನೊಬ್ಬ ಯಾವ ಶನಿಯವನೋ? ಯಾವ ಶಾಪದವನೋ?'' ಸೋಂಪನನ್ನು ಮನಸಿನಲ್ಲೇ ಬೈದಷ್ಟೂ ರಂಗನಿಗೆ ಖುಶಿಯೇ ಖುಶಿ.

''ನಿನಗೆ ಅಷ್ಟೊಂದು ಅವಸರ ಇದ್ದರೆ ನೀನೆ ಗ್ರಂಥ ಓದಲು ಪ್ರಾರಂಭಿಸಪ್ಪಾ. ನಾನೇಕೆ ಬೇಡ ಹೇಳಲಿ? ನಿಂತ ಕಾಲಲ್ಲಿ ಎಲ್ಲವೂ ಆಗಬೇಕು ಎಂದಾದರೆ ನನ್ನಿಂದ ಆಗಲಿಕ್ಕಿಲ್ಲ'' ಇನ್ನು ನನಗೆ ನಿನ್ನ ಹಂಗು ಯಾತಕ್ಕೆ? ಎಂದು ಹೇಳುವಂತಿತ್ತು ಅವನ ಮಾತಿನ ಅರ್ಥ. ಸೋಂಪ ಒಮ್ಮೆಲೆ ಬೆಪ್ಪನಂತಾದ. ದೇವಿಗೆ ಅಡ್ಡ ಬೀಳುವುದನ್ನೂ ಮರೆತು ಬಂದ ಹಾಗೆ ಅಲ್ಲಿಂದ ಹಿಂತಿರುಗಿದ.

ಅಷ್ಟಿಷ್ಟು ಹೆರಿಗೆ ಮಾಡಿಸಿ ತಿಳಿದಿದ್ದ ಗಂಗಕ್ಕ ಅಂದು ಬೆಳಿಗ್ಗೆನೆ ಬಿಕ್ಕಮೇಸ್ತನ ಮಡದಿಯನ್ನು ಹೆರಿಗೆ ಮಾಡಿಸಲು ಎಂದು ಹೋಗಿದ್ದಳು. ''ಅತ್ತೆ ಮನೆಯಲ್ಲಿಲ್ಲದಿರುವುದೂ ಒಂದು ಲೆಕ್ಕದಲ್ಲಿ ಒಳ್ಳೆಯದೇ ಆಯಿತು'' ಎಂದು ನೆನೆದಳು ರತ್ನ. ಅಂಗಳದಲ್ಲಿದ್ದ ಹಲಸಿನ ಮರದಿಂದ ಏಳೆಂಟು ಎಲೆ ಕಿತ್ತು ತಂದಳು. ಗೋರಂಟಿ, ಗೋಸಂಪಿಗೆ, ದಾಸವಾಳ ಹೂವಿನೊಟ್ಟಿಗೆ ತುಂಡು ಮಾಡಿದ

ಬಾಳೆ ಹಣ್ಣು, ತೆಂಗಿನಕಾಯಿಯನ್ನು ಎಲೆಗೆ ಹಂಚಿದಳು. ಅದರ ಬದಿಗೆ ಚಿಟಿಕೆಯಷ್ಟು ಕುಂಕುಮ ಮತ್ತು ಅರಸಿನ ಹುಡಿಯನ್ನು ಹಾಕಿದಳು. ಒಂದು ಪಾಲು ಅತ್ತೆಗೆಂದು ತೆಗೆದಿಟ್ಟಳು. ಬಾಕಿದ್ದನ್ನು ಹಿಡಿದುಕೊಂಡು ನೆರೆಮನೆಗೆ ಹೋದಳು.

''ತಗೊಳ್ಳಿ ಪ್ರಸಾದ, ಇಂದಿಗೆ ಮುಗಿಯಿತಪ್ಪಾ ನಾನು ಕೈಗೊಂಡ ಪೂಜೆ''

''ಹೌದಾ? ಪೂಜೆ ಮುಗಿಯಿತಾ? ಯಾವಾಗ ಬರ್ತಾರಂತೆ ರಂಗಣ್ಣ ಊರಿಗೆ?'' ಗಿರಿಜ ಕೇಳಿದಳು.

''ನಾಡಿದ್ದು ಸಂಕ್ರಾತಿಯೊಳಗೆ ಬರುತ್ತಾರೆ ಎಂದು ಸ್ವಾಮಿಗಳು ಹೇಳಿದರು''

ಹಾಗಾದರೆ ಯುಗಾದಿ ಹಬ್ಬಕ್ಕೆ ರಂಗಣ್ಣ ಇಲ್ಲಿರುತ್ತಾರೆ ಅನ್ನು. ಹಬ್ಬಕ್ಕೆ ನಿನಗೆ, ಗಂಗಕ್ಕನಿಗೆ ಹೊಸ ಬಟ್ಟೆಯೂ ಬರಬಹುದಲ್ಲಾ? ಆದರೂ, ಆಗ ಬಹುದಪ್ಪಾ ಆ ಸ್ವಾಮಿಗಳ ಕಾರಣಿಕ!'' ಅವಳು ಆಶ್ಚರ್ಯದಿಂದ ಹೇಳಿದಾಗ ರತ್ನ ವೈಯ್ಯಾರದಿಂದ ಹಲ್ಲು ಬಿಟ್ಟಳು.

ಕೋಳಿ ಕೂಗಿದಾಗಲೇ ರಂಗ ಮಲಗಿದ್ದಲ್ಲಿಂದ ಎದ್ದು ಪೊದೆಯತ್ತ ನಡೆದ. ಹೋಗುವಾಗ ಖಾಲಿ ಮಾಡಿದ್ದ ಕಾಣಿಕೆ ಡಬ್ಬಿಯನ್ನು ಕೊಂಡು ಹೋಗಿ ಪೊದೆಯತ್ತ ಎಸೆದ. ಕಣ್ಣು ಕಟ್ಟಿನ ಪೂಜೆ ಮಾಡುತ್ತಿದ್ದ ಬಿಳಿ ಕಲ್ಲನ್ನು ಹೊರಗೆಸೆದು ಅದರ ಮೇಲಿದ್ದ ಹೂಗಳನ್ನು ಚೆದುರಿಸಿದ. ಬದಿಯಲ್ಲಿದ್ದ ಕಾಲು ದೀಪವನ್ನೂ ನೀರಿನ ತಂಬಿಗೆಯನ್ನೂ ಒಂದು ಕಡೆ ಹಾಕಿದ. ಆಮೇಲೆ ಬಂದು ಮಂಟಪದ ಮೆಟ್ಟಲಲ್ಲಿ ಕುಳಿತ. ಊರು ಮುಳುಗಿದಂತೆ ಮುಖ ಊದಿಸಿಕೊಂಡು ತಲೆಯಮೇಲೆ ಕೈ ಹೊತ್ತುಕೊಂಡ. ಎಂದಿನಂತೆಯೇ ಆ ದಾರಿಯಲ್ಲಿ ಹೋಗುತ್ತಾ ಬರುತ್ತಿದ್ದವರು ಸ್ವಾಮಿಗಳಿಗೆ ಕೈ ಮುಗಿದರು. ಆದರೆ ಸ್ವಾಮಿಗಳು ಮರು ಕೈ ಎತ್ತದ್ದು ನೋಡಿ ಅವರಿಗೆ ಬೇಸರವಾಯಿತು. ಗಳಿಗೆಯಲ್ಲಿ ಈ ಸಂಗತಿ ಊರೆಲ್ಲಾ ಹರಡಿಹೋಯಿತು ''ಏನಂತೆ? ಏನಾಯಿತಂತೆ?'' ಎಂದು ಒಬ್ಬರಲ್ಲೊಬ್ಬರು ಕೇಳಿಕೊಂಡು ಮಂಟಪದತ್ತ ನಡೆದರು. ಬಾವಿಯ ಬಳಿ ಮಡದಿ ಸೇದಿ ಕೊಟ್ಟ ನೀರಲ್ಲಿ ಮೀಯುತ್ತಿದ್ದ ಸೋಂಪನಿಗೂ ಸುದ್ದಿ ತಿಳಿಯಿತು. ಕಿವಿಯಲ್ಲಿ, ಕತ್ತಿನಡಿಯಲ್ಲಿದ್ದ ಸಾಬೂನಿನ ನೊರೆಯನ್ನೂ ತೊಳೆಯದೆ ಒದ್ದೆ ಬಟ್ಟೆಯಲ್ಲಿಯೇ ಓಡುತ್ತಾ ಹೋದ. ಯಾರನ್ನೂ ಕಣ್ಣೆತ್ತಿ ನೋಡದ ಸ್ವಾಮಿಗಳ ಮುಖ ಕೋಪದಲ್ಲಿ ಬುಸು ಬುಸು ಎಂದು ಕೆಂಪಡರಿತ್ತು. ''ಸ್ವಾಮೀ, ನಿಮ್ಮ ಈ ರೀತಿಯ ಮೌನಕ್ಕೆ ಏನು ಕಾರಣ ಎಂದು ಕೇಳಬಹುದೇ ನಾನು? ನಿಮಗೆ ಯಾರು ಏನು ಅಪಚಾರ ಮಾಡಿದರೂಂತ ತಿಳಿಸಿದಿರಿ ಎಂದಾದರೆ...?'' ಸೋಂಪ ಬೇಡುವಂತೆ ಕೇಳಿಕೊಂಡ.

''ಹೂಂ... ಅಪಚಾರವಂತೆ ಅಪಚಾರ! ಎಲ್ಲಿ ನಿರ್ಮಲ ಮನಸ್ಸಿನವರಿಲ್ಲವೋ ಅಲ್ಲಿ ನನ್ನಂತಹವರಿಗೆ ಕವಡೆಯಷ್ಟೂ ಬೆಲೆ ಸಿಗಲಿಕ್ಕಿಲ್ಲ ಎಂದು ನನಗೆ ತಿಳಿಯಿತು. ಆದುದರಿಂದ ಇನ್ನು ಮುಂದಕ್ಕೆ ನಾನು ಇಲ್ಲಿರುವುದು ಸರಿಯಲ್ಲ. ಇಂದು ಈ ಊರಿನಲ್ಲಿದ್ದರೆ ನಾಳೆ ಇನ್ನೊಂದೂರಿನ ದಾರಿ ನನಗೆ ಉಂಟೇ ಉಂಟು'' ಗರ್ವದಲ್ಲಿ ಬುಸುಗುಟ್ಟುತ್ತಾ ಹೇಳುತ್ತಿದ್ದಂತೆಯೇ ದಡಕ್ಕಂತ ಅಲ್ಲಿಂದೆದ್ದು ನಿಂತ ರಂಗ.

''ಸ್ವಾಮೀ, ನಿಮ್ಮಂತಹ ಪುಣ್ಯಾತ್ಮರನ್ನು ನಮ್ಮಂತಹವರ ಕಲ್ಯಾಣಕ್ಕಾಗಿಯೇ ದೇವರು ಕಳಿಸಿರುವಾಗ ನೀವು ಇಷ್ಟೊಂದು ಬೇಸರದಲ್ಲಿ ನೊಂದು ಇಲ್ಲಿಂದ ಹೊರಟರೆ ಅದು ಇಡೀ ಊರಿಗೇ ಕೇಡಲ್ಲವೇ ಸ್ವಾಮೀ?'' ಕೂಡಿದವರೆಲ್ಲ ಕೈ ಜೋಡಿಸಿ ಕೇಳಿಕೊಂಡರು.

''ಹಾಗಾದರೆ ನಾನು ಕೇಳುವ ಪ್ರಶ್ನೆಗೆ ಉತ್ತರ ಕೊಡಿ ನೋಡುವಾ? ಈ ತನಕ ನಾನು

ಭಕ್ತಿಯಿಂದ ಉಪಾಸನೆ ಮಾಡುತ್ತಿದ್ದ ದೇವಿಯ ಮೂರ್ತಿ ಎಲ್ಲಿದೆ ಹೇಳಿ? ಅವರವರ ಶಕ್ತ್ಯಾನುಸಾರ ಭಕ್ತರು ಹಾಕುತ್ತಿದ್ದ ಕಾಣಿಕೆಯ ದುಡ್ಡಿನಿಂದ ಅಮ್ಮನಿಗೊಂದು ಚಿಕ್ಕ ಗುಡಿ ಕಟ್ಟುತ್ತೇನೆ ಎಂದು ಎನಿಸಿದ್ದೆನಲ್ಲಾ ಎಲ್ಲಿ ಹೋಯಿತು ಆ ದುಡ್ಡಿದ್ದ ಡಬ್ಬ ಎಂದು ನನಗೆ ಹೇಳುವಿರಾ? ಯಾಕೆ ಕಂಬದಂತೆ ಸುಮ್ಮನೆ ನಿಂತಿದ್ದೀರಿ? ಮಾತನಾಡಲೂ ನಿಮಗಿದ್ದ ನಾಲಗೆ ತಿರುಗೋದಿಲ್ಲವಾ? ಛೀ...ಛೀ... ನಾನು ಅಭಿಮಾನ ಇಟ್ಟಿದ್ದ ಈ ಊರಲ್ಲಿ ನನಗೆ ಸಿಕ್ಕಿದ ಮಾನ ಮರ್ಯಾದೆ ಎಂದರೆ ಇದುವೇ ಅಲ್ಲವಾ?''

''ಆದರೆ ಏನೇ ಆದರೂ ನೀವು ಮಾತ್ರ ಊರು ಬಿಟ್ಟು ಹೋಗಬಾರದು ಸ್ವಾಮೀ. ನಿಮಗೆ ದಮ್ಮಯ್ಯ. ಕದ್ದು ಹೋದದ್ದನ್ನು ನಾವೆಲ್ಲರೂ ವಂತಿಗೆ ಹಾಕಿ ನಿಮ್ಮ ಸನ್ನಿಧಿಗೆ ತಂದು ಒಪ್ಪಿಸುತ್ತೇವೆ ಸ್ವಾಮಿ. ಮತ್ತೆ... ಆ ಕಳ್ಳಯಾರು ಎಂದು ಏನಾದರೂ ರುಜುವಾತಾದರೆ ನಾವು ಅವನನ್ನು ಬಿಡೋಲ್ಲ. ಅವನಿಗೆ ತಕ್ಕ ಪಾಠವನ್ನು ಕಲಿಸುತ್ತೇವೆ''

''ಇದು ಯಾರ ಕೆಲಸ ಎಂದು ನನಗೆ ಗೊತ್ತಿದೆ. ಆ ಕಳ್ಳ ಇಲ್ಲೇ ಇದೇ ಗುಂಪಿನಲ್ಲಿ ಸೇರಿಕೊಂಡಿದ್ದಾನೆ ಎಂದೂ ತಿಳಿದಿದೆ. ಹಾಗೆಂತ ನಾನು ಬೆರಳೆತ್ತಿ ಅವನನ್ನು ತೋರಿಸಲು ತಯಾರಿಲ್ಲ.''

ಇಡೀ ಸಭೆಯ ಧ್ವನಿ ಒಮ್ಮೆಲೆ ನಿಂತು ಹೋಯಿತು. ಸಂಶಯದ ದೃಷ್ಟಿಯಲ್ಲಿ ಒಬ್ಬರನೊಬ್ಬರು ಮುಖ ಮುಖ ನೋಡಿಕೊಳ್ಳತೊಡಗಿದರು. ಅದರ ಮಧ್ಯೆ ಪಿಸ್... ಪಿಸ್... ಎಂದು ಮಾತನಾಡುತ್ತಲೂ ಇದ್ದರು.

''ಆಂ... ಇಷ್ಟೆಲ್ಲ ಆದರೂ ನನಗೊಂದು ಸಮಾಧಾನದ ವಿಷಯ ಏನೂ ಅಂದರೆ ಗುರಿಕಾರರಿಂದ ಹಿಡಿದು ಊರಲ್ಲಿದ್ದ ನೀವೆಲ್ಲರೂ ಇಲ್ಲಿ ಬಂದು ಸೇರಿದ್ದು. ನಾಳೆ ಮತ್ತೆ ಯಾರೂ ಈ ಪಾಪದವನ ಮೇಲೆ ಸಂಶಯ ಪಡಬಾರದಲ್ಲಾ? ಬೇರೆ ಕಪಟ ಸನ್ಯಾಸಿಗಳಂತೆ ಇವನೂ ದುಡ್ಡನ್ನು ಗಂಟು ಕಟ್ಟಿಕೊಂಡು ಓಡಿ ಹೋದ ಎಂಬ ಆಪಾದನೆ ನನಗೆ ಬೇಡಪ್ಪಾ. ಈಗ ನಿಮ್ಮ ಮಧ್ಯೆ ಇರುವ ನನ್ನನ್ನು ಜಪ್ತಿ ಬೇಕಾದರೂ ಮಾಡಿ ನೋಡಿ. ನನಗೇನೂ ಬೇಸರವಿಲ್ಲ. ಬನ್ನಿ ಜಪ್ತಿ ಮಾಡಿ'' ಎಂದು ಎಲ್ಲರ ಮುಖವನ್ನೂ ನೋಡಿದ. ನಿಂತಲ್ಲಿಂದ ಒಬ್ಬನೂ ಕದಲದ್ದನ್ನು ನೋಡಿ ತನ್ನ ದೇಹದಲ್ಲಿದ್ದ ಬಟ್ಟೆಯನ್ನು ಜಾಡಿಸಿ, ಜಾಡಿಸಿ ತಾನು ಎಲ್ಲೂ ದುಡ್ಡನ್ನು ಅಡಗಿಸಿಟ್ಟಿಲ್ಲ ಎಂಬ ನಾಟಕ ಮಾಡಿದ ರಂಗ.

ಸ್ವಾಮಿಗಳು ಊರು ಬಿಟ್ಟು ಹೊರಡಲಿರುವ ವಿಷಯ ಗಂಗಕ್ಕನಿಗೂ ತಿಳಿಯಿತು. ಹಟ್ಟಿಯಲ್ಲಿ ಕರೆಯುತ್ತಿದ್ದ ಹಾಲಿನ ತಂಬಿಗೆಯನ್ನು ಬುಡ್ಕಂತ ಅಲ್ಲೇ ಇಟ್ಟು ಎದ್ದು ನಿಂತಳು.

ದುಡು ದುಡು ಎಂದು ಮೆಲ್ಲ ಹೆಜ್ಜೆ ಇಟ್ಟುಕೊಂಡು ಬರುತ್ತಿದ್ದ ಅಮ್ಮನನ್ನು ಕಂಡು ರಂಗ ಬೆವತು ಹೋದ. ಆಗಲೇ ಮುಖ ಇತ್ತ ತಿರುಗಿಸಿ -

''ಎಲ್ಲರೂ ನೋಡಿ, ನಾನಿಲ್ಲಿಂದ ಹೊರಟೆ. ಆದರೆ ನಿಮ್ಮ ಪೈಕಿ ಯಾರೊಬ್ಬರು ನನ್ನ ಬೆನ್ನು ಹಿಡಿದು ಬರುವ ಅಗತ್ಯ ಏನೂ ಇಲ್ಲ'' ಇಷ್ಟು ಮಾತು ಹೇಳಿದವನು ದಡಬಡಾಂತ ಮೆಟ್ಟಲಿಳಿದು ಕೊಂಡು ಹೊರಟೇ ಬಿಟ್ಟ. ಅಲ್ಲಿ ತನಕ ಮಾತನಾಡದೆ ಸುಮ್ಮನೆ ನಿಂತಿದ್ದ ಸೋಂಪ ಸ್ವಾಮಿಗಳು ಹಿಂದೆ ತಿರುಗಿಯಾದರೂ ನನ್ನನ್ನು ನೋಡದೆ ಹೋದರಲ್ಲಾ ಎಂಬ ಯೋಚನೆಯಲ್ಲಿ ಮೂಕವಿಸ್ಮಿತನಾದ. ತಾನು ಉಟ್ಟ ಒದ್ದೆ ಬಟ್ಟೆಯಲ್ಲಿಯೇ ಬಂದಿದ್ದೇನೆ ಎಂಬ ಜ್ಞಾನವೂ ಇಲ್ಲದೆ ರಂಗನ ಬೆನ್ನಲ್ಲೇ ಓಡಿ ಬಂದು -

''ಸ್ವಾಮೀ ಸ್ವಾಮೀ ಗ್ರಂಥವಾಚನದಂತಹ ಕಾರ್ಯವನ್ನಾದರೂ ಮುಗಿಸಿ

ಹೋಗಬಹುದಿತ್ತಲ್ಲಾ ಸ್ವಾಮೀ? ದಮ್ಮಯ್ಯ, ನಿಲ್ಲಿ ಸ್ವಾಮಿ, ದಮ್ಮಯ್ಯ'' ಅವನ ಬೇಡಿಕೆಗೆ ಕಿವಿಗೊಡದ ರಂಗ ''ನಿನಗೇನು ಸನ್ನಿಯಾ ಅಲ್ಲ ಮಂಡೆ ಕುತ್ತವಾ? ಆ ಕಡೆಯಿಂದ ಅಮ್ಮ ಬರುತ್ತಿದ್ದಾರೆ ಎಂದು ಮೊದಲೇ ನಾನು ಹೆದರಿ ಸಾಯುತ್ತಿದ್ದೇನೆ. ಅದರ ಮಧ್ಯೆ ನೀನು ಪಿಟೀಲಿನಂತೆ ರಾಗ ಎಳೆಯುತ್ತಿದ್ದಿಯಲ್ಲಾ? ನಿನ್ನ ಗ್ರಂಥವನ್ನು ಕುತ್ತಿಗೆಗೆ ಕಟ್ಟಿಕೊಂಡು ಕೆರೆಗಾದರೂ ಬೀಳು ಇಲ್ಲದಿದ್ದರೆ ಬಾವಿಗಾದರೂ ಹಾರು ನನಗೇನು? ಎಂದು ತನ್ನೊಳಗೇ ಅವನನ್ನು ತೆಗಳುತ್ತಾ ಮುಂದೆ ಮುಂದೆ ನಡೆದ. ಇದನ್ನು ನೋಡುತ್ತಿದ್ದ ಊರವರ ಮುಂದೆ ಸಾಹುಕಾರ ಸೋಂಪನ ಮುಖ ಕರಟಿಯೇ ಹೋಯಿತು. ಅಷ್ಟಾಗುವಾಗ ಏದುಸಿರು ಬಿಟ್ಟುಕೊಂಡು ಓಡುತ್ತಾ ಬಂದ ಗಂಗಕ್ಕ ಎದೆ ಎದೆ ಬಡಿದುಕೊಂಡಳು. ''ಅಯ್ಯೋ ದೇವರೇ ಒಂದು ದಿನವಾದರೂ ಈ ಪುಣ್ಯಾತ್ಮರನ್ನು ಕಣ್ಣಲ್ಲಿ ನೋಡುವ ಭಾಗ್ಯವೇ ನನಗೊದಗಿ ಬರಲಿಲ್ಲವಲ್ಲಾ?'' ಎಂದು ದುಃಖಿಸುತ್ತಿದ್ದ ಅವಳು ಶಿವಣ್ಣನನ್ನು ಕಣ್ಣು ಮಸೆದು ನೋಡಿ -

ಈ ಸ್ವಾಮಿಗಳನ್ನು ಇಲ್ಲಿಂದ ಒಮ್ಮೆ ಓಡಿಸಿ ಬಿಡಬೇಕೂಂತ ಎಷ್ಟು ತಿಂಗಳಿಂದ ಕಾಯುತ್ತಿದ್ದೆ ನೀನು? ಅದಕ್ಕಾಗಿ ಎಷ್ಟೆಲ್ಲಾ ಪ್ರಯತ್ನಗಳನ್ನು ಮಾಡಿಲ್ಲ ನೀನು ಹೇಳು? ಈಗ ನಿನಗೆ ತಂಪಾಯಿತಲ್ಲಾ? ರಾತ್ರಿ ಹಗಲು ಜುಗಾರಿ ಆಡಲು ಜಾಗ ಖಾಲಿಯಾಯಿತೂಂತ ಇನ್ನು ಇದ್ದವರನ್ನೆಲ್ಲಾ ಸೇರಿಸಿಕೊಂಡು ಶುರುಮಾಡು ನಿನ್ನ ಇಸ್ಪೀಟು ಆಟ'' ಶಿವಣ್ಣ ನಾಚಿಕೆಯಿಂದ ಅಪರಾಧಿಯಂತೆ ತಲೆ ತಗ್ಗಿಸಿದ.

ರಂಗ ಒಂದೆರಡು ಮೊಳದಷ್ಟು ನಡೆದನೊ ಇಲ್ಲವೋ ಎದುರಲ್ಲಿ ಗುರುವಪ್ಪಜ್ಜ ಬರಬೇಕಾ? ನಾವು ಮಕ್ಕಳಾಟಿಕೆಯಲ್ಲಿರುವಾಗ ಅವರನ್ನು ನೋಡಿದ ಕೂಡಲೇ ''ಅಜ್ಜಾ, ಅಜ್ಜಾ, ಒಂದು ಕತೆ ಹೇಳಿ'' ಎಂದು ಅವರ ಹಿಂದೆಯೇ ಹೋಗುತ್ತಿದ್ದೆವು. ಅವರು ಅಂದು ಮಡದಿಯ ಬಾಯಿಯಿಂದ ಬೈಗುಳ ತಿಂದು ತಲೆ ಬಿಸಿಯಲ್ಲಿದ್ದರೆ ''ಹೋಗಿರಾ ಒಮ್ಮೆ ಆಚೆ, ಎಂತ ಕರ್ಮದ ಕತೆ? ನನ್ನ ಚಿಂತೆಯ ಕತೆಯೇ ನನಗೆ ಜಾಸ್ತಿಯಾಗಿದೆ'' ಎಂದು ನಮ್ಮನ್ನು ಓಡಿಸುತ್ತಿದ್ದರು. ಮೂಗಿನ ತನಕ ಕುಡಿದದ್ದು ಸ್ವಲ್ಪ ಇಳಿದಿದ್ದರೆ ''ಹೌದಾನಾ ನಿಮ್ಮ ಮಡದಿಯರಿಗೆ ಯಾವಾಗನಾ ಮದುವೆ?'' ಎಂದು ತಮಾಷೆಯಲ್ಲಿಯೇ ಕೇಳುತ್ತಿದ್ದರು. ಮದುವೆ ಎಂಬ ಶಬ್ದ ಕೇಳಿದ ಕೂಡಲೇ ಹತ್ತು ಹನ್ನೆರಡು ವರ್ಷ ಪ್ರಾಯದ ನಾವೆಲ್ಲಾ ಹಳೇ ಕಾಲದ ಹೆಣ್ಣು ಮಕ್ಕಳಂತೆ ನಾಚಿಕೆಯಿಂದ ಅಲ್ಲಿಂದ ಓಡಿಹೋಗುತ್ತಿದ್ದೆವು. ಹೆಣ್ಣು ಮಕ್ಕಳ ಮುಂದೆ ಏನಾದರೂ ಹೇಳಿದರೆ ನಮಗೆ ಕೋಪವೂ ಬರುತ್ತಿತ್ತು. ಆಗ ನಾವು ಒಟ್ಟಿಗೆ -

''ಅಜ್ಜರಜ್ಜರೇ ಗುಜ್ಜೆ ಸಲಾಯಿ, ಅಜ್ಜರಜ್ಜರೇ ಗಡ್ಡ ಸಪಾಯಿ, ಒಂಜಿ ಮುಕ್ಕಾಲ್ ಈರೆ ಕಿಸೆತ ಉಲಾಯಿ'' ಎಂದು ಹಾಡುತ್ತಾ ನಲಿಯುತ್ತಿದ್ದೆವು. ಮಕ್ಕಳ ಕುಸಾಲು ನೋಡಿ ಅಜ್ಜ ಬಾಯಿ ತುಂಬಾ ನಗುತ್ತಿದ್ದರು. ಈಗ ಇದೇ ಗುರುವಪ್ಪಜ್ಜ ನನ್ನನ್ನು ನಿಲ್ಲಿಸಿ ''ಎಲ್ಲಿಗೆ ಹೊರಟಿರಿ ಸ್ವಾಮಿಗಳೇ'' ಎಂದು ಕೇಳಿದರೆ ಏನು ಹೇಳುವುದು? ರಂಗನಿಗೆ ಈಗ ಸ್ವಲ್ಪ ಭಯ ಹುಟ್ಟಿಕೊಂಡ ಹಾಗಾಯಿತು. ಮುಖವನ್ನು ಹಿಂದಕ್ಕೆ ತಿರುಗಿಸಿ ಯಾರನ್ನೋ ನೋಡುತ್ತಾ ಹೋಗುವಂತೆ ವೇಗವಾಗಿ ಕಾಲೆತ್ತಿಕೊಂಡು ನಡೆದ. ಪುಣ್ಯಕ್ಕೆ ಶರಾಬು ಅಂಗಡಿಯಿಂದ ಬರುತ್ತಿದ್ದ ಈ ಮುದುಕ ಹಲ್ಲಿನ ಎಡೆಗೆ ಕಡ್ಡಿ ಹಾಕಿಕೊಂಡು ಅದರ ಸುವಾಸನೆ ನೋಡುವುದರಲ್ಲಿಯೇ ಬಿದ್ದದ್ದು ರಂಗನಿಗೂ ಸಲೀಸಾಯಿತು.

ಮನೆಯ ಕೆಲಸಗಳೆನ್ನೆಲ್ಲಾ ಮುಗಿಸಿದ ರತ್ನ ಸೋಮೇಶ್ವರದತ್ತ ಹೊರಡುವ ತಯಾರಿ ಮಾಡುಕೊಂಡಳು. ಹಸುವಿಗೆ ಬಾಯರಿಕೆ ಇಡಲೆಂದು ಅಕ್ಕಚ್ಚಿ ತಂದು ಮರಯಿಗೆ ಹೊಯ್ಯುತ್ತಿದ್ದಳು

ಗಂಗಕ್ಕ. ಅವಳನ್ನು ಹುಡುಕಿಕೊಂಡು ಕಿರು ಬಾಗಿಲಿನತ್ತ ನಡೆದಳು ಸೊಸೆ.

"ಓ... ನೀವು ಇಲ್ಲಿದ್ದೀರಾ? ನಾನು ನಡುಮನೆಯಲ್ಲಿ, ಚಾವಡಿಯಲ್ಲಿ ಇಲ್ಲದ್ದನ್ನು ಕಂಡು ಇವರು ಎಲ್ಲಿಗೆ ಹೋದರಪ್ಪಾ ಎಂದು ಕೊಂಡೆ"

"ಹೌದು...? ನಾನು ದಿಬ್ಬಣದೊಟ್ಟಿಗೆ ಹೋದೆ ಎಂದು ಎನಿಸಲಿಲ್ಲವಾ? ಮನೆಯೂ ಆಯಿತು ಹಟ್ಟಿಯೂ ಆಯಿತು ಇದನ್ನು ಬಿಟ್ಟು ನಾನು ಎಲ್ಲಿಗೂ ಹೋದದ್ದು ನೋಡಿದ್ದಿಯಾ?"

"ಹಾಗಲ್ಲ ಅತ್ತೆ ನಾನೊಂದು ಬಾಯಿ ಮಾತಿಗೆ..."

"ಗಲಿ ನಿನಗೀಗ ಏನಾಗಬೇಕು?"

'ಇದೂ... ಅಡಿಗೆ ಮಾಡಿಟ್ಟಿದ್ದೇನೆ. ಒತ್ತರೆ ಸತ್ತರೆಯೂ ಆಯಿತು. ಇನ್ನು ನಾನು ಸ್ವಲ್ಪ"

"ಏನು ಸಿನೀಮಕ್ಕೇನಾದರೂ ಹೊರಟಿದ್ದಿಯಾ ಹೇಗೆ? ಇಷ್ಟೊಂದು ತುರ್ತಿನಲ್ಲಿ?"

"ಸಿನೀಮಕ್ಕೆ ಅಲ್ಲ ಅತ್ತೆ. ನಾನೊಂದು ಗಳಿಗೆ ಬೆದ್ರಕ್ಕೆ ಹೋಗಿ ಬರಲೇ ಅಂತ?"

"ಏನೇ ಮದರಂಗಿ ಮದುಮಗಳು. ತಿಂಗಳಿಗೆ ಇಪ್ಪತ್ತೈದು ಸಲ ತವರು ಮನೆಗೆ ಓಡುತ್ತಿಯಲ್ಲಾ? ಅಲ್ಲಿ ಯಾವುದರ ಗಂಟು ಇಟ್ಟಿದ್ದಿಯೇ ನೀನು? ಇಲ್ಲಿ ನಾನೊಬ್ಬಳೇ ಇರುವುದೂಂತಲೂ ನಿನಗೆ ಗೊತ್ತಿಲ್ಲವೇ?"

"ಹಾಗಲ್ಲ ಅತ್ತೇ, ನನ್ನ ತಂಗಿ ಗುಲಾಬಿಗೆ ಆವತ್ತೊಂದು ಮದುವೆ ಸಂಬಂಧ ಬಂದಿತ್ತಲ್ಲಾ? ಆ ಮೇಲೆ ಏನಾಯಿತು ಎಂದು ಅದರ ಸುದ್ದಿ ಸೊಲಕವೇ ತಿಳಿದಿಲ್ಲವಲ್ಲಾ? ಅದನ್ನು ಕೇಳಿ ಬರುವಾ ಎಂದು ಹೊರಟಿದ್ದು ನಾನು"

"ಇಂದೇ ಬರುತ್ತಿಯಲ್ಲವೇ? ಅಲ್ಲ ಅಲ್ಲಿಯೇ ಕುಳಿತು ಬಿಡುತ್ತಿಯಾ?"

"ಇಲ್ಲ ಅತ್ತೆ, ಸಂಜೆ ಸೂರ್ಯ ಮುಳುಗುವುದರೊಳಗೆ ಬರುತ್ತೇನತ್ತೆ ಆಗದೇ?"

ಅಯ್ಯಯ್ಯೋ ದೇವರೇ, ನನ್ನದೊಂದು ಕರ್ಮವೇ, ಈ ಹಸು-ಕರುಗಳ ಚಾಕರಿ ಏನಾದರೂ ಅಲ್ಲದಿದ್ದರೆ ನಾನೂ ನಿನ್ನೊಟ್ಟಿಗೆ ಬರುತ್ತಿದ್ದೆ? ಬೆದ್ರದಲ್ಲಿ ಎರಡು ದಿನ ನಾವು ಇದ್ದು ಬರಬಹುದಿತ್ತಲ್ಲಾ? ಅದು ಸಾಯಲಾಚೆ, ಹೋಗು..., ನೀನಾದರೂ ಹೋಗಿ ಬಾ, ಕತ್ತಲೆ ಮಾಡಬೇಡ ಏನು?" ಸೊಸೆ ಹೇಳಿದ್ದನ್ನು ಸತ್ಯವೆಂದೇ ನಂಬಿದಳು ಗಂಗಕ್ಕ. ಸುಳ್ಳು ಹೇಳಿ ಅತ್ತೆಯನ್ನು ಮರಳು ಮಾಡಿದ ಮೇಲೆ ರತ್ನನಿಗೂ ಬಹಳ ಹೊಟ್ಟೆ ಉರಿಯಿತು ಅವಳ ಮೇಲೆ.

ಬಸ್ಸು ಹತ್ತಿ ಬಂದವಳೇ ಉಳ್ಳಾಲದ ಬಳಿ ಇಳಿದಳು ರತ್ನ. ತನ್ನ ಪರಿಚಯದವರು ಯಾರಾದರೂ ಸಿಕ್ಕಿ ಬಿಡುತ್ತಾರಾ ಎಂಬ ಭಯದಲ್ಲಿ ಅತ್ತಿತ್ತ ನೋಡದೆ ಸೋಮೇಶ್ವರ ದೇವಸ್ಥಾನದತ್ತ ಹೋಗುವ ದಾರಿ ಹಿಡಿದಳು. ಗುಡಿಯಲ್ಲಿದ್ದ ದೇವರಿಗೆ ಹೊರಗಿನ ಅಂಗಳದಲ್ಲೇ ಮೂರು ಸುತ್ತು ಬಂದಳು. ಪೂಜೆಯ ಭಟ್ಟರು ಕೊಟ್ಟ ಗಂಧವನ್ನು ಹಣೆಗೆ ಇಟ್ಟುಕೊಂಡು ಉಳಿದಿದ್ದನ್ನು ಕುತ್ತಿಗೆಗೆ ಸವರಿಕೊಂಡಳು. ತೀರ್ಥವನ್ನು ಕುಡಿದು ಹರಿವಾಣಕ್ಕೆ ಪಾವಳಿಯನ್ನು ಕಾಣಿಕೆ ಹಾಕಿದಳು. ಸ್ವಲ್ಪ ಹೊತ್ತಿಗೆ ಮೊದಲೇ ಪೂಜೆ ಮಂಗಳಾರತಿ ಮುಗಿದಿತ್ತು. ಹಾಗಾಗಿ ಅಲ್ಲಿ ಭಕ್ತರ ಸಂಖ್ಯೆಯೂ ಕಡಿಮೆ ಇತ್ತು.

ಮೆಲ್ಲ ಹೆಜ್ಜೆಯನ್ನೆತ್ತಿಕೊಂಡು ಹಿಂಬದಿಯ ಬಾಗಿಲಿನಿಂದ ಕೆರೆಯ ಬಳಿ ಬಂದಳು ರತ್ನ. ಯಾವತ್ತಿನಂತೆ ಅಲ್ಲಿ ಬಂಡೆ ಕಲ್ಲು ಕಡಿಯುವವರಾಗಲಿ, ಲಾರಿಯಲ್ಲಿ ಹೊಯ್ಗೆ ಸಾಗಿಸುವವರಾಗಲಿ ಇಲ್ಲದ್ದನ್ನು ನೋಡಿ ಅವಳ ಮನಸಿಗೆ ಸ್ವಲ್ಪ ಸಮಾಧಾನವಾಯಿತು. ಗಂಡ ಬರುವ ದಾರಿ ಕಾಯುತ್ತಾ

ಕಡಲ ಬದಿಯ ಹೊಯ್ಗೆಯ ರಾಶಿಯಲ್ಲಿ ಕುಳಿತಳು. ನೆತ್ತಿ ಸುಡುವಂತಹ ಮಧ್ಯಾಹ್ನದ ಬಿಸಿಲಿಗೆ ಜಡೆ ಕಟ್ಟಿಕೊಂಡು ಬರುವ ಸನ್ಯಾಸಿ ಬರುವುದು ಕಾಣಿಸಿತು. ಗಂಡ ಹತ್ತಿರ ಹತ್ತಿರ ಬರುತ್ತಿರುವಾಗ ಅವನ ಅಂಗಿ ಬಟ್ಟೆಯ ಚೀಲವನ್ನು ಅಲ್ಲಿಯೇ ಬಿಟ್ಟು ಎದ್ದು ನಿಂತಳು. ಅವಳನ್ನು ನೋಡಿದ ರಂಗ ''ನೀನಿನ್ನು ಮನೆಗೆ ಹೋಗು'' ಎಂದು ಹೇಳುವಂತೆ ಕಣ್ಣಲ್ಲೇ ಸನ್ನೆ ಮಾಡಿದ. ಮಡದಿ ಏನೂ ಮಾತನಾಡದೆ ಅಲ್ಲಿಂದ ಹೊರಟು ಹೋದ ಕೂಡಲೇ ಸುತ್ತಲೂ ತನ್ನ ಕಣ್ಣ ಬೊಂಬೆಯನ್ನೊಮ್ಮೆ ತಿರುಗಿಸಿದ.

ಬೀಸುತ್ತಿದ್ದ ಗಾಳಿಗೆ ತೆಂಗಿನ ಸೋಗೆಗಳು ಅಲುಗಾಡುವ ಶಬ್ದ. ಉಕ್ಕುತ್ತಾ ಬರುವ ಕಡಲ ನೀರಿನ ಸೆರೆಯ ಅಬ್ಬರವನ್ನು ಬಿಟ್ಟರೆ ಮನುಷ್ಯರೇ ಇಲ್ಲದ ಆ ಜಾಗ ಬಟ್ಟಾಬಯಲಿನಂತೆ ಕಾಣುತ್ತಿತ್ತು. ರಂಗ ಮಡದಿ ಬಿಟ್ಟು ಹೋದ ಚೀಲವನ್ನು ಹಿಡಿದುಕೊಂಡು ಬಂಡೆಕಲ್ಲಿನ ಮರೆಗೆ ಹೋದ. ಮೊದಲು ನೆತ್ತಿಯಲ್ಲಿ ಕಟ್ಟಿಕೊಂಡಿದ್ದ ಜಡೆಯನ್ನು ತೆಗೆದ. ಕಿವಿಯ ಬಳಿ ಸಿಕ್ಕಿಸಿಕೊಂಡಿದ್ದ ಗಡ್ಡ, ಮೀಸೆಯನ್ನು ಕಳಚಿದ. ಮೈಮೇಲಿದ್ದ ಸನ್ಯಾಸಿಯ ಬಟ್ಟೆಗಳನ್ನು ಬಿಚ್ಚಿ ''ಥೂ...ಥೂ... ಹಿಡಿದ ಶನಿ ಇದರೊಟ್ಟಿಗೆ ಹೋಗಲಿ ಆಚೆ'' ಎಂದು ಎತ್ತಿ ಸಮುದ್ರಕ್ಕೆ ಎಸೆದ. ಚೀಲದಲ್ಲಿದ್ದ ಜುಬ್ಬ, ಮತ್ತೊಂದು ಲುಂಗಿಯನ್ನು ಉಟ್ಟುಕೊಂಡು ಕಾಗದದಲ್ಲಿ ಮಡಚಿ ಇಟ್ಟಿದ್ದ ದುಡ್ಡನ್ನು ಕಿಸೆಯೊಳಗೆ ತಳ್ಳಿದ. ಪೊದೆಯಂತೆ ಅಡ್ಡಾ ದಿಡ್ಡಿ ಬೆಳೆದಿದ್ದ ತಲೆಕೂದಲನ್ನು ಕೈಯಿಂದಲೇ ಬಾಚಿಕೊಂಡ. ಇಷ್ಟರವರೆಗೆ ತಲೆಕೂದಲಾಗಲಿ, ಗಡ್ಡ ಮೀಸೆಯಾಗಲಿ ಕತ್ತರಿಸದೆ ಈ ಸೆಖೆಯ ಹೊತ್ತಿನಲ್ಲಿ ಅವನಿಗೆ ಸಾಕು ಸಾಕಾಗಿ ಹೋಗಿತ್ತು. ರಂಗ ಸೆಲೂನು ಹುಡುಕಿಕೊಂಡು ಪೇಟೆಯತ್ತ ನಡೆದ.

ಸೆಲೂನಿನಿಂದ ಮದುಮಗನ ನಡಿಗೆಯಲ್ಲಿ ಇಳಿದುಕೊಂಡು ಬಂದ ರಂಗ ಮುಗುಳು ನಗುತ್ತಾ ಹಂಪನ್‌ಕಟ್ಟೆಗೆ ಹೋಗುವ ಬಸ್ಸು ಹತ್ತಿದ.

ಹಸುಗಳ ಜೊತೆ ಕೋಳಿಗಳನ್ನೂ ಸಾಕುತ್ತಿದ್ದಳು ಗಂಗಕ್ಕ. ಅಂಗಳದಲ್ಲಿ ಮರಿಗಳತ್ತ ಮಣ್ಣು ಒಕ್ಕುತ್ತಿದ್ದ ಹೇಂಟೆ, ಒಕ್ಕಿದ್ದನ್ನು ತಿನ್ನುತ್ತಲೂ ಇತ್ತು. ತುದಿ ಬುಡ ತಿರುಗಿಸುತ್ತಾ ತಿನ್ನುತ್ತಿದ್ದ ಮರಿಗಳ ಮೇಲೆ ತೆಂಗಿನ ಮರದಲ್ಲಿ ಕುಳಿತ ಗಿಡುಗ ನೋಟ ಹಾಕುತ್ತಿತ್ತು. ಅದನ್ನು ನೋಡಿದ ರತ್ನ ತಟ್ಟಿಗೆ ಸಿಕ್ಕಿಸಿಟ್ಟಿದ್ದ ಕಬೆಯನ್ನು ತೆಗೆದು ಗೂಡಿನ ಬಳಿ ಬಂದು ಕುಳಿತಳು. ಅವಳ ಕಣ್ಣು ಕೋಳಿಗಳ ಮೇಲಿದ್ದರೂ ಮನಸ್ಸೆಲ್ಲ ಗಂಡ ಬರಲಿರುವ ದಾರಿಯತ್ತಲ್ಲೇ ಇತ್ತು. ಹಿತ್ತಲಿನ ಮೋಟು ಪಾಗರಕ್ಕೆ ಬೆರಣಿ ತಟ್ಟುತ್ತಿದ್ದಳು ಗಂಗಕ್ಕ. ದಡ್ - ಬಡ್ ಎಂಬ ಬೂಟು ಕಾಲಿನ ಶಬ್ದಕ್ಕೆ ಬೆಚ್ಚಿ ಅತ್ತ ತಿರುಗಿದಳು. ನೀಟಾದ ಇಸ್ತ್ರಿ ಹಾಕಿದ ಪ್ಯಾಂಟ್, ಅಂಗಿ ಸಿಕ್ಕಿಸಿಕೊಂಡು, ಕಣ್ಣಿನ ಮೇಲೆ ಕಪ್ಪು ಕನ್ನಡಕ ಹಾಕಿಕೊಂಡು ದೊಡ್ಡದೊಂದು ಪೆಟ್ಟಿಗೆಯನ್ನು ಕೈಯಲ್ಲಿ ಹಿಡಿದುಕೊಂಡು ಯಾರೋ ಒಬ್ಬ ಬರುತ್ತಿದ್ದ. ಅವನು ಹಾಕಿದ್ದ ಧಿರಸು, ಅವನ ಜಲ್ಸ್ ನೋಡಿ ಗಂಗಕ್ಕನಿಗೆ ಆಶ್ಚರ್ಯವಾಯಿತು. ಲಂಗದ ತುದಿಯನ್ನು ಕಾಲಗಂಟಿನ ಮೇಲೆ ಎತ್ತಿ ಕಟ್ಟಿದ್ದನ್ನು ಎಳೆದು ಕೆಳಗೆ ಬಿಟ್ಟಳು. ಅಪರಿಚಿತ ವ್ಯಕ್ತಿ ಹತ್ತಿರ ಹತ್ತಿರ ಬರುತ್ತಿರುವುದನ್ನು ಕಂಡು -

''ನೀನು ಯಾರು ಮಗಾ? ನಿನಗೆ ದಾರಿಯೇನಾದರೂ ತಪ್ಪಿ ಹೋಯಿತಾ? ಯಾರ ಮನೆಗೆ ಹೋಗಬೇಕಿತ್ತು?'' ಎಲಾ ಪೆದ್ದಿ. ತಾಯಿಗೆ ಮಗನ ಗುರುತು ಸಿಗಲಿಲ್ಲವಲ್ಲಾ? ಎಂದು ನೆನದ ರಂಗ ಕನ್ನಡಕ ತೆಗೆದು ಕೈಯಲ್ಲಿ ಹಿಡಿದುಕೊಂಡ.

ಏನು ಹಾಗೆ ನೋಡುತ್ತಿದ್ದಿ? ಇನ್ನೂ ನಿನಗೆ ನನ್ನ ಗುರುತು ಸಿಗಲಿಲ್ಲವಾ? ನಾನಮ್ಮಾ, ನಿನ್ನ

ಮಗ ರಂಗಣ್ಣ, ಈಗ ತಿಳಿಯಿತಾ? ಛೆ! ಇದೊಳ್ಳೆಯ ಗಮ್ಮತ್ತಾಯಿತಲ್ಲ ನಿಂದು? ನಾನು ಯಾವ ಧಿರಸು ಹಾಕಿದರೂ ನಿಮಗೆ ನನ್ನ ಗುರುತೇ ಸಿಗುವುದಿಲ್ಲವಲ್ಲಾ? ಗಂಗಕ್ಕ ಬೆಕ್ಕಸ ಬೆರಗಾದಳು. ತನ್ನ ಕಣ್ಣನ್ನೇ ಅವಳಿಗೆ ನಂಬಲಾಗದಂತಾಯಿತು. ಈ ಪ್ರಶ್ನೆಯನ್ನು ಕೇಳಿ ಉಸಿರು ಹಿಡಿದು ನಗುತ್ತಿದ್ದ ಮಡದಿಯನ್ನು ನೋಡಿದ ರಂಗ.

''ಏನೇ, ನಿನಗಾದರೂ ನಾನು ಯಾರೂಂತ ತಿಳಿಯಿತಾ ಇಲ್ಲವಾ? ಕಳೆದ ಮಹಾನವಮಿಯಂದು ನಾನು ಹಾಲಿನ ವೇಷ ಹಾಕಿದಾಗಲೂ ನೀವಿಬ್ಬರೂ ಹೀಗೆ ಮುಖ - ಮುಖ ನೋಡುತ್ತಿದ್ದುದು ನೆನಪಿದೆಯಾ? ಆಮೇಲೆ...

''ಆಮೇಲೆಯೂ ನೀವು ವೇಷ ಹಾಕಿದ್ದೀರಾ ಏನು?'' ಬೇಕೆಂದೇ ಕೇಳಿದಳು ರತ್ನ. ಆಮೇಲೆ ವೇಷ ಹಾಕಿದ್ದೇನಾ ಇಲ್ಲವಾ ಎಂದು ಗೊತ್ತಿಲ್ಲವೇ ನಿನಗೆ? ಈಗಲೂ ನೋಡು, ತಾಯಿಗೆ ಒಂದಿಷ್ಟಾದರೂ ನನ್ನ ಗುರುತು ಸಿಕ್ಕಿತಾ ಹೇಳು? ಎಂದು ಮಡದಿಗೆ ಕಣ್ಣು ಹೊಡೆದ ''ಹೌದಪ್ಪಾ... ಎಷ್ಟಾದರೂ ನೀವು ನಾಟಕದವರಲ್ಲವಾ? ಯಾವ ಯಾವ ವೇಷದಲ್ಲಿದ್ದರೂ ನಿಮ್ಮನ್ನು ಯಾರೂ ಗುರುತು ಹಿಡಿಯಲು ಸಾಧ್ಯವೇ ಇಲ್ಲಪ್ಪಾ'' ಸುಂದರವಾಗಿ ಸಿನಿಮಾದವರಂತೆ ಕಾಣುತ್ತಿದ್ದ ಗಂಡನನ್ನು ಕಣ್ಣು ತುಂಬಾ ತುಂಬಿಸಿಕೊಂಡು ಹೇಳಿದಳು ರತ್ನ.

''ಅಯ್ಯೋ ನನ್ನ ಮಗೂ...! ಹೇಗಿದ್ದಿಯಪ್ಪಾ ನೀನು? ಯಾಕೆ ಮಗಾ ಇಷ್ಟೊಂದು ಸೊರಗಿ ಹೋಗಿದ್ದಿಯಾ? ಇದು ಏನು ನೀನು ಹೀಗಾದದ್ದು? ಕೆಲಸ ಕೆಲಸ ಎಂದು ರಾತ್ರಿ ಹಗಲು ದುಡಿಯುತ್ತಲೇ ಇದ್ದು ಊಟ, ತಿಂಡಿಗಳಿಗೂ ಗಮನ ಕೊಡಲಿಲ್ಲವೇನಪ್ಪಾ?'' ತನ್ನನ್ನು ಹೆತ್ತವಳು ಹೊಟ್ಟೆ ಉರಿಸುತ್ತಿರುವುದನ್ನು ಕಂಡು ರಂಗನ ಹೃದಯ ಹಿಂಡಿದಂತಾಯಿತು. ಕೈಯಲ್ಲಿದ್ದ ಪೆಟ್ಟಿಗೆಯನ್ನು ಅಮ್ಮನ ಕೈಗೆ ಕೊಟ್ಟು ಅವಳ ಕಾಲಿಗೆ ಬಿದ್ದು ತೆಂಗಿನ ಮರದ ಬುಡಕ್ಕೆ ಹೋಗಿ ಕಡಾಯಿಯಲ್ಲಿದ್ದ ನೀರಿನಿಂದ ಮುಖ ಕೈಕಾಲು ತೊಳೆದುಕೊಂಡ.

ಇದನ್ನೆಲ್ಲಾ ತನ್ನ ಮನೆಯ ಕಿಟಕಿಯಿಂದ ನೋಡುತ್ತಿದ್ದ ಆನಂದನಿಗೆ ಮತ್ಸರ ತಡೆದುಕೊಳ್ಳಲಾಗಲಿಲ್ಲ. ರಂಗನನ್ನು ನೋಡಿ ಅವನ ಹೊಟ್ಟೆಯಲ್ಲಿ ಅಸೂಯೆಯ ಬೆಂಕಿ ಹುಟ್ಟಿತು. ಸೀದಾ ಹೋಗಿ ವಿಚಾರಿಸುವಾ ಎಂದರೆ ಗಂಗಕ್ಕನ ಬಾಯಿಯ ಭಯವೂ ಅವನಿಗಿತ್ತು.

ಅತ್ತೆ ಕೈಯೆತ್ತಿ ಕೊಟ್ಟ ಪೆಟ್ಟಿಗೆಯನ್ನು ತೆರೆದು ನೋಡುತ್ತಿದ್ದಳು ರತ್ನ. ಅದರಲ್ಲಿದ್ದ ವಸ್ತುಗಳನ್ನು ನೋಡಿದ ಕೂಡಲೇ ಅಂಗಳದಲ್ಲಿದ್ದ ಕೋಳಿ ಮರಿಗಳನ್ನೇ ಮರೆತು ಬಿಟ್ಟಳು. ನರಿಯಂತೆ ಕಾಯುತ್ತಿದ್ದ ಆನಂದನಿಗೆ ಈಗ ತನ್ನಷ್ಟಕ್ಕೆ ಸಂದರ್ಭ ಕೂಡಿ ಬಂದ ಹಾಗಾಯಿತು. ಕುಹಕ ನಗು ಬೀರುತ್ತಾ ರಂಗನ ಮನೆಯೊಳಗೆ ಬರುವಾಗ ರತ್ನನ ಕೈಯಲ್ಲಿದ್ದ ವಾಚು, ಹೊಸ ಸೀರೆಗಳು ಅವನ ಕಣ್ಣಿಗೆ ಪೊರಕೆಯ ಕಡ್ಡಿ ಚುಚ್ಚಿದಂತಾಯಿತು.

''ಆಂ... ಏನಂತೆ, ಪೆಟ್ಟಿಗೆ ತುಂಬಾ ಸಾಮಾನು ಬಂದಿದೆಯಲ್ಲಾ! ಇದು ಏನು ಕತೆ? ಹೌದಾ ಮಾರಾಯ ಸುದ್ದಿ ಇಲ್ಲದೆ ದುಬಾಯಿ ಗಿಬಾಯಿಗೇನಾದರೂ ಹೋಗಿ ಅಲ್ಲಿದ್ದ ಎಲ್ಲವನ್ನೂ ತುಂಬಿಸಿಕೊಂಡು ಬಂದಿದ್ದಿಯಾ ಹೇಗೆ? ನಿನ್ನ ಜಲ್ಸ್ ನೋಡುವಾಗ ನನಗೆ ಹಾಗೆಯೇ ಕಾಣುತ್ತದಪ್ಪಾ'' ಹೊಟ್ಟೆಯಲ್ಲಿ ಉಕ್ಕುತ್ತಿದ್ದ ಮತ್ಸರವನ್ನು ಹೊರಗೆ ಕಕ್ಕಿದ ಆನಂದ. ಇವನಂತಹ ಪಟ್ಟಿಂಗನೂ ಅಂದು ನನ್ನ ಸನ್ಯಾಸಿ ವೇಷಕ್ಕೆ ಕೈಮುಗಿದದ್ದನ್ನು ನೆನೆದ ರಂಗ ಸ್ವಲ್ಪ ಜೋರಾಗಿಯೇ ಆನಂದನಿಗೆ ಕೇಳುವಂತೆ ನಗುತ್ತಾ-

''ನಾನು ದುಬಾಯಿಗೂ ಹೋಗಿಲ್ಲ, ಬೊಂಬಾಯಿಗೂ ಹೋಗಿಲ್ಲ ಮಾರಾಯ. ನಿನ್ನಂತಹ ಅರೆಹುಚ್ಚರ ಮುಂದೆ ನಾಟಕ ಮಾಡಿಕೊಂಡು ಸಂಪಾದನೆ ಮಾಡಿದ ದುಡ್ಡಲ್ಲೇ ಇದನ್ನೆಲ್ಲಾ ತೆಗೆದುಕೊಂಡು ಬಂದದ್ದು. ನಿನಗೀಗಲಾದರೂ ತಿಳೀತಾ?''

''ಹೌದಾ ರಂಗಾ... ನೀನೀಗ ದೊಡ್ಡ ಸೈಂದವನಂತೆ ಕಾಣುತ್ತಿಯಲ್ಲಾ. ಬಹುಶಃ ಆ ಊರಿನಲ್ಲಿ ಸರೀ ಹಂದಿ ಮಾಂಸ ತಿನ್ನುತ್ತಿದ್ದೆ ಎಂದು ಕಾಣುತ್ತೆ ಹೌದಾ ಅಲ್ಲವಾ ಹೇಳು ನೋಡುವಾ?'' ಆನಂದ ಮುಖ ತಿರುಗಿಸಿ ಕೇಳಿದ. ಅವನಿಗೆ ಮತ್ತೆ ಉತ್ತರ ಕೊಡಬೇಕು ಎಂದು ರಂಗ ಬಾಯಿ ತೆಗೆಯುವುದರೊಳಗೆ ಒಳಗೆ ದೇವರ ಕೋಣೆಯೊಳಗಿದ್ದ ಗಂಗಕ್ಕ ಹೊರಗೆ ಬಂದಳು.

''ಯಾರದು? ಓ... ಆನಂದನಾ? ನೀನು ಯಾಕೋ ಇಲ್ಲಿಗೆ ಬಂದೆ? ನಿನಗೇನು ಕೆಲಸ ಇದೆ ಇಲ್ಲಿ?'' ಕೋಪದಲ್ಲಿ ಅವಳ ಕಣ್ಣು ಕೆಂಪಾಗಿತ್ತು.

''ಆಂ... ಆಂ... ನಾನು ಯಾಕೆ ಬಂದೆ ಎಂದು ನನ್ನಲ್ಲಿಯೇ ಕೇಳುತ್ತಿಯಲ್ಲಾ? ದೊಡ್ಡ ಗಂಟಿನೊಡನೆ ಪೆಟ್ಟಿಗೆ ತುಂಬಾ ಮಗ ಹೊತ್ತುಕೊಂಡು ಬಂದದ್ದನ್ನು ನೋಡಿದ ಕೂಡಲೇ ನಿನ್ನ ಮುದಿ ಕಣ್ಣು ನೆತ್ತಿಯ ಮೇಲೆ ಹೋಯಿತ್ತಲ್ಲಾ? ಏನು ಷೋಕಿಯಪ್ಪಾ ಈ ಮುದುಕಿಯದ್ದು? ಇಲ್ಲದಿದ್ದರೆ ನೀನು ನನ್ನನ್ನೇ ಕೇಳುತ್ತಿಯಾ ಯಾಕೆ ಬಂದೆ ಎಂದು? ಅಲ್ಲ.. ಒಂದಲ್ಲ... ಎರಡಲ್ಲ... ನಾಲ್ಕು ಮರಿಗಳನ್ನು ಗಿಡುಗ ಹಾರಿಸಿಕೊಂಡು ಹೋಗುತ್ತಿದ್ದರೂ ನೀವು ಮೂವರೂ ಎಚ್ಚರ ತಪ್ಪಿ ಬಿದ್ದವರಂತೆ ಇದ್ದೀರಲ್ಲಾ? ಅದನ್ನೇ ನಿಮಗೆ ತಿಳಿಸುವಾ ಎಂದು ಬಂದದ್ದು ನಾನು. ಈಗ ತಿಳಿಯಿತಾ?'' ಇಷ್ಟಗಲ ಬಾಯಿಮಾಡಿ ನಕ್ಕ ಆನಂದ ''ನಾರಾಯಣ ದೇವರೇ ನಿನ್ನ ಮನಸೇ, ಮನೆಯೊಳಗೆ ಬರುವಾಗ ಗೂಡಿನ ಬಾಗಿಲಲ್ಲಿದ್ದ ಕೋಳಿ ಕುತ್ತರಿಯನ್ನಾದರೂ ಮರಿಗಳಿಗೆ ಮುಚ್ಚಿಟ್ಟು ಬರಬಾರದಿತ್ತೇ ನಿನಗೆ?''

''ಆಂ...! ಮತ್ತೆ...? ಕುತ್ತರಿ ಮುಚ್ಚಲು ನಾನೇನು ನಿನ್ನ ಮನೆಯ ಕೆಲಸದಾಳು ಎಂದು ತಿಳಿದಿಯಾ?'' ಎಂದು ಕೋಪದಲ್ಲಿ ಹೇಳಿಕೊಂಡು ಹೋದ. ಕೋಳಿಯ ನೆನಪಾದ ಕೂಡಲೇ ಅಂಗಳದತ್ತ ಓಡಿದಳು ರತ್ನ.

''ಗಂಗಕ್ಕನ ಮಗ ಊರಿಗೆ ಬಂದಿದ್ದಾನಂತೆ!''

''ಹೌದಾ, ನಿನಗಾರು ಹೇಳಿದ್ದು ರಂಗ ಬಂದಿದ್ದಾನೆಂದು?''

''ನನಗೆ ಆನಂದ ಹೇಳಿದ. ಅವನು ತಂದಿರುವ ವಸ್ತುಗಳು ಏಳು ಕಲಂಬಿ ತುಂಬುವಷ್ಟು ಇದೆಯಂತೆ. ಇದೆಲ್ಲ ರಂಗ ಕೆಲಸಕ್ಕಿದ್ದಲ್ಲಿಂದ ಕದ್ದು ತಂದದ್ದಂತೆ! ಅವನ ತಾಯಿಗೆ ಏರಿದ ದೊಡ್ಡಸ್ತಿಕೆಯಲ್ಲಿ ಈಗಲೇ ಕಣ್ಣು ಕಾಣುವುದಿಲ್ಲವಂತೆ''

''ರಂಗ ಏನೆಲ್ಲ ತಂದಿದ್ದಾನೆ ಎಂದು ನಾವು ನೋಡಿ ಬರುವನಾ? ಬಾ....ಬಾ...''

''ಬೇಡಪ್ಪಾ ಮನೆ ಬಾಗಿಲಿಗೆ ಹೋದವರಿಗೆ ಗಂಟಲು ಬಿರಿಯುವಂತೆ ಬೈತಾಳಂತೆ ಗಂಗ''

ರಂಗನ ಸುದ್ದಿ ತಿಳಿದಾಕ್ಷಣ ಹುಚ್ಚುಕಟ್ಟಿಕೊಂಡೇ ಓಡಿ ಬಂದ ಶಿವಣ್ಣ. ಹಲಸಿನ ಹಣ್ಣಿನ ತೊಳೆ ಬಿಡಿಸುತ್ತಿದ್ದ ರತ್ನ ಗಂಡನ ಮಗ್ಗುಲಲ್ಲೇ ಕುಳಿತಿದ್ದಳು. ಅಲ್ಲಿಯೇ ಬಂದು ಕುಳಿತು ಶಿವಣ್ಣ-

''ಏನು ಮಾರಾಯ ಬರುವವನು ಹೇಗೂ ಬಂದಿದ್ದಿ. ಆದರೆ ಒಂದೆರಡು ದಿನ ಮೊದಲೇ ಬರಲಿಕ್ಕಾಗಲಿಲ್ಲವಾ?''

ಅದೇನಪ್ಪಾ ಅಂತಹ ಅರ್ಜಂಟ್? ಹೌದಾ ಶಿವಣ್ಣ, ಹೇಳಿದ ಹಾಗೆ ನಾನು ಬಂದ ಸಂಗತಿ

ನಿನಗೆ ಹೇಗೆ ತಿಳಿಯಿತು ಮಾರಾಯ? ಸೊಳ್ಳೆಗಿಳ್ಳೆ ಏನಾದರೂ ಕಿವಿಯೊಳಗೆ ಹೊಕ್ಕು ಹೇಳಿತಾ ಹೇಗೆ?''

''ನನಗೆ ಮಾತ್ರ ಏನು ಇಡೀ ಊರಿನ ಎಲ್ಲರಿಗೂ ತಿಳಿದಿದೆ ನೀನು ಇಂದೇ ಬರುತ್ತಿ ಎಂದು''

''ಅರೆ ಇದೊಳ್ಳೆ ತಮಾಷೆ ಆಯಿತ್ತಲ್ಲಾ? ಅದ್ಹೇಗೆ ಊರವರಿಗೆ ತಿಳಿದಿತ್ತು? ನಾನೇನು ಯಾರಲ್ಲಿಯೂ ಹೇ...''

''ನಾನು ಹೇಳಿದ್ದು ನಿನಗೆ ತಮಾಷೆ ಎಂದಾಯಿತಲ್ಲಾ? ನಮ್ಮ ಊರಿಗೊಬ್ಬ ಸನ್ಯಾಸಿ ಬಂದಿದ್ದ ಸಂಗತಿ...''

''ಆಂ... ಅವನೊಬ್ಬ ಮತ್ಸರಿ ಆನಂದ ಬಂದು ಅಸೂಯೆ ಕಾರಿ ಹೋದ. ಈಗ ಮತ್ತೆ ನೀನು ಬಂದಿಯಾ? ಸರಿಯಾಯಿತು. ಈಗಿಂದೀಗಲೇ ಇವನನ್ನು ಎಳೆದುಕೊಂಡು ಹೋಗಿ ಶುರುಮಾಡು ಜುಗಾರಿ ಆಡಲು... ಪಾಪ ಇಷ್ಟರತನಕ ಕಣ್ಣೆದುರಿಲ್ಲದ ಯಾವು ಯಾವುದೋ ಊರಲ್ಲಿದ್ದು ಹೇಗೂ ಮನೆಯೊಳಗೆ ಬಂದು ಬಿಟ್ಟಿದ್ದಾನೆ. ಇನ್ನೀಗ ಮಡದಿಯ ಮುಖವನ್ನಾದರೂ ಅವನು ನೋಡಬಾರದೇ?'' ಗೆಳೆಯರ ಮಾತಿನ ನಡುವೆಯೇ ಕೋಪದಲ್ಲಿ ನಡುಗುತ್ತಾ ಹೇಳಿದಳು ಗಂಗಕ್ಕ. ರಂಗನನ್ನು ನೋಡಲು ಕಾತರಿಸುತ್ತಿದ್ದ ಶಿವಣ್ಣ ಅಲ್ಲಿ ಗಂಗಕ್ಕ ಇರುವುದನ್ನು ಮರೆತು ಬಂದಿದ್ದ. ಇನ್ನೂ ನಾನು ಇಲ್ಲಿ ಕುಳಿತೆ ಎಂದಾದರೆ ಈ ತಾಟಕಿಯ ಬಾಯಿಯಲ್ಲಿ ನನಗಂತೂ ಉಳಿಗಾಲ ಇಲ್ಲಪ್ಪಾ ಎಂದು ನೆನೆದ ಶಿವಣ್ಣ.

''ಬರ್ತೇನೆ ಮಾರಾಯ ನಮಗೆ ಸಮಯ ಸಿಕ್ಕಾಗ ಮಾತನಾಡುವಾ ಆಗಬಹುದಲ್ಲಾ?'' ಕುಳಿತಲ್ಲಿಂದ ಎದ್ದು ನಿಂತು ರಂಗನಿಗೆ ಹೇಳಿ ಹೊರಟ.

''ಏ... ನಿಲ್ಲಾ, ಎರಡು ತೊಳೆಯಾದರೂ ತಿಂದು ಹೋಗು ಮಾರಾಯ...''

''ಅದನ್ನು ತಿನ್ನಲು ಇನ್ನೊಮ್ಮೆ ಬರ್ತೇನೆ, ನನಗೀಗ ತಂದೆಯೊಟ್ಟಿಗೆ ದೇವಸ್ಥಾನಕ್ಕೆ ಹೋಗಲಿಕ್ಕಿದೆ'' ಗಂಗಕ್ಕನ ಮುಖ ನೋಡುತ್ತಾ ಹೊರಟ.

ರತ್ನ ಒಲೆಗೆ ಬೆಂಕಿ ಹಚ್ಚಿ ನೀರು ಕುದಿಸಿ ಮೂವರಿಗೆ ಚಾ ಮಾಡಿದಳು. ಅದನ್ನು ಲೋಟ ತುಂಬಾ ತುಂಬಿಸಿ ಗಂಡನಿಗೂ ಅತ್ತೆಗೂ ಕೊಟ್ಟಳು. ಮತ್ತೊಂದನ್ನು ತಾನು ತೆಗೆದುಕೊಂಡು ಅವರ ಜೊತೆ ಮಾತಿಗೆ ಕುಳಿತಳು. ಬಿಸಿಯಿಂದ ಕುದಿಯುತ್ತಿದ್ದ ಚಾ ತುಂಬಿದ ಲೋಟವನ್ನು ಸೆರಗಿನೊಟ್ಟಿಗೆ ಹಿಡಿದುಕೊಂಡು ಎಡ ಕೈಯ ಅಂಗೈಯಲ್ಲಿ ಇಟ್ಟುಕೊಂಡಳು ಗಂಗಕ್ಕ. ಮಗನೊಟ್ಟಿಗೆ ಸುಖ-ದುಃಖ ಹೇಳಿಕೊಂಡು ಬಿಸಿ ಚಾವನ್ನು ಬಾಯಿಯಿಂದ ಹೀರುತ್ತಾ ಹನಿ ಹನಿ ಕುಡಿದುಕೊಳ್ಳುತ್ತಾ ಇದ್ದಳು. ಅಷ್ಟರಲ್ಲಿ ಅವಳ ಹೆಸರು ಹೇಳಿ ಯಾರೋ ಕರೆಯುವುದು ಕೇಳಿಸಿತು. ಅದರೊಟ್ಟಿಗೆ ನಾಯಿಯೂ ಬೊಗಳಲು ಶುರುಮಾಡಿತು. ಕುಳಿತಲ್ಲಿಂದ ದಡಕ್ಕಂತ ಎದ್ದು ನಿಂತ ಗಂಗಕ್ಕ ಚಾವಡಿಯ ಬಾಗಿಲಿಗೆ ಬಂದು-

''ಯಾರದು ಕರೆಯುವುದು?'' ಎಂದು ಅತ್ತಿತ್ತ ನೋಡಿದಳು

''ನಾನು ಗಂಗಕ್ಕ ಕರೆದದ್ದು'' ನಾಯಿಯ ಭಯದಿಂದ ಬೇಲಿಯ ಬಳಿಯಿದ್ದ ಹುಣಸೆ ಮರದಡಿಯಲ್ಲಿ ನಿಂತಿದ್ದ ಅಬ್ಬುಕಾಕನ ಸೊಸೆ ಹೇಳಿದಳು.

''ಯಾಕೆಯಾ ಅಲ್ಲೇ ನಿಂತಿದ್ದಿ? ಬಾರೇ ಇಲ್ಲಿ?''

''ಬರಬಹುದಿತ್ತೇ, ಆದರೆ ನಾಯಿ ಉಂಟಲ್ಲಾ ಗಂಗಕ್ಕಾ? ನನಗೆ ಭಯವಾಗುತ್ತಪ್ಪಾ''

ಅದನ್ನು ಕಟ್ಟಿ ಹಾಕಿದೆಯಾ! ಆ ಬೊಗ್ರ ಬೊಗಳುವುದಲ್ಲದೆ ಯಾರಿಗೂ ಈ ತನಕ ಕಚ್ಚಿದ

ನಾಯಿಯಲ್ಲ. ನೀನೇನೂ ಹೆದರಬೇಡ ಬಾ ನಾನಿದ್ದೇನೆ. ಏನು ಬೇಕಿತ್ತು ನಿನಗೆ, ಅದನ್ನಾದರೂ ಹೇಳು ನೋಡುವಾ?''

''ಬೇರೇನೂ ಅಲ್ಲ ಗಂಗಕ್ಕಾ... ನನ್ನ ಅತ್ತೆಗೆ ದಿನ ತುಂಬಿ ಹೆರಿಗೆ ನೋವಿನಿಂದ ನರಳುತ್ತಿದ್ದಾರೆ.....'' ಪಾತುಮ್ಮ ನಿಂತಲ್ಲಿಂದಲೇ ಹೇಳಿದಳು.

''ಇದೊಳ್ಳೆ ಪಂಚಾತಿಗೆ ನಿನ್ನದು. ನಿನ್ನ ಅತ್ತೆಗೆ ನೋವು ಶುರುವಾದರೆ ನಾನೇನು ಮಾಡಬೇಕೇ? ಮೆಡ್‌ಬಾಯಿ ನೇತ್ರಮ್ಮ ಇಲ್ಲವೇನೆ? ಅವರನ್ನು ಕರೆದುಕೊಂಡು ಹೋಗುವುದು ಬಿಟ್ಟು ಇಲ್ಲಿಗೆ ಬಂದಿದ್ದಿಯಲ್ಲಾ? ಆಗಬಹುದು ನೀನೂ!?''

''ನೇತ್ರಮ್ಮ ಮನೆಯಲ್ಲಿಲ್ಲ ಗಂಗಕ್ಕ. ಅವರು ಬೆಳಿಗ್ಗೆನೇ ತರಕಾರಿ ಅಂಗಡಿಯ ದೊಂಪಣ್ಣನ ಮಗಳನ್ನು.ಹೆರಿಗೆ ಮಾಡಿಸಲೆಂದು ಹೋಗಿದ್ದಾರಂತೆ. ಹಾಗೆಂತ... ಅವರ ಮಗಳು ಹೇಳಿದಳು''

''ಹಾಗಾದರೆ ಬೆಳಿಗ್ಗೆ ಹೋದವರು ಇನ್ನೂ ಬಂದಿಲ್ಲವಾ?''

''ಇಲ್ಲ ಗಂಗಕ್ಕಾ ಅದಕ್ಕಾಗಿ ನನ್ನ ಮಾವ ಹೇಳಿದರು ಗಂಗಕ್ಕನನ್ನಾದರೂ ಬೇಗ ಒಮ್ಮೆ ಕರೆದುಕೊಂಡು ಬಾ ಎಂದು...''

''ಹೌದೇ... ಹೌದು, ನಿನ್ನ ಮಾವನಿಗೆ ಬೇರೇನು ಕೆಲಸ ಇದೆ ಹೇಳು ನೋಡುವಾ? ದೇವರು ಕೊಟ್ಟ ಆಯುಷ್ಯ ಪೂರಾ ಹೆಂಡತಿಯನ್ನು ಬಾಣಂತಿಯಾಗಿ ಇಟ್ಟುಕೊಳ್ಳುವುದರಲ್ಲಿಯೇ ಇದ್ದಾನಲ್ಲವೇ?''

''ನೀವು ಬರುತ್ತೀರಲ್ಲಾ ಗಂಗಕ್ಕ, ಅತ್ತೆ ಎಷ್ಟು ಕಾಯುತ್ತಾರೋ ಏನೋ? ಬನ್ನಿ ಗಂಗಕ್ಕ ಹೋಗುವ ನಾವು''

ಆಯಿತು... ಹೂಂ... ಮತ್ತೇನು ಮಾಡುವುದು? ಬಂದೆ ನಿಲ್ಲು ಒಂದು ಮಿನಿಟು. ನಿಮಗೆಲ್ಲರಿಗೂ ನಾನೊಬ್ಬಳಿದ್ದೇನೆ ದೇಯಿ ಬೈದೆತಿಯಂತೆ. ಗರ್ಭಿಣಿಯರು, ಬಾಣಂತಿಯರು ಎಂದು ಊರವರ ಚಾಕರಿ ಮಾಡಿದ್ದೇ ಬಂತು. ಇನ್ನು ನನ್ನ ಸೊಸೆಯ ಬಾಣಂತಿಯನ್ನು ಯಾವಾಗ ಮಾಡುತ್ತೇನೊ ಎಂದು ಗುಡಿಯಲ್ಲಿದ್ದ ಆ ದೇವರಿಗೇ ಗೊತ್ತು. ಮಣ ಮಣ ಮಂತ್ರ ಹಾಡುತ್ತಿದ್ದ ಗಂಗಕ್ಕ ಉಳಿದ್ದಿದ್ದ ಚಾವನ್ನು ಗಂಟಲಿಗೆ ಸುರಿದುಕೊಂಡು ಬೇಗ ನುಂಗಿದಳು. ಕೈಯಲ್ಲಿದ್ದ ಲೋಟವನ್ನು ಆಚೆ ಇಟ್ಟು ಒಳಗೆ ಹೋದಳು. ಅಲ್ಲಿ ಮಾತಿನಲ್ಲಿ ಮುಳುಗಿದ್ದ ಮಗನನ್ನೂ ಸೊಸೆಯನ್ನೂ ಕರೆದು-

''ಅಬ್ಬುಕಾಕನ ಮಡದಿಗೆ ಹೆರಿಗೆ ನೋವು ಪ್ರಾರಂಭವಾಗಿದೆಯಂತೆ. ನಾನೊಂದು ಗಳಿಗೆ ಹೋಗಿ ಬರುತ್ತೇನೆ. ಹೇಳಿದ ಹಾಗೆ ಆ ಶಿವಣ್ಣ ಏನಾದರೂ ಬಂದು ಕರೆದ ಎಂದು ಇನ್ನಾದರೂ ಇಸ್ಪೀಟ್ ಆಡಲು ಹೋಗಬೇಡ ಮಗಾ. ಆನಂದ ಬಂದರೂ ಬಾಗಿಲು ತೆಗೆಯಬೇಡ ಕೇಳಿತ ಮಗಾ?''

''ಆಯಿತಮ್ಮಾ ಇನ್ನು ನಿನ್ನನ್ನು ಬಿಟ್ಟು ಶಿವಣ್ಣ ದಮ್ಮಯ್ಯ ಹಾಕಿ ಕರೆದರೂ ನಾನು ಹೊಗುವವನ್ನಲ್ಲ. ನೀನೇನೂ ಹೆದರಬೇಡ ಹೋಗಿ ಬಾ ಆಯಿತಾ?''

''ಆಯಿತು ಮಗಾ ಬೇಗ ಬರುತ್ತೇನೆ. ರತ್ನಾ... ರಾತ್ರಿಗೆ ಅಡುಗೆ ಮಾಡುವಾಗ ಒಂದು ಪಾವು ಅಕ್ಕಿ ಜಾಸ್ತಿ ಹಾಕು ಮಗಾ ಅನ್ನಕ್ಕೆ ಏನು?'' ಸೊಸೆಗೆ ಹೇಳುವುದನ್ನು ಹೇಳಿದಳು. ಏನೋ ನೆನಪಿಸಿಕೊಂಡ ರತ್ನ-

''ಹೌದಾ ಅತ್ತೆ, ನೀವು ಬರುವಾಗ ಶಾಂತಪ್ಪರಲ್ಲಿಂದ ಎರಡು ದೀವಿಹಲಸು ಏನಾದರೂ

ತರಲಿಕ್ಕೆ ಆಗಬಹುದಾ ನಿಮಗೆ? ನಿಮ್ಮ ಮಗನಿಗೆ ಅದರ ಆಶೆಯಾಗಿದೆಯಂತೆ''

''ಈಗ ಎಲ್ಲಿ ಸಿಗುತ್ತದೆಯೇ ದೀವಿಹಲಸು. ನಾಳೆ ಪೇಟೆಗೆ ಹೋದರೆ ನೋಡುವ ನೀನು ಮೊಟ್ಟೆಯ ಸಾರು ಮಾಡು. ಇಂದು ಬೆಳಿಗ್ಗೆ ಅಕ್ಕಿಯ ಪಾತ್ರೆಯಲ್ಲಿ ನಾನು ತೆಗೆದಿಟ್ಟದ್ದು ಇರಬೇಕಲ್ಲಾ?''

''ಹೌದು ಉಂಟಲ್ಲಾ ಅದರಿಂದ ಎಷ್ಟು ಮೊಟ್ಟೆ ತೆಗೆಯಬೇಕು, ಮೂರು ಸಾಕಲ್ಲಾ?''

''ಎಷ್ಟು ಬೇಕಾದರೂ ತೆಗಿ ಮಗ, ಪಾತುಮ್ಮ ಅಲ್ಲಿ ಅವಸರ ಮಾಡುತ್ತಿದ್ದಾಳೆ? ನಾನು ಬರುತ್ತೇನೆ'' ಎಂದು ಮನೆಯ ಮೆಟ್ಟಿಲು ಇಳಿದಳು. ಈಗ ನಾಯಿಯ ಬೊಗಳಾಟ ಸ್ವಲ್ಪ ಕಡಿಮೆಯಾಯಿತು.

''ಬಾರೆ ಹೋಗುವಾ'' ಎಂದು ಅಬ್ಬುಕಾಕನ ಸೊಸೆಯನ್ನು ಕರೆದು ಅವಳೊಟ್ಟಿಗೆ ಹೋದಳು ಗಂಗಕ್ಕ.

ಅಮ್ಮ ಆಚೆ ಹೋಗಬೇಕಾದರೆ ರಂಗ ಎದ್ದು ಈಚೆ ಬಂದು ಮುಂದಿನ ಬಾಗಿಲು ಹಾಕಿ ಗಟ್ಟಿಯಾಗಿ ಅದರ ಚಿಲಕ ಸಿಕ್ಕಿಸಿ ಒಳಗೆ ನಡೆದ. ರತ್ನ ಕೈಗೆ ಗಡಿಯಾರ ಕಟ್ಟಿಕೊಂಡು ಹೊಸ ಸೀರೆ ಉಟ್ಟುಕೊಂಡು ಕನ್ನಡಿಯಲ್ಲಿ ಮುಖ ನೋಡುತ್ತಿದ್ದಳು. ತನ್ನ ಸೌಂದರ್ಯಕ್ಕೆ ತಾನೇ ಹುಚ್ಚಾದಳು. ಅವಳಿಗೆ ವೈಯ್ಯಾರದಲ್ಲಿ ಕಾಲೇ ನೆಲದಲ್ಲಿ ನಿಲ್ಲದಂತಾಯಿತು. ಹಿಂದಿನಿಂದ ಬಂದು ನಿಂತ ಗಂಡನನ್ನು ನೋಡಿ-

''ಹೌದಾ ಇವರೇ... ಬಿಸತ್ತಿ ಬಾಬು ಬಾರಿ ಒಳ್ಳೆಯದುಂಟಂತೆ ಸಂಪಕ್ಕ ಹೇಳಿದಳು ಇಂದೇ ಕೊನೆಯ ದಿನವಂತೆ. ಅತ್ತೆಯನ್ನೂ ಕರೆದುಕೊಂಡು ನಾವೂ ಹೋಗಿ ಬರುವನಾ?'' ವೈಯ್ಯಾರದಿಂದ ಮಡದಿ ಹೇಳಿದಾಗ ರಂಗನಿಗೂ ಅವಳನ್ನು ಮರುಳು ಮಾಡುವ ಎಂದಾಯಿತು.

''ಏನೇ ಬಾಬಣ್ಣ ಚೂರಿ ಹಿಡಿದು ಕೊಂಡು ನಾಳೆನೇ ಓಡಿಹೋಗುತ್ತಾನಂತಾ?''

''ಹಾಗಲ್ಲರೀ, ನಿಮ್ಮ ಬಾಬಣ್ಣನ ಸುದ್ದಿಯಲ್ಲ ನಾನು ಹೇಳಿದ್ದು'' ಬಿಸತ್ತಿ ಬಾಬು ' ಸಿನಿಮಾ ಬಂದಿದೆ ಎಂದು'

''ಓ... ಹಾಗೇನಾ? ನನಗೆ ಏನು ಗೊತ್ತು ಮಾರಾಯಿತಿ?''

'ಅರೇ! ಹೇಳಿದ ಹಾಗೆ ನನಗೀಗ ನೆನಪಾಯಿತು ನೋಡಿ. ಮನೆಗೆ ಬಂದ ಮೇಲೆ ಎಲ್ಲ ಸಂಗತಿಯನ್ನೂ ಹೇಳುತ್ತೇನೆ ಅಂತ ಅಂದು ನೀವು ಮಂಟಪದಲ್ಲಿ ಹೇಳಿದ್ದೀರಲ್ಲಾ? ಈಗ ಹೇಳುತ್ತೀರಾ?'' ಗಂಡನನ್ನು ತುದಿ ಕಣ್ಣಲ್ಲಿ ನೋಡುತ್ತಾ ವೈಯ್ಯಾರ ಮಾಡಿಕೊಂಡು ಕೇಳಿದಳು ರತ್ನ.

''ಹೇಳುತ್ತೇನೆ ತಾಳೇ, ನಿನಗೇನು ಇಷ್ಟು ಅವಸರ? ರಾಮಾಯಣದೊಟ್ಟಿಗೆ ಪಿಟ್ಕಾಯಣ ಹೇಳಿದ ಹಾಗೆ ಈ ಹೊತ್ತಲ್ಲೇ ನಿನಗೆ ವರದಿ ಒಪ್ಪಿಸಬೇಕೂಂತ ಇದೆಯಾ?'' ರಂಗ ಕುಸ್ಕ ಎಂದು ನಕ್ಕು ಮಡದಿಯ ಸೊಂಟ ಹಿಡಿದ. ಹೊಸ ಮದುಮಗಳಂತೆ ನಾಚಿ ಅವಳ ಮುಖ ಕೆಂಪೇರಿತು. ರಂಗ ರತ್ನಳನ್ನು ಕರೆದುಕೊಂಡು ಒಳಗಿನ ಕೋಣೆಗೆ ಹೋದ!

ಲೋಹಿಯಾ ಪ್ರಕಾಶನ, ಬಳ್ಳಾರಿ
ISBN 81-87731-61-3 ಬೆಲೆ : ರೂ. 30

ಬ್ಯಾರಿ ಭಾಷೆಯಲ್ಲೇ ಮೊತ್ತ ಮೊದಲಿಗೆ ಕಥಾಸಂಕಲನ ಬಂದಿದ್ದರೆ ಅದು ಮುಹಮ್ಮದ್ ಕುಳಾಯಿಯವರ ಪೆರ್ನಾಲ್. ರಾಜ್ಯ ಪ್ರಶಸ್ತಿ ಪಡೆದ ಕನ್ನಡ ಚಲನಚಿತ್ರ ಮುನ್ನುಡಿಯಲ್ಲಿ ಇವರು ತಮ್ಮನ್ನು ತೊಡಗಿಸಿಕೊಂಡವರು ಮತ್ತು ಅದರಲ್ಲಿ ಪಾತ್ರವನ್ನೂ ಮಾಡಿದವರು. ಬ್ಯಾರಿ ನಾಟಕಗಳ ರಚನೆ, ನಿರ್ದೇಶನ, ಅಭಿನಯ ಮಾಡಿರುವುದಲ್ಲದೆ ಬ್ಯಾರಿ ನಾಟಕಗಳ ಹಲವು ಧ್ವನಿಸುರುಳಿಗಳ ನಿರ್ಮಾಣ ಕೂಡ ಮಾಡಿದ್ದಾರೆ.

ಇವರ **ಕುಚ್ಚಿಕಾಡಿನ ಕಪ್ಪು ಹುಡುಗ** ಕೃತಿಗೆ ಶಿವಮೊಗ್ಗದ ಕರ್ನಾಟಕ ಸಂಘದ ಪ್ರಶಸ್ತಿಯೂ, ಕದನ ಕುತೂಹಲ ಕೃತಿಗೆ ಪಿ. ಲಂಕೇಶ್ ರಾಜ್ಯ ಪ್ರಶಸ್ತಿಯೂ ಮತ್ತು ತುಂಬೆ ಮಂಗಳೂರು ನಿರತಸಾಹಿತ್ಯ ಸಂಪದದಿಂದ ರಾಜ್ಯಮಟ್ಟದ **ನಿರತಸಾಹಿತ್ಯ ಪ್ರಶಸ್ತಿಯೂ** ಸಿಕ್ಕಿರುತ್ತದೆ. ತಮ್ಮ ಪ್ರಥಮ ಕೃತಿ **ಶಿಕ್ಷಣ ಮತ್ತು ಮುಸ್ಲಿಮರು** ಇದರ ಮೂಲಕ ಕುಳಾಯಿಯವರು ಈ ತಲೆಮಾರಿನ ವೈಚಾರಿಕ ಚಿಂತನೆಯ ಪ್ರಮುಖ ಲೇಖಕರಾಗಿದ್ದಾರೆ.

ಧರ್ಮ, ದೇವರು, ಅಮ್ಹೂರು, ಸ್ವಾಮಿ, ಸಂನ್ಯಾಸಿಯಂತಹ ಹೆಸರಿನಲ್ಲಿ ಜನರನ್ನು ಮಂಗಟಿಸಿ, ಮರುಳು ಮಾಡಿ, ಭಯ ಹುಟ್ಟಿಸಿ ಹೇಗೆ ನಿರಂತರ ಶೋಷಣೆ ಮಾಡಲಾಗುತ್ತಿದೆ ಎನ್ನುವುದನ್ನು ತುಂಬ ರೋಚಕವಾಗಿ, ಒಂದಿಷ್ಟು ವೈಚಾರಿಕವಾಗಿ, ವೈಜ್ಞಾನಿಕವಾಗಿ ಆಲೋಚನೆ ಮಾಡಲು ಎಡೆ ಮಾಡಿಕೊಡುವ ರೀತಿಯಲ್ಲಿ ವಿನೋದದ ವಿಡಂಬನೆಯ ಜಾಡು ಹಿಡಿದು ಕಲಾತ್ಮಕವಾಗಿ ಕಾದಂಬರಿಯಲ್ಲಿ ಕಟ್ಟಿಕೊಡುವ ಪ್ರಯತ್ನವನ್ನು ಯಜ್ಞಾವತಿ ಕೇಶವ ಕಂಗೆನ್ ಮೂಲ ಕಾದಂಬರಿಯಲ್ಲಿ ಮಾಡಿದ್ದಾರೆ.

ಇದೇ ಮಣ್ಣಿನ ಸೊಗಡನ್ನು ಉಳಿಸಿಕೊಂಡು ಅತ್ಯಂತ ಸಮರ್ಪಕವಾಗಿ, ಸಮರ್ಥವಾಗಿ ಅಚ್ಚುಕಟ್ಟಾಗಿ ಲೇಖಕ ಶ್ರೀ ಮುಹಮ್ಮದ್ ಕುಳಾಯಿಯವರು ಇದನ್ನು ಕನ್ನಡ ಭಾಷೆಗೆ ಭಟ್ಟಿ ಇಳಿಸಿದ್ದಾರೆ. ತುಳುವಿನಂತಹ ಪ್ರಾದೇಶಿಕ ಭಾಷೆಯ ಇಂತಹ ಕೃತಿಯೊಂದು ಸೋದರ ಭಾಷೆಯೊಂದಕ್ಕೆ ಅನುವಾದಗೊಂಡಾಗ ಕರ್ನಾಟಕ ಸಂಸ್ಕೃತಿಯ ಪರಂಪರೆಯಲ್ಲಿ ತುಳು ಸಂಸ್ಕೃತಿ ಅನಾವರಣಗೊಳ್ಳಲು ಸಾಧ್ಯವಾಗುತ್ತದೆ.

– ಡಾ. ವಾಮನ ನಂದಾವರ

